ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 26 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 70 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

'ಆತಿಥ್ಯ ರತ್ನ' ಪ್ರಶಸ್ತಿ ಪುರಸ್ಕೃತ ನಾರಾಯಣಗೌಡರಿಗೆ ಸನ್ಮಾನ

ಮೈಸೂರು, ಮೈಸೂರಿಗರ ಹಿತಾಸಕ್ತಿ ಕಾಪಾಡುವ ಕಾರ್ಯ ಸಾಧನೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಹೋಟೆಲ್ ಮಾಲೀಕರ ಸಂಘದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಆತಿಥ್ಯ ರತ್ನ ಪುರಸ್ಕೃತ ಸಿ.ನಾರಾಯಣಗೌಡ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ. 25– ಮೈಸೂರು ಪಾರಂಪರಿಕ ನಗರದಲ್ಲಿ ನಿರಂತರವಾಗಿ ಪ್ರವಾಸೋದ್ಯಮಕ್ಕೆ ಒತ್ತಾಸೆ, ಹೋಟೆಲ್ ಮಾಲೀಕರು ಹಾಗೂ ಉದ್ಯಮಿಗಳ ಹಿತಾಸಕ್ತಿ ಕಾಯುತ್ತಾ ಬಂದಿರುವ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಅವರಿಗೆ ರಾಜ್ಯಮಟ್ಟದ ಆತಿಥ್ಯ ರತ್ನ ಪ್ರಶಸ್ತಿ ಬಂದಿರುವುದು ಹೆಮ್ಮೆಯ ಸಂಗತಿ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಹೋಟೆಲ್ ಮಾಲೀಕರ ಸಂಘದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ನಾರಾಯಣಗೌಡರ ಅಭಿನಂದಿಸಿ ಮಾತನಾಡಿದ ಅವರು, ವಿಶ್ವ ಪ್ರವಾಸೋದ್ಯಮ ದಿನಾಚರಣೆ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹೀಗೆ ಸಾಕಷ್ಟು ಸಮಾಜಮುಖಿ ಸಂದೇಶ ಸಾರುವ ಕಾರ್ಯಕ್ರಮಗಳನ್ನು ಮೈಸೂರಿನಲ್ಲಿ ಯಶಸ್ವಿಯಾಗಿ ನೆರವೇರಿಸುವುದರ ಜೊತೆಗೆ ಸ್ಥಳೀಯ ಸಂಘ ಸಂಸ್ಥೆಗಳು, ಉದ್ಯಮಿಗಳು ಹಾಗೂ ಜಿಲ್ಲಾಡಳಿತದೊಂದಿಗೆ ಸೇತುವೆಯಾಗಿ ಕೆಲಸ ಮಾಡಿ ಮೈಸೂರಿನ ಹಿರಿಮೆಯನ್ನ ಹೆಚ್ಚಿಸುವಲ್ಲಿ ಸಿ.ನಾರಾಯಣಗೌಡರು ಪ್ರಮುಖ ಪಾತ್ರ ವಹಿಸಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಹೋಟೆಲುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಸಿ ಸಾಮಗ್ರಿಗಳು ಮತ್ತು ವೈದ್ಯಕೀಯ ನೆರವು, ಕಾರ್ಮಿಕ ಇಲಾಖೆಯಿಂದ ಸಹಾಯಧನ ಕಲ್ಪಿಸಿದ್ದರು. ಆರ್ಥಿಕವಾಗಿ ತೊಂದರೆಯಲ್ಲಿದ್ದ ಸಣ್ಣಪುಟ್ಟ ಹೋಟೆಲು ಮಾಲೀಕರಿಗೆ ಯಾವುದೇ ತೊಂದರೆ ಆಗದಂತೆ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡಿ ನೂರಾರು ಮಂದಿಯನ್ನು ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸಿದ್ದಾರೆ ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮೈಸೂರಿನ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವಲ್ಲಿ ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಪಾತ್ರ ಮಹತ್ವವಾದುದು. ಕಳೆದ 2 ದಶಕಗಳಿಂದ ಮೈಸೂರು ದಸರಾ ಮತ್ತು ಹೊಸ ವರ್ಷ ಆಚರಣೆ, ಆಷಾಢ, ದೀಪಾವಳಿ, ಬೇಸಿಗೆ ಮಾಸದ ಸಂದರ್ಭದಲ್ಲಿ ಲಕ್ಷಾಂತರ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಸ್ಥಳೀಯರಿಗೆ ಉದ್ಯೋಗ ಸೃಷ್ಟಿ ಮತ್ತು ಮೈಸೂರಿನ ಪರಂಪರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಹಕಾರ ನೀಡಿ ಸಾಕಷ್ಟು ಸಂಘ ಸಂಸ್ಥೆಗಳಿಂದ ಸರ್ಕಾರಕ್ಕೆ ಸಿಎಸ್‌ಆರ್ ನೆರವು ತಂದುಕೊಡುವುದರ ಜೊತೆಗೆ ಹಲವಾರು ಯೋಜನೆಗಳಲ್ಲಿ ಮಾರ್ಗದರ್ಶನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಹೋಟೆಲ್ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಜಿ.ಕೆ.ಶೆಟ್ಟಿ, ನಿಕಟಪೂರ್ವ ರಾಜ್ಯಾಧ್ಯಕ್ಷ ಎಂ.ರಾಜೇಂದ್ರ, ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಕಾರ್ಯದರ್ಶಿ ಎ.ಆರ್.ರವೀಂದ್ರಭಟ್, ಸುರೇಶ್ ಉಗ್ರಯ್ಯ, ಅಶೋಕ್ ಜಿ, ಸುಬ್ರಹ್ಮಣ್ಯ ತಂತ್ರಿ, ಅರುಣ್ ಕೆ.ಎಸ್, ಭಾಸ್ಕರ್ ಶೆಟ್ಟಿ ಕೆ, ಪಿ ಎಸ್.ಶೇಖರ್, ಕಿರಣ್, ಮಾ.ವಿ. ರಾಮ ಪ್ರಸಾದ್ ಹಾಗೂ ನೂರಾರು ಹೋಟೆಲ್ ಉದ್ಯಮಿಗಳು ಉಪಸ್ಥಿತರಿದ್ದರು.

ರೈತರು ಬೆಳೆಯ ವಿವರ ನೋಂದಾಯಿಸಿಕೊಳ್ಳಿ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರೈತರ ಬೆಳೆಗಳ ಸಮೀಕ್ಷೆಯ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು,ಜೂ.25– ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗಳ ಸಮೀಕ್ಷೆಯನ್ನು ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಮೂಲಕ ಖಾಸಗಿ ನಿವಾಸಿ ಅಥವಾ ರೈತರೆ ಸ್ವತಃ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳೆ ಸಮೀಕ್ಷೆ ಯೋಜನೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ, ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಪರ್ ಡ್ರಾಪ್ ಮೋರ್ ಕ್ರಾಪ್, ಸೂಕ್ಷ್ಮ ನೀರಾವರಿ ಯೋಜನೆಯಡಿ ಹಾಗೂ ರಸಗೊಬ್ಬರಗಳ ಸರಬರಾಜು ಹಾಗೂ ಪೂರೈಕೆ ಬಗ್ಗೆ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಯೋಜನೆಯಡಿ ಕಡ್ಡಾಯವಾಗಿ ಎಲ್ಲಾ ಬೆಳೆ ಹಾನಿಗೆ ಪರಿಹಾರಧನ, ಕನಿಷ್ಠ ಬೆಂಬಲ ಬೆಲೆ ನಿಗದಿ, ಆರ್‌ಟಿಸಿ/ಪಹಣಿಯಲ್ಲಿ ಬೆಳೆ ವಿವರ ದಾಖಲಿಸಲು, ರೈತರಿಗೆ ರಾಷ್ಟ್ರೀಯ ಮತ್ತು ಗ್ರಾಮೀಣ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಮಂಜೂರು ಮಾಡಲು, ಬೆಳೆ ವಿಮಾ ಯೋಜನೆ–ತಾಕು ಹಂತದ ಬೆಳೆ ಪರಿಶೀಲನೆ ಹಾಗೂ ಇನ್ನಿತರೆ ಯೋಜನೆಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ ಎಂದು ತಿಳಿಸಿದರು.

2025–26ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಜಾರಿಗೊಳಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ 18 ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಬಹುದಾಗಿದೆ. ಸದರಿ ಯೋಜನೆಯಡಿ ಕಡ್ಡಾಯವಾಗಿ ಎಲ್ಲಾ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗೆ ವಿಮೆಗೆ ನೋಂದಾಯಿಸಿಕೊಳ್ಳಿ ಎಂದು ತಿಳಿಸಿದರು.

ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಪರ್ ಡ್ರಾಪ್ ಮೋರ್ ಕ್ರಾಪ್, ಸೂಕ್ಷ್ಮ ನೀರಾವರಿ: ಸದರಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಘಟಕ (ಹನಿ ಮತ್ತು ತುಂತುರು ನೀರಾವರಿ)ಗಳನ್ನು ಶೇ.90ರ ಸಹಾಯಧನದಲ್ಲಿ ವಿತರಿಸಲು ಅವಕಾಶವಿದ್ದು, ಮೈಸೂರು ಜಿಲ್ಲೆಗೆ ಒಟ್ಟು 670.81 ಲಕ್ಷಗಳ ಗುರಿ ಹೊಂದಿದ್ದು, ರೈತರು ಸದುಪಯೋಗಪಡಿಸಿಕೊಳ್ಳಬಹುದು.

ರಸಗೊಬ್ಬರಗಳ ಸರಬರಾಜು ಹಾಗೂ ಪೂರೈಕೆ: ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿ ಯೂರಿಯಾ 16128.5 ಟನ್, ಡಿ.ಎ.ಪಿ 3333 ಟನ್, ಎಂ.ಓ.ಪಿ 3337 ಟನ್, ಎನ್.ಪಿ.ಕೆ ಕಾಂಪ್ಲೆಕ್ಸ್ 30334 ಟನ್, ಎಸ್.ಎಸ್.ಪಿ 2017 ಟನ್, ಒಟ್ಟು 55872 ಟನ್ ರಸಗೊಬ್ಬರ ದಾಸ್ತಾನಿದ್ದು, ಯಾವುದೇ ರಸಗೊಬ್ಬರಕ್ಕೆ ಪ್ರಸ್ತುತ ಕೊರತೆ ಇರುವುದಿಲ್ಲ ಎಂದರು.

ನಾಳೆ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ

ಮೈಸೂರು, ಜೂ.25(ಜಿಎ)–ಒಕ್ಕಲಿಗರ ಸಂಘ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಜೂ27ರಂದು ಮೈಸೂರಿನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಯೋಜಿಸಲಾಗಿದೆ ಎಂದು ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಪ್ರಶಾಂತ್‌ಗೌಡ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಆಲನಹಳ್ಳಿಯಲ್ಲಿರುವ ಕೆಂಪೇಗೌಡ ವೃತ್ತದ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುತ್ತದೆ. ನಂತರ 9.30ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ನಂದಿ ಕಂಬಕ್ಕೆ ಮೈಸೂರು ಆದಿಚುಂಚನಗಿರಿ ಶಾಖಾಮಠದ ಸೋಮೇಶ್ವರನಾಥ ಸ್ವಾಮೀಜಿ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಮೆರವಣಿಗೆಯಲ್ಲಿ ಮಂಗಳೂರಿನಿಂದ ವಿವಿಧ ಕಲಾ ತಂಡಗಳು ಪಾಲ್ಗೊಳ್ಳಲಿವೆ. ಬಳಿಕ ಮೆರವಣಿಗೆ ಕಲಾಮಂದಿರ ತಲುಪಲಿದ್ದು, ಮಧ್ಯಾಹ್ನ 12.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡರ ಬಗ್ಗೆ ಹಿರಿಯ ವೈದ್ಯರಾದ ಡಾ.ಎಸ್.ಪಿ.ಯೋಗಣ್ಣ ಮಾತನಾಡಲಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಅಲ್ಲದೆ, ವಿವಿಧ ಸಮುದಾಯಗಳಿಗೆ ಸೇರಿದ 30ಕ್ಕೂ ಸಾಧಕರನ್ನು ಗೌರವಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಕೆಂಪೇಗೌಡ, ಯಮುನಾ, ರವಿಕುಮಾರ್, ನಾಗಣ್ಣ, ಗುರುರಾಜ್ ಇದ್ದರು.

ಇಂದು ರಕ್ತದಾನ ಶಿಬಿರ



ಮೈಸೂರು, ಜೂ. 25– ಶ್ರೀ ಚಾಮುಂಡೇಶ್ವರಿ ಬಳಗದ ವತಿಯಿಂದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಅಂಗವಾಗಿ ನಾಳೆ (ಜೂ.26) ಬೆಳಗ್ಗೆ 10.30ರಿಂದ ಮಧ್ಯಾಹ್ನ 2ರವರೆಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ನ್ಯೂ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಹರೀಶ್‌ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿಜಯಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ (ಸುಬ್ಬಣ್ಣ), ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಚಾಮುಂಡೇಶ್ವರಿ ಬಳಗದ ಸಂಚಾಲಕ ರವಿಚಂದ್ರ ತಿಳಿಸಿದ್ದಾರೆ.

ಇನ್ನು ಮುಂದೆ ಹೀಗೆ ಆದರೆ ಸಹಿಸಲಾಗದು



ಬೆಂಗಳೂರು: ಇನ್ನು ಮುಂದೆ ಶಾಸಕರ ಇಂತಹ ನಡವಳಿಕೆಗಳನ್ನು ಸಹಿಸಲಾಗದು. ನೀವು ಕೂಡಲೇ ಅವರನ್ನು ಕರೆದು ಮಾತನಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕಾ ಸಂದೇಶ ನೀಡಿದೆ.

ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ ಬುಧವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಈ ವೇಳೆ, ಕಾಂಗ್ರೆಸ್ ಶಾಸಕ ಬಿಆರ್ ಪಾಟೀಲ್ ಹಾಗೂ ಇತರರು ನೀಡಿರುವ ಬಹಿರಂಗ ಹೇಳಿಕೆಗಳ ಬಗ್ಗೆ ಪ್ರಸ್ತಾಪವಾಗಿದೆ. ಬಿಆರ್ ಪಾಟೀಲ್ ಎರಡನೇ ಬಾರಿ ಈ ರೀತಿ ಹೇಳಿಕೆ ನೀಡಿದ್ದಾರೆ. ನೀವು ಅವರನ್ನು ಕರೆದು ಮಾತನಾಡಿ. ಮುಂದೆ ಇದೇ ರೀತಿ ಆದರೆ ಸಹಿಸಲು ಸಾಧ್ಯವಿಲ್ಲ. ಇನ್ನೊಮ್ಮೆ ಬಹಿರಂಗ ಹೇಳಿಕೆ ನೀಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕೆ ನೀಡಿದೆ.

ಜೂ.28ಕ್ಕೆ ಸಾಧಕರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಜೂ.25(ಜಿಎ)– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಜೂ. 28 ರ ಬೆಳಗ್ಗೆ 9.30ಕ್ಕೆ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಪ್ರಯುಕ್ತ ಹಾಗೂ ಅವರು ಜಾರಿ ಮಾಡಿದ ಮೀಸಲಾತಿಗೆ 106 ವರ್ಷ ತುಂಬಿದ ಹಿನ್ನೆಲೆಯಲ್ಲಿ ಸಾಧಕರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ವೇದಿಕೆ ರಾಜ್ಯಾಧ್ಯಕ್ಷೆ ಹೆಚ್.ಎಲ್.ಯಮುನಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರಿಗೆ ಪದ್ಮಭೂಷಣ ಯಶೋಧರಮ್ಮ ದಾಸಪ್ಪ ಪ್ರಶಸ್ತಿ, ಸಾಧಕ ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು.

ಕಾರ್ಯಕ್ರಮವನ್ನು ಕೃಷಿ ಸಚಿವ ಚೆಲುವರಾಯ ಸ್ವಾಮಿ ಉದ್ಘಾಟಿಸಲಿದ್ದಾರೆ. ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ದರಾಮ ಚೈತನ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ರಘು ಕೌಟಿಲ್ಯ ಉಪನ್ಯಾಸ ನೀಡುವರು. ಶಾಸಕ ಕೆ.ಹರೀಶ್‌ಗೌಡ, ಶ್ರೀಧರ ರಾಜ್ ಅರಸ್, ಕೆ.ವಿ.ಶ್ರೀಧರ್, ವಸಂತ ಕುಮಾರ್, ಡಾ.ಎಸ್.ಪಿ.ಯೋಗಣ್ಣ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ವಿಜಯಕುಮಾರ್, ಪದ್ಮಾವತಿ, ನಾಗರಾಜ್, ಸ್ವಾಮಿಗೌಡ ಇದ್ದರು.

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ನಿರ್ಬಂಧಿಸಲು ಮನವಿ

ಮೈಸೂರು, ಜೂ.25(ಜಿಎ)– ಚಾಮುಂಡಿಬೆಟ್ಟಕ್ಕೆ ಆಷಾಢ ಶುಕ್ರವಾರದಂದು ಲಕ್ಷಾಂತರ ಮಂದಿ ಭಕ್ತರು ಭೇಟಿ ನೀಡುವ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ಪ್ರಾಧಿಕಾರ ಕಟ್ಟುನಿಟ್ಟಾಗಿ ಪ್ಲಾಸ್ಟಿಕ್ ಬಳಕೆ ನಿರ್ಬಂಧಿಸಬೇಕು. ರಾಸಾಯನಿಕ ಕುಂಕುಮಕ್ಕೂ ಅವಕಾಶ ನೀಡಬಾರದೆಂದು ಪರಿಸರ ಉಳಿವಿಗಾಗಿ ಕ್ರಿಯಾ ಸಮಿತಿ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸದಸ್ಯ ಪರಶುರಾಮೇಗೌಡ ಈ ವಿಷಯ ತಿಳಿಸಿ, ಈಗಾಗಲೇ ಬೆಟ್ಟದಲ್ಲಿ ಏಕಬಳಕೆ ಪ್ಲಾಸ್ಟಿಕ್ ನಿಷೇಧಿಸಿ ಆದೇಶಿಸಲಾಗಿದೆ. ಆದರೆ ಇದು ಕಟ್ಟುನಿಟ್ಟಾಗಿ ಜಾರಿಗೊಳ್ಳಬೇಕು. ಜೊತೆಗೆ ಆಷಾಢ ಶುಕ್ರವಾರಗಳ ಸಮಯದಲ್ಲಿ ಮಾತ್ರವಲ್ಲ, ವರ್ಷವಿಡೀ ಈ ಕೆಲಸ ನಡೆಯಬೇಕಿದೆ ಎಂದರು.

ಸಮಿತಿ ಸದಸ್ಯೆ ಲೀಲಾ ವೆಂಕಟೇಶ್ ಮಾತನಾಡಿ, ಕಳೆದ ಹಲವಾರು ವರ್ಷದಿಂದ ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ವಿರುದ್ಧ ವಿವಿಧ ಪರಿಸರ ಸಂಘಟನೆಗಳು ಅರಿವು ಮೂಡಿಸುತ್ತಿವೆ. ಇದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಹಲವರು ಸಮ್ಮತಿಸಿ ಪ್ಲಾಸ್ಟಿಕ್ ತಟ್ಟೆ, ಲೋಟ ಬದಲು ಮನೆಯಿಂದಲೇ ಸ್ಟೀಲ್ ಬಾಟಲ್, ತಟ್ಟೆ, ಲೋಟಗಳನ್ನು ತರುವುದಕ್ಕೆ ಮುಂದಾಗಿರುವುದು ಸ್ವಾಗತಾರ್ಹ ಎಂದರು.

ಮತ್ತೋರ್ವ ಸದಸ್ಯರಾದ ಲೀಲಾ ಶಿವಕುಮಾರ್ ಮಾತನಾಡಿ, ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು ಬೆಟ್ಟಕ್ಕೆ ಹೋಗದಂತೆ ಆರಂಭದಲ್ಲಿಯೇ ತಡೆಯಬೇಕಿದೆ ಎಂದು ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಹಾಗೂ ಸಮಿತಿ ಸದಸ್ಯರೂ ಆದ ಕಮಲ್ ಗೋಪಿನಾಥ್ ಮಾತನಾಡಿ, ಬೆಟ್ಟದಲ್ಲಿ ಮಳಿಗೆಗಳಿಗೆ ಟೆಂಡರ್ ನೀಡುವಾಗಲೇ ಪ್ಲಾಸ್ಟಿಕ್ ಬಳಸುವಂತಿಲ್ಲ ಎಂದು ನಿರ್ಬಂಧಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಗಂಟಯ್ಯ, ವೆಂಕಟಯ್ಯ, ಗೋಕುಲ್ ಮತ್ತಿತರರು ಉಪಸ್ಥಿತರಿದ್ದರು.

ಕೆನರಾ ಬ್ಯಾಂಕಿನಿಂದ ಸಂಚಾರ ಸೂಚನಾ ಫಲಕ



ಆಷಾಢ ಶುಕ್ರವಾರದ ಪ್ರಯುಕ್ತ ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯಿಂದ ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆ ಮತ್ತು ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ 100 ಸಂಚಾರ ಸೂಚನಾ ಫಲಕ ನೀಡಲಾಯಿತು. ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಎಸ್.ರಾಜಶೇಖರ್, ಇನ್ಸ್‌ಪೆಕ್ಟರ್ ರಮೇಶ್, ಲಿಂಗರಾಜು, ಯೋಗೇಶ್ ಈ ವೇಳೆ ಉಪಸ್ಥಿತರಿದ್ದರು.

ನಿಧನ



ಜಯಮ್ಮ

ಮೈಸೂರು,ಜೂ.25–ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ, ಯೋಗಪಟು ಎನ್.ಅನಂತ ಅವರ ಮಾತೃಶ್ರೀ ಶ್ರೀಮತಿ ಜಯಮ್ಮ (78) ಇಂದು ಬೆಳಗ್ಗೆ ನಿಧನರಾದರು. ಇಬ್ಬರು ಪುತ್ರಿ, ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.06.2025 ಗುರುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಆರ್ದ್ರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯುವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ಸ್ವಸ್ತಿವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹ, ನಾಂದಿ, ಕಲಶ ಸ್ಥಾಪನೆ, ಧ್ವಜಾರೋಹಣ, ಸ್ಥಳ: ಚಾರಿಟಬಲ್ ಟ್ರಸ್ಟ್ ಆವರಣ, ವಾಣಿ ವಿಲಾಸ ಮೊಹಲ್ಲಾ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗಳಿಗೆ ಚಿಕಿತ್ಸೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ನೀವ್ ಅಭಿಯಾನ ಕಾರ್ಯಾಗಾರ, ಸಂಪನ್ಮೂಲ ವ್ಯಕ್ತಿಗಳು : ಅದಾನಿ ಸಿಮೆಂಟ್ ಕಂಪನಿಯ ರೀಜನಲ್ ಟೆಕ್ನಿಕಲ್ ಸರ್ವೀಸ್ ಮ್ಯಾನೇಜರ್ ಹಿತೇಶ್ ಪ್ರಸಾದ್, ಉಪಸ್ಥಿತರು : ಎನ್‌ಐಇ ಅಧ್ಯಕ್ಷ ಡಾ. ಎಂ.ಎಸ್. ರಂಗನಾಥ್, ಕಾರ್ಯದರ್ಶಿ ಎಸ್.ಬಿ. ಉದಯಶಂಕರ್, ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮಾ, ಡಾ. ಎನ್.ಸಿ. ಬಾಲಾಜಿ, ಶ್ರೀಮತಿ ಹೆಚ್. ಹೇಮಾ, ಡಾ. ಪುನೀತ್ ಬಿ. ಕೋಟಗಿ, ಸ್ಥಳ: ಸಿಆರ್‌ಸಿ ಸೆಮಿನಾರ್ ಹಾಲ್, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಸಿಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30 ರಿಂದ.

■ **ಶ್ರೀ ನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು :** ವಿಶ್ವ ಪರಿಸರ ದಿನಾಚರಣೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ವಿಭಾಗೀಯ ಅಧಿಕಾರಿ ಡಾ. ಟಿ.ಕೆ. ರವಿ, ನೋಡಲ್ ಅಧಿಕಾರಿ ಎಂ. ಮಹೇಶ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್, ದೀಪಾ ಶಾಲೆ :** ವಿದ್ಯಾರ್ಥಿ ಸಂಘದ ಹಾಗೂ ದೀಪಾ ಹಸಿರು ಪಡೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಲೆಫ್ಟಿನೆಂಟ್ ಕೊಲೊನಿಯಲ್ ಆರ್.ಎಚ್. ಸಂದೀಪ್, ದೀಪಾ ಹಸಿರು ಪಡೆ ಉದ್ಘಾಟನೆ : ಪರಿಸರ ಪ್ರೇಮಿ ರಮೇಶ್, ಅಧ್ಯಕ್ಷತೆ : ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರೂಪಾನಗರ, ಬೆಳಗ್ಗೆ 11ಕ್ಕೆ.

■ **ಸೇಂಟ್ ಫಿಲೋಮಿನಾ ಕಾಲೇಜು :** ಪದವೀಧರರ ದಿನಾಚರಣೆ, ಅಧ್ಯಕ್ಷತೆ : ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ರೆ. ಡಾ.ಬರ್ನಾರ್ಡ್ ಮೊರಾಸ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ರವಿ ಜೆ.ಡಿ. ಸಾಲ್ಡಾನಾ, ಡಾ. ನೂರ್ ಮುಬಾಶೀರ್, ಜ್ಞಾನ ಪ್ರಗಾಸಮ್, ದೇವಿಡ್ ಸಗಾಯ್‌ರಾಜ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸೇನಾ ಪಡೆ :** ಕೆಂಪೇಗೌಡರ 516ನೇ ಜಯಂತಿ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಎನ್.ಎಂ. ನವೀನ್ ಕುಮಾರ್, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್. ಜಯಪ್ರಕಾಶ್, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ. ಗಂಗಾಧರ್, ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಎಂ.ಬಿ. ಮಂಜೇಗೌಡ, ಜಿಲ್ಲಾ ಗೌರವಾಧ್ಯಕ್ಷ ಡಾ. ಸಿ.ವೈ.ಶಿವೇಗೌಡ, ಪ್ರಶಾಂತ್‌ಗೌಡ, ಮಡ್ಡೀಕೆರೆ ಗೋಪಾಲ್, ಸ್ಥಳ: ಅಗ್ರಹಾರ ಸರ್ಕಲ್, ಮಧ್ಯಾಹ್ನ 12ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಬಸವ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮ, ಬಸವ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಬಂಡಳ್ಳಿ ದೊಡ್ಡಮಠದ ಮಠಾಧ್ಯಕ್ಷ ಡಾ. ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ : ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ. ಬಿ.ಆರ್. ನಟರಾಜ ಜೋಯ್ಸ್, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಪ್ರಧಾನ ನುಡಿ : ಜೆಎಸ್‌ಎಸ್ ಸಂಸ್ಕೃತ ಕಾಲೇಜು ವಿಶ್ರಾಂತ ಪ್ರಾಂಶುಪಾಲ ಡಾ. ಸುನಂದ ಭೂಪಾಳಿ, ಮುಖ್ಯ ಅತಿಥಿಗಳು: ಚಲನಚಿತ್ರ ನಟ ಸುಪ್ರೀತ್, ಗೋಲ್ಡನ್ ಟಿ. ಸುರೇಶ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12.30ಕ್ಕೆ.

■ **ಬಸವ ಮಾರ್ಗ ಫೌಂಡೇಷನ್, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ :** ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಅಂಗವಾಗಿ ಬೀದಿ ನಾಟಕ, ಜಾಗೃತಿ ಜಾಥಾ ಮತ್ತು ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಬಸವ ಮಾರ್ಗ ಫೌಂಡೇಷನ್ ಅಧ್ಯಕ್ಷ ಎಸ್. ಬಸವರಾಜು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮಹೇಶ್, ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಚಂದ್ರು, ಸ್ಥಳ: ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣ, ಬೆಳಗ್ಗೆ 10.30 ರಿಂದ.

■ **ಪಾತಿ ಫೌಂಡೇಷನ್ :** ಚಲನಚಿತ್ರ ಗೀತೆಗಳ ಕಾರ್ಯಕ್ರಮ, ವಿಶೇಷ ಅಂಧ ಮಕ್ಕಳಿಗೆ ಸಹಾಯಧನ, ಎಸ್‌ಎಸ್‌ಎಲ್‌ಸಿ, ಪಿಯುಸಿ ಟಾಪರ್‌ಗಳಿಗೆ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು : ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಆಳ್ವಾರ್ ಸ್ವಾಮೀಜಿ, ನಾಗರಾಜ್ ಭೈರಿ, ಸ್ಥಳ : ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್. ಸಿ. ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಿ. ಪುಷ್ಪಲತಾ, ವ್ಯಾಖ್ಯಾನ : ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, 8.50 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಸಿ. ಸರೋಜ ಮತ್ತು ಸಿ. ಲಲಿತಾ–ದ್ವಂದ್ವ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ–ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಕರುಣಾಕರ್, ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, ಲಕ್ಷ್ಮೀನಾಗರಾಜ್ ಕುವೆಂಪುರವರ ರಚನೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಹಳ್ಳಿಹಾಡು, 4.30 ಕನ್ನಡ ಭಾರತಿ ಕರ್ನಾಟಕದ ಶ್ರಮಣ ಧಾರೆಗಳು ಕುರಿತು ಸಂಶೋಧಕರಾದ ಪ್ರೊ. ರಹಮತ್ ತರೀಕೆರೆ ಅವರೊಂದಿಗೆ ಸಂದರ್ಶನ. ಸಂದರ್ಶಕರು –ಡಾ. ಮೈಸೂರು ಉಮೇಶ್, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿಗಳು ಹಾಗೂ ಮೌಲ್ಯವರ್ಧನೆ ಕುರಿತು ಸಂವಾದ ಭಾಗವಹಿಸುತ್ತಾರೆ–ನಾಗಮಂಗಲ ತಾಲೂಕು ಗೊಲ್ಲರ ಕೊಪ್ಪಲು ಗ್ರಾಮದ ರೈತಸಿರಿ ಉತ್ಪಾದಕ ಸಂಸ್ಥೆಯ ಅಧ್ಯಕ್ಷರಾದ ಯಶೋಧಮ್ಮ ಎನ್. ಪಿ. ಹಾಗೂ ಕಾರ್ಯದರ್ಶಿ ಎಂ.ಕೆ. ಅನುಸೂಯ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಅಂತರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನಾಚರಣೆಯ ಸಂಬಂಧವಾಗಿ ವ್ಯಸನ ಮುಕ್ತ ಭಾರತ ನಿರ್ಮಾಣದಲ್ಲಿ ಯುವಜನತೆಯ ಪಾತ್ರ ಕುರಿತು ಮಾತುಕತೆ. ಭಾಗವಹಿಸುತ್ತಾರೆ–ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವಿದ್ಯಾರ್ಥಿನಿಯರಾದ ಮೇಘನಾ ಎಂ.ಪಿ., ಸಿಂಚನ ಕೆ.ಎನ್., ರೂಪಾ ಕೆ. ಎನ್. ಮತ್ತು ಚಿತ್ರಶ್ರೀ ಎಂ., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಭಾರ್ಗವಿ ಕೆ– ಹಾಡುಗಾರಿಕೆ, 10.00 ನಾಟಕ 'ಋಣ', ನಿರ್ದೇಶನ–ಚೆನ್ನಪ್ಪ ಬೆಂಗೇರಿ, 10.30 ಸವಿನೆನಪು


ಕರ್ನಾಟಕ ರಾಜ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಜನಸೇವಾ ವೇದಿಕೆ (ರಿ.)
ವತಿಯಿಂದ
ಮರಿಸ್ವಾಮಿ
ಜೈಸ್ವಾಮಿ
ಡಿ ಸ್ವಾಮಿಗೌಡ
ವೈ ಕೆ ಮಂಜುನಾಥ
ಬೀರ್ವಾಳ್ ಚಿಕ್ಕಣ
ಗಂಧನ ಹಳ್ಳಿ ವೆಂಕಟೇಶ
ಅಭಿಷೇಕ್
ಮಾದೇಗೌಡ
ಶಂಕರ್ ಹುಯಿಲಾಳು
ಸ್ವಾಮಿಗೌಡ
ಕೆಂಡಗಣ್ಣೀಗೌಡ
ಜಿನ್ನಹಳ್ಳಿ ರಾಜನಾಯಕ
ಗುರುಸ್ವಾಮಿ
ವೀರೇಗೌಡ
ಪರಶಿವಮೂರ್ತಿ
ಕಿರಣ್ ಮಂಡ್ಯ
ಕೆ.ಬಿ. ಮಾಹದೇವಪ್ಪ
ಪುಟ್ಟೀಗೌಡ
ರಾಘವೇಂದ್ರ
ಸಣ್ಣಸ್ವಾಮಿ
ಸಿದ್ದರಾಜು
ನಾಗೇಶ್
ಶಿವನಾಗಪ್ಪ ಬಳ್ಳಾರಿ
ಸೋಹೇಬ್ ಅಹ್ಮದ್
ಗಗನ್
ವಿಧಾನ ಪರಿಷತ್ ಸದಸ್ಯರು, ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರಾದ
ಡಾ. ಯತೀಂದ್ರ ಸಿದ್ದರಾಮಯ್ಯ
ಅವರಿಗೆ
ಜನುಮ ದಿನದ ಶುಭಾಶಯಗಳು
ಬೈಪಾಸ್ ಮಂಜುನಾಥ್
ರಾಜ್ಯಾಧ್ಯಕ್ಷರು
ಕರ್ನಾಟಕ ರಾಜ್ಯ
ಡಾ.ಯತೀಂದ್ರ ಸಿದರಾಮಯ್ಯ
ಜನಸೇವಾ ವೇದಿಕೆ (ರಿ.)
8105367007

ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಪ್ರೀತಿಯಿಂದ ಗಂಡನ ತಲೆ ಒತ್ತುತ್ತಾ) ಮದುವೆ ಆಗೋಕೆ ಮುಂಚೆ ತಲೆನೋವು ಬಂದಾಗ ಯಾರು ತಲೆ ಒತ್ತುತ್ತಿದ್ದರು?

ಗಂಡ : 'ಮದುವೆ ಆಗೋಕೆ ಮುಂಚೆ ತಲೆನೋವೇ ಬರ್ತಾ ಇರಲಿಲ್ಲ.

ಮೈಸೂರು ಮಿತ್ರ

ಗುರುವಾರ, 26 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಪ್ರಪಂಚ ನೀ ಹೇಗೆ ಇದ್ದರೂ ದೂಷಿಸುತ್ತದೆ. ಶ್ರೀರಾಮನಂತಿದ್ದರು ಸತ್ಯ ಹರಿಶ್ಚಂದ್ರನಂತಾದರೂ.. ಆದ್ದರಿಂದ ಲೋಕ ಮೆಚ್ಚಿಸುವ ಹುಚ್ಚು ಬೇಡ! ಸದಾಕಾಲ ನೀನು ನೀನಾಗಿರು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲು ಮಾರಿದ ಹಣ ಹಾಲಿಗೆ, ನೀರು ಮಾರಿದ ಹಣ ನೀರಿಗೆ

ನಿಮ್ಮ ಪತ್ರಗಳು

ಮೈಸೂರು ಮಹಾನಗರ ಪಾಲಿಕೆಗೆ ಅಭಿನಂದನೆಗಳು



ಮಾನ್ಯರೆ,

ತಿ.ನರಸೀಪುರ ಮುಖ್ಯ ರಸ್ತೆಯ ಲಲಿತ ಮಹಲ್ ಬಳಿಯ ಚಾಟ್ ಸ್ಟ್ರೀಟ್ ಪಕ್ಕ ಕುಡಿಯುವ ನೀರಿನ ಕೊಳವೆಯಲ್ಲಿ ಅರ್ಧ ಕ್ಯುಸೆಕ್ಸ್‌ನಷ್ಟು ನೀರು ಸುಮಾರು ಒಂದು ವರ್ಷದಿಂದ ಸೋರಿಕೆಯಾಗಿ ವ್ಯರ್ಥವಾಗುತ್ತಿತ್ತು. ಇದರಿಂದ ಮುಂಜಾನೆ ವಾಯುವಿಹಾರಿಗಳಿಗೆ ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ಬಹಳವೇ ತೊಂದರೆ ಆಗುತ್ತಿತ್ತು. ಮಿಗಿಲಾಗಿ ಶುದ್ಧೀಕರಿಸಿದ ನೀರು ಅನಾವಶ್ಯಕವಾಗಿ ಹರಿದು ಹೋಗುತ್ತಿದ್ದುದಲ್ಲದೆ, ಕಮಾನು ಗೇಟಿನ ರಸ್ತೆ ಬದಿಯ ಮನೆಗಳಿಗೂ ತೊಂದರೆ ಆಗುತ್ತಿತ್ತು. ಎಂದಿನಂತೆ ಕಳೆದ ಮಂಗಳವಾರ (ಜೂನ್ 24) ಮುಂಜಾನೆ ವಾಯುವಿಹಾರಕ್ಕೆ ಹೋದ ಸಂದರ್ಭದಲ್ಲಿ ನಗರಪಾಲಿಕೆಯ ಮುಖ್ಯ ಆಯುಕ್ತರಿಗೆ ನೀರಿನ ಸೋರಿಕೆಯ ವಿಡಿಯೋ ಕಳುಹಿಸಿ ದುರಸ್ತಿ ಮಾಡುವಂತೆ ಕೋರಲಾಗಿ, ಅಂದೇ ಕ್ರಮ ವಹಿಸಿ ಮರುಸಂದೇಶವನ್ನು ಕಳುಹಿಸಿದರು. ವರ್ಷದಿಂದ ನನೆಗುದಿಗೆ ಬಿದ್ದಿದ್ದ ಒಂದು ಸಣ್ಣ ಕೆಲಸವನ್ನು ಸಾರ್ವಜನಿಕ ಹಿತಾಶಕ್ತಿಯಿಂದ ಮನವಿ ಮಾಡಿದ ದಿನವೇ ಮಾಡಿದ್ದು ಶ್ಲಾಘನೀಯ. ಸಿದ್ದಾರ್ಥ ಬಡಾವಣೆ ಹಾಗೂ ಬೀದಿ ಬದಿ ವ್ಯಾಪಾರಿಗಳ ಪರವಾಗಿ ಮಹಾನಗರ ಪಾಲಿಕೆಗೆ ಧನ್ಯವಾದಗಳು.

ಹಾಗೆಯೇ ಸ್ಪೋರ್ಟ್ಸ್ ಕ್ಲಬ್‌ನ ಎದುರಿಗಿರುವ ಪಾರ್ಕುಗಳಲ್ಲಿ ವಾಯುವಿಹಾರಿಗಳಿಗೆ ಅಗತ್ಯ ಇರುವ ಬಹಳಷ್ಟು ಕಾಮಗಾರಿಗಳು ಆಗಬೇಕಾಗಿವೆ. ಹೆಚ್ಚಾಗಿ ಹಿರಿಯ ನಾಗರಿಕರೇ ಬರುವ ಇಲ್ಲಿ ವಿಕಲಚೇತನರು ಹಾಗೂ ಹಿರಿಯರು, ತೀರಾ ಅವೈಜ್ಞಾನಿಕವಾಗಿ ಇರುವ ಗೇಟುಗಳ ಮೂಲಕ ಪ್ರವೇಶಿಸಲು ಬಹಳವೇ ಕಷ್ಟಪಡುತ್ತಿದ್ದಾರೆ. ಮಕ್ಕಳ ಜಾರುಬಂಡೆ ಮತ್ತು ಉಯ್ಯಾಲೆಯ ಬಳಿ ಮರಳಿನ ಹಾಸು ಇಲ್ಲದೆ ಕೈಕಾಲುಗಳಿಗೆ ಗಾಯಗಳಾಗುತ್ತಿದೆ. ಇರುವ ಬೆಂಚುಗಳು ಸಾಕಾಗುತ್ತಿಲ್ಲ. ಕೆಲವು ಶಿಥಿಲವಾಗಿವೆ. ದಯಮಾಡಿ ಪರಿಶೀಲಿಸಿ ತ್ವರಿತ ಕ್ರಮವಹಿಸುವಂತೆ ಸುತ್ತಲಿನ ನಾಲ್ಕಾರು ಬಡಾವಣೆಗಳ ನಾಗರಿಕರ ಪರವಾಗಿ ವಿನಂತಿಸುತ್ತೇನೆ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಸರ್ಕಾರಿ ಉದ್ಯೋಗ ವಯೋಮಿತಿ ಹೆಚ್ಚಿಸಿ!

ಮಾನ್ಯರೆ,

ಕೋವಿಡ್ ಅಪ್ಪಳಿಸಿದ ಪರಿಣಾಮ ಕಳೆದ ಐದಾರು ವರ್ಷಗಳಿಂದ ರಾಜ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಅಂದು ಆಳ್ವಿಕೆ ನಡೆಸಿದ ಸರ್ಕಾರದಿಂದ ಹಿಡಿದು ಇವತ್ತಿನ ಸರ್ಕಾರದವರೆಗೂ ಅಭ್ಯರ್ಥಿಗಳ ಉದ್ಯೋಗ ವಯೋಮಿತಿ ಮೀರಿ ಸಂಕಷ್ಟ ಎದುರಾಗಿದೆ.

ಪ್ರಸ್ತುತ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಸಮೀಕ್ಷೆ ನಡೆಯುತ್ತಿದೆ. ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಒಳಗೊಂಡ ಜಾತಿ ಗಣತಿ ಕಾರ್ಯ ನಡೆಯಲಿದೆ ಎಂದು ಸರ್ಕಾರ ದೃಢಪಡಿಸಿದ್ದು, ನೇಮಕಾತಿ ಸಂಬಂಧ ಇನ್ನಷ್ಟು ಗ್ರಹಣ ಹಿಡಿಯುವುದನ್ನು ತಳ್ಳಿ ಹಾಕುವಂತಿಲ್ಲ.

ಸರ್ಕಾರಿ ಕೆಲಸ ದೊರೆತರೆ ಜೀವನದ ಭದ್ರತೆ ಸಿಕ್ಕಂತೆ ಎಂದು ಹಲವಾರು ವರ್ಷಗಳಿಂದ ಪರಿಶ್ರಮ ಪಡುತ್ತಿರುವ ಅಭ್ಯರ್ಥಿಗಳ ಗೋಳು ಹೇಳತೀರದಾಗಿದೆ. ಸದ್ಯ, ರಾಜ್ಯದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು ಸಾಮಾನ್ಯ ವರ್ಗ–35, ಹಿಂದುಳಿದ ವರ್ಗ–38, ಪ.ಜಾತಿ–ಪ.ಪಂಗಡ–40 ವರ್ಷ ವಯೋಮಿತಿ ನಿಗದಿಪಡಿಸಲಾಗಿದ್ದು, ದೇಶದ ಬಹುತೇಕ ರಾಜ್ಯಗಳಲ್ಲಿ ಸದರಿ ವಯೋಮಿತಿಯ ಇದಕ್ಕಿಂತ ಹೆಚ್ಚಿದೆ. ಆದ ಕಾರಣ ಲಕ್ಷಾಂತರ ಅಭ್ಯರ್ಥಿಗಳ ಹಿತದೃಷ್ಟಿಯಿಂದ ನಮ್ಮ ರಾಜ್ಯದಲ್ಲೂ ವಯೋಮಿತಿ ಹೆಚ್ಚಿಸಲು ಸರ್ಕಾರ ಮುಂದಾಗಲಿ.

–ಅನಿಲ್ ಕುಮಾರ್, ನಂಜನಗೂಡು.

ಆಷಾಢ ಮಾಸದಲ್ಲಿ ಪ್ಲಾಸ್ಟಿಕ್‌ಗೆ ಕಡಿವಾಣ ಹಾಕಿ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ಮುಖ್ಯ ತಾಣ ಎಂದರೆ ಚಾಮುಂಡಿಬೆಟ್ಟ, ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆಯಲು ಎಲ್ಲಾ ಕಡೆಯಿಂದಲೂ ಜನರು ಬರುವುದು ಸಹಜ. ಅದರ ಜೊತೆಗೆ ಆಷಾಢ ಮಾಸದಲ್ಲಿ ಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬೆಟ್ಟದ ಪಾದದ ಮೆಟ್ಟಿಲುಗಳು ಮಾರ್ಗವಾಗಿ ಮತ್ತು ಮುಖ್ಯ ಮಾರ್ಗದಲ್ಲಿ ಬರುವರು. ಬೆಟ್ಟಕ್ಕೆ ಬರುವ ಜನರು ಪ್ಲಾಸ್ಟಿಕ್ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ನೀರಿನ ಬಾಟಲ್ ಮತ್ತು ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ಎಸೆಯದೇ ಕಸದ ಬುಟ್ಟಿ ಉಪಯೋಗಿಸಬೇಕು. ಇದಲ್ಲದೆ ಆಷಾಢ ಮಾಸವಾಗಿರುವುದರಿಂದ ಬೆಟ್ಟಕ್ಕೆ ಬರುವ ಜನರಿಗೆ ಸರಿಯಾದ ಮೂಲಸೌಕರ್ಯ ಒದಗಿಸಬೇಕು ಮತ್ತು ಪ್ಲಾಸ್ಟಿಕ್‌ಗೆ ಕಡಿವಾಣ ಮಾಡುವುದರ ಜೊತೆಗೆ ಬೆಟ್ಟದ ಸ್ವಚ್ಛತೆಯನ್ನು ಕಾಪಾಡಬೇಕು.

–ಕಿಶೋರ್ ಸಿ. ಮೈಸೂರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಗಿನ್ನಿಸ್ ದಾಖಲೆ

ಮಾನ್ಯರೆ,



ಮೈಸೂರಿನಲ್ಲಿರುವ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ 10836 ಬೋನ್ಸಾಯ್ ವೃಕ್ಷಗಳ ಸಂಗ್ರಹಣೆ ಮಾಡುವ ಮೂಲಕ ವಿಶ್ವದಲ್ಲೇ ಅತೀ ಹೆಚ್ಚು ಬೋನ್ಸಾಯಿ ವೃಕ್ಷಗಳಿರುವ ವನವೆಂಬ ಹೆಗ್ಗಳಿಕೆಗೆ ಪಾತ್ರವಾಗಿ ಗಿನ್ನಿಸ್ ದಾಖಲೆ ಮಾಡಿ ಪ್ರಮಾಣ ಪತ್ರ ಪಡೆದಿರುವುದು ತುಂಬಾ ಶ್ಲಾಘನೀಯ. ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ 2006ರಲ್ಲಿ ಸ್ಥಾಪನೆಯಾದ ವಿಶ್ವ ವಿಖ್ಯಾತ ಕಿಷ್ಕಿಂದಾ ಮೂಲಿಕಾ ಬೊನ್ಸಾಯಿ ವನವು ಅಪಾರ ಪ್ರವಾಸಿಗರು ಹಾಗೂ ಭಕ್ತರ ಮನವನ್ನು ಸೂರೆಗೊಂಡು, ಅತಿ ಅಪರೂಪದಲ್ಲಿ ಅಪರೂಪವಾದ ಬೊನ್ಸಾಯಿ ವೃಕ್ಷಗಳನ್ನು ಥೈವಾನ್, ಇಂಗ್ಲೆಂಡ್, ಜಪಾನ್ ಮತ್ತು ನಾನಾ ಕಡೆಗಳಿಂದ ಸಂಗ್ರಹಿಸಿರುವುದು ಸ್ವಾಗತಾರ್ಹ. ಗಿನ್ನಿಸ್ ವಿಶ್ವ ದಾಖಲೆಯ ಪ್ರಮಾಣ ಪತ್ರ ಪಡೆದಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಅಭಿನಂದನಾರ್ಹರು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ವಿದ್ಯೆಯೊಂದಿಗೆ ವಿನಯವಂತಿಕೆ ಇರಬೇಕಲ್ವಾ...!

ಬದುಕೆಂದರೆ ಹೂದೋಟವಲ್ಲ, ಇರುವುದರೊಂದಿಗೆ ಇಲ್ಲದಿರುವುದರ ಹುಡುಕಾಟ. ಇಲ್ಲದಿರುವುದನ್ನು ಹಂಬಲಿಸಿ ಪಡೆಯುವುದಕ್ಕಾಗಿ ಜೇಬನ್ನು ಬರಿದಾಗಿಸಿಕೊಳ್ಳಬೇಕಾದ ಅವಕಾಶ. ಈಗಾಗಲೇ ಜೇಬು ಬರಿದಾಗಿದ್ದರೆ ಬಲ್ಲವರ ಜೇಬಿನಲ್ಲಿರುವ ಹಣಕ್ಕಾಗಿ ಸಾಲದ ನಡಿಗೆ. ಸಾಲವೆಂಬ ಶೂಲಕ್ಕೆ ಸಿಗದೆ ಬದುಕನ್ನು ನಿರ್ವಹಿಸುವ ಜಾಣ್ಮೆ ಇದ್ದವರಿಗಷ್ಟೆ ನೆಮ್ಮದಿಯ ನಿಟ್ಟುಸಿರು. ಜೀವನ ಮಾಡುವುದಕ್ಕೆ ಹಣ ಇಲ್ಲದಿದ್ದರೆ ಸಾಲ ತೆಗೆಯಬೇಕು, ಆಗಲಿಲ್ಲ ಅಂದ್ರೆ ಅದರ ನೆರಳಿಗೆ ಬೀಳದೆ ಅದರ ಹೊರತಾಗಿಯಾದರೂ ಬದುಕುವುದನ್ನು ಕಲಿಯಬೇಕು. ಹಾಸಿಗೆ ಇರುವಷ್ಟೇ ಕಾಲು ಚಾಚೋಕೆ ಆಗುತ್ತಾ ಸರ್? ಸ್ವಲ್ಪ ಪ್ರಯತ್ನ ಮಾಡಲೇಬೇಕು. ಲಕ್ಷ ರೂಪಾಯಿ ಮತ್ತೆ ಸಾಲ ಆದರೂ ಪರವಾಗಿಲ್ಲ ಆದರೆ ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು. ಪ್ರತಿಯೊಬ್ಬ ಪೋಷಕರ ಕರ್ತವ್ಯ ಇದೇ ಅಲ್ವಾ ಸರ್?

ಮೊದಲೇ ಸಿಕ್ಕ ಸಿಕ್ಕ ಕಡೆ ಸಾಲಮಾಡಿಕೊಂಡ ಆತ್ಮೀಯರ ಈ ಮಾತುಗಳನ್ನು ಕೇಳಿ ನಗಬೇಕೊ! ಅಳಬೇಕೊ! ಒಂದು ತಿಳಿಯಲಿಲ್ಲ. ನಿಜ, ಅವರು ಹೇಳಿದಾಗೆ ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕು, ವಿದ್ಯಾವಂತರನ್ನಾಗಿ ಮಾಡಬೇಕು, ಒಂದೊಳ್ಳೆಯ ಕೆಲಸ ತೆಗೆದುಕೊಳ್ಳುವ ಹಾಗೆ ಮಾಡಬೇಕು, ಅವರ ಕಾಲಿನ ಮೇಲೆ ಅವರು ನಿಲ್ಲುವ ಹಾಗೆ ಮಾಡಬೇಕು, ಇವೆಲ್ಲವನ್ನು ಪೂರೈಸುವುದು ಪೋಷಕರ ಕರ್ತವ್ಯ. ಈ ಪ್ರಯತ್ನದಲ್ಲಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಮೀರಿ ಸಾಲ ಮಾಡಿ ಓದಿಸುವವರ ಪೋಷಕರಿಗೇನೂ ಕಡಿಮೆ ಇಲ್ಲ!

ನಿಜ ಇದರಲ್ಲಿ ಯಾವುದೇ ಅನುಮಾನ ಇಲ್ಲ. ಮಕ್ಕಳನ್ನು ಲಕ್ಷ ರೂಪಾಯಿ ಕೊಟ್ಟು ಒಳ್ಳೆಯ ಶಾಲೆಗೆ ಸೇರಿಸಿ, ಶಿಸ್ತಿನ ಸಿಪಾಯಿಗಳನ್ನಾಗಿ, ವಿದ್ಯಾವಂತರನ್ನಾಗಿ ಮಾಡಬೇಕೆಂಬುದು ಪ್ರತಿಯೊಬ್ಬ ಪೋಷಕರ ಕನಸು. ಆದರೆ ನಮಗೆ ಬೇಕಿರುವುದು ಕೇವಲ ವಿದ್ಯಾವಂತರು ಮಾತ್ರವೇ?! ಈ ಪ್ರಶ್ನೆ ನನ್ನನ್ನು ಯಾವಾಗಲೂ ಕಾಡುತ್ತದೆ.

ಪ್ರಸ್ತುತ ದಿನಗಳಲ್ಲಿ ಪದವಿಗಳನ್ನು ಪಡೆಯುವ ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತಿರುವುದು ಸಂತಸದ ವಿಚಾರ, ಇದರಲ್ಲಿ ಯಾವುದೇ ಸಂದೇಹವಿಲ್ಲ.ಭವ್ಯ ಭಾರತದ ಮಕ್ಕಳು ಕೇವಲ ವಿದ್ಯಾವಂತರಾದರೆ ಸಾಲದು! ಮಕ್ಕಳನ್ನು ವಿನಯವಂತರನ್ನಾಗಿಸುವುದು, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ಮಾಡುವುದು ಕೂಡ ಶಿಕ್ಷಣದ ಒಂದು ಕರ್ತವ್ಯವಾಗಬೇಕು.

ಗುರು, ಹಿರಿಯರಿಗೆ ಗೌರವ ನೀಡುವ ಗುಣ

ಸಾಲು ಸಾಲು ಪದವಿಗಳನ್ನು ಪಡೆದ ಮಾತ್ರಕ್ಕೆ ದೊಡ್ಡ ವ್ಯಕ್ತಿಯಾಗಲಾರರು. ಗುರು, ಹಿರಿಯರಿಗೆ ಗೌರವವನ್ನು ನೀಡುವ ಗುಣವನ್ನು ಬೆಳೆಸಿಕೊಳ್ಳುವುದನ್ನು ಮೊದಲು ಕಲಿಯಬೇಕು. ನಮ್ಮ ಜೀವನಕ್ಕೆ ಬೇಕಾದ ಸದ್ಗುಣಗಳನ್ನು ತಿಳಿಸಿಕೊಡುವ ಗುರುಗಳಿಗೆ ಗೌರವವನ್ನು ನೀಡುವುದನ್ನು ಕಲಿಯಬೇಕು. ಕೇವಲ ಪಠ್ಯವನ್ನಲ್ಲದೇ ಬದುಕಿನ ಬಗ್ಗೆ ಬೋಧನೆ ನೀಡುವ ಗುರುವನ್ನು ಪೂಜ್ಯ ಭಾವನೆಯಿಂದ ನೋಡುವುದು, ಅವರಿಗೆ ಸಲ್ಲಿಸಬೇಕಾದ ಗೌರವವನ್ನು ನೀಡುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವಾಗಿರುತ್ತದೆ. ಸಂಬಳ ತೆಗೆದುಕೊಳ್ಳುತ್ತಾರೆ. ಪಾಠ ಮಾಡುತ್ತಾರೆ. ಅದರಲ್ಲೇನು ವಿಶೇಷ? ಎಂಬಂತಹ ಮನೋಧೋರಣೆಗಳು ಬದಲಾಗಬೇಕು. ಶಿಷ್ಯನಾದವನು ಸಮಾಜದಲ್ಲಿ ಉತ್ತಮ ಸ್ಥಾನ ತಲುಪಿದರೆ ಸಂತೋಷಪಡುವ, ನನ್ನ ಶಿಷ್ಯ ಎಂದು ಮನತುಂಬಿ ಸಂತಸ ಪಡುವ ವ್ಯಕ್ತಿತ್ವ ಹಾಗೂ ನಿಷ್ಕಲ್ಮಶ ಗುಣ ಇರುವುದು ಗುರುವಿಗೆ ಮಾತ್ರ.ಅಂತಹ ಗುರುಗಳಿಗೆ ನಾವು ನೀಡುವ ಗೌರವವೇ ನಿಜವಾದ ದಕ್ಷಿಣೆಯಾಗಿರುತ್ತದೆ.

ಕೆಲವೊಮ್ಮೆ ಬಸ್, ರೈಲುಗಳಲ್ಲಿ ಪ್ರಯಾಣ ಮಾಡುವಾಗ ಗಮನಿಸುವ ವಿಚಾರ ಎಂದರೆ ವಯಸ್ಸಾದವರು, ಗರ್ಭಿಣಿಯರು, ಹಿರಿಯರು ನಿಂತಿರುತ್ತಾರೆ. ಕಿರಿಯರು ತಮಗೂ ಈ ಲೋಕಕ್ಕೂ ಸಂಬಂಧವೇ ಇಲ್ಲವೆನ್ನುವ ಹಾಗೇ ಜಂಗಮವಾಣಿಯಲ್ಲಿ ಮೈಮರೆತು ನೋಡಿಯು ನೋಡದ ಹಾಗೆ ತಲ್ಲೀನರಾಗಿರುತ್ತಾರೆ. ಎಲ್ಲರೂ ಹೀಗೆ ಮಾಡುತ್ತಾರೆ ಎಂದೇನಲ್ಲ. ಆದರೆ ಬಹುತೇಕರು ಹೀಗೆ ಮಾಡುವುದನ್ನು ನೋಡಿರುವುದರಿಂದ ಬೇಸರವಾಗುತ್ತದೆ. ಎಷ್ಟೇ ಪದವಿಗಳನ್ನು ಪಡೆದುಕೊಂಡರೂ ನಿಮ್ಮ ಈ ಗುಣ ಬದಲಾಗದಿದ್ದರೆ ನೀವು ಕಲಿತ ಶಿಕ್ಷಣ, ಪಡೆದ ಪದವಿ ವ್ಯರ್ಥವೆಂದೇ ನನ್ನ ಭಾವನೆ. ಮಾನವೀಯತೆ, ವಿನಯವಂತಿಕೆಗಳಿಲ್ಲದ ವಿದ್ಯೆಗೆ ಯಾವುದೇ ಮನ್ನಣೆಯಾಗಲೀ, ಬೆಲೆಯಾಗಲೀ ಇರುವುದಿಲ್ಲ.

ಹೆತ್ತವರನ್ನು ನೋಡಿಕೊಳ್ಳುವ ಗುಣ

ಲಕ್ಷಗಟ್ಟಲೇ ಹಣವನ್ನು ನೀಡಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ ವಿದೇಶಗಳಲ್ಲಿ ನೌಕರಿ ಪಡೆದು, ಲಕ್ಷ, ಕೋಟಿಗಟ್ಟಲೇ ಹಣವನ್ನು ಸಂಪಾದನೆ ಮಾಡುತ್ತಾ ಆಸ್ತಿ, ಅಂತಸ್ತುಗಳನ್ನು ಮಾಡಿ ತಮ್ಮ ಹೆತ್ತವರನ್ನು ವೃದ್ಧಾಶ್ರಮಗಳಲ್ಲಿ ಬಿಟ್ಟು ತಾವು ಅವರಿಂದ ದೂರ ಉಳಿದು ಸಂತೋಷಪಡುವ ಜನರಿಗೇನು ಕಡಿಮೆ ಇಲ್ಲ. ಹೆತ್ತ ತಾಯಿಯನ್ನು, ಸಾಕಿ ಸಲಹಿದ ತಂದೆಯನ್ನು ನೋಡಿಕೊಳ್ಳದಿದ್ದರೆ ನಾವು ಪಡೆದ ವಿದ್ಯೆಗೆ, ಪಡೆದ ಪದವಿಗಳ ಮೌಲ್ಯ ಶೂನ್ಯ ಎಂದೇ ಅರ್ಥ. ತಮ್ಮ ಮಕ್ಕಳನ್ನು ಪ್ರೀತಿಯಿಂದ ಬೆಳೆಸುವುದು ತಂದೆ ತಾಯಂದಿರ ಕರ್ತವ್ಯ ಹೇಗೋ ಹಾಗೇ ಪ್ರತಿ ಯೊಬ್ಬ ಮಕ್ಕಳು ತಮ್ಮ ತಂದೆ ತಾಯಂದಿಯರನ್ನು ನೋಡಿಕೊಳ್ಳುವುದು ಅಷ್ಟೇ. ಹಿಂದೆ ನೈತಿಕವಾಗಿತ್ತು. ಅದನ್ನು ಪಾಲಿಸದೇ ಇದ್ದಾಗ ಈಗ ಕಾನೂನುಬದ್ಧ ಕರ್ತವ್ಯವಾಗಿರುತ್ತದೆ. ಹಣ, ಆಸ್ತಿ ಕೀರ್ತಿ ಯಾರಿಗೆ ಯಾವಾಗ ಬೇಕಾದರೂ ಸಿಗಬಹುದು. ಆದರೆ ವಿನಯವಂತಿಕೆ, ಮಾನವೀಯತೆಯನ್ನು ಸಂಪಾದಿಸಿ ಬದುಕಿನಲ್ಲಿ ಅದನ್ನು ಅಳವಡಿಸಿ ಕೊಳ್ಳುವುದು ತೀರಾ ಅಗತ್ಯ ಮತ್ತು ಅನಿವಾರ್ಯವಾದುದಾಗಿದೆ.



> ಆಧುನಿಕ ಸಮಾಜದ ಬಹುದೊಡ್ಡ ಆಘಾತಕಾರಿ ಸಂಗತಿ ಎಂದರೆ ಲಕ್ಷಗಟ್ಟಲೇ ಖರ್ಚು ಮಾಡಿ ಓದಿಸಿದ ಹೆತ್ತವರನ್ನು ಮರೆತು ವಿದೇಶಗಳಲ್ಲಿ ಹೋಗಿ ವಾಸ ಮಾಡುತ್ತಾ, ಹೆತ್ತವರನ್ನು ವೃದ್ಧಾಶ್ರಮಗಳಲ್ಲಿ ಸೇರಿಸುತ್ತಿರುವ ಮಕ್ಕಳನ್ನು ನೋಡಿದರೆ ತಿಳಿಯುತ್ತದೆ ಇಂದಿನ ಯುವಜನತೆಗೆ ಮೊದಲು ವಿದ್ಯಾಭ್ಯಾಸಕ್ಕಿಂತ ವಿನಯವಂತಿಕೆಯನ್ನು, ಮಾನವ ಸಂಬಂಧಗಳ ಮೌಲ್ಯವನ್ನು ಕಲಿಸಿ ಕೊಡಬೇಕಾದ ಅನಿವಾರ್ಯತೆ ಯಂತೂ ಅಗತ್ಯವಾಗಿ ಬೇಕಾಗಿದೆ.

ಆಧುನಿಕ ಸಮಾಜದ ಬಹುದೊಡ್ಡ ಆಘಾತಕಾರಿ ಸಂಗತಿ ಎಂದರೆ ಲಕ್ಷಗಟ್ಟಲೇ ಖರ್ಚು ಮಾಡಿ ಓದಿಸಿದ ಹೆತ್ತವರನ್ನು ಮರೆತು ವಿದೇಶಗಳಲ್ಲಿ ಹೋಗಿ ವಾಸ ಮಾಡುತ್ತಾ, ಹೆತ್ತವರನ್ನು ವೃದ್ಧಾಶ್ರಮಗಳಲ್ಲಿ ಸೇರಿಸುತ್ತಿರುವ ಮಕ್ಕಳನ್ನು ನೋಡಿದರೆ ತಿಳಿಯುತ್ತದೆ ಇಂದಿನ ಯುವಜನತೆಗೆ ಮೊದಲು ವಿದ್ಯಾಭ್ಯಾಸಕ್ಕಿಂತ ವಿನಯವಂತಿಕೆಯನ್ನು, ಮಾನವ ಸಂಬಂಧಗಳ ಮೌಲ್ಯವನ್ನು ಕಲಿಸಿಕೊಡಬೇಕಾದ ಅನಿವಾರ್ಯತೆಯಂತೂ ಅಗತ್ಯವಾಗಿ ಬೇಕಾಗಿದೆ.

ತಾನು ಅಚ್ಚುಕಟ್ಟಾದ ಬಟ್ಟೆ ತೊಡಲಾಗದಿದ್ದರೂ ಮಕ್ಕಳಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಕೊಡಿಸುವ, ತಾನು ಸರಿಯಾಗಿ ತಿನ್ನದಿದ್ದರೂ ತನ್ನ ಮಕ್ಕಳಿಗಾಗಿ ಎಲ್ಲದರಲ್ಲೂ ಉಳಿಸಿ ಅವರಿಗಾಗಿ ತಮ್ಮ ಬದುಕನ್ನೇ ಸವೆಸುವ ಪೋಷಕರ ಮನೋಭಾವ ಇಂದಿನ ಮಕ್ಕಳಿಗೆ ಅರ್ಥವೇ ಆಗಲಾರದು. ಹಣ, ಇಷ್ಟಪಟ್ಟ ಉದ್ಯೋಗ, ಮನ ಮೆಚ್ಚುವ ಮಡದಿ ಸಿಕ್ಕರೆ ಸಾಕು ಹೆತ್ತವರು ಬೇಡವಾಗುತ್ತಾರೆ. ಇಂತಹ ಗುಣ ಉಳ್ಳವರಿಗೆ ಮೊದಲು ತ್ಯಾಗ, ಪರಿಶ್ರಮ ತಿಳಿಸಬೇಕಾಗಿದೆ. ಹೆತ್ತವರ ಮನೋಭಾವ ಮಕ್ಕಳಿಗೆ ಅರ್ಥವಾಗುವುದು ಬಹುಶಃ ಅವರು ಪೋಷಕರಾದ ಮಾತ್ರವೇ ಎಂದೆನಿಸುತ್ತದೆ.

ಹೊಂದಾಣಿಕೆ ಮನೋಭಾವ

ಬಹುತೇಕ ವಿದ್ಯಾವಂತರಲ್ಲಿ ಹೊಂದಾಣಿಕೆಯ ಕೊರತೆ ಕಂಡುಬರುವುದನ್ನು ಗಮನಿಸಿದ್ದೇವೆ. ನಮಗೆ ಎಲ್ಲ ತಿಳಿದಿದೆ. ಬೇರೆಯವರಿಂದ ನಮಗೇನು ಆಗಬೇಕು, ಹಿರಿಯರಾಗಲೀ, ಕಿರಿಯರಾಗಲೀ ಹೇಳಿದಂತೆ ನಾವು ಯಾಕೆ ಕೇಳಬೇಕು. ನಮ್ಮಿಷ್ಟ ಬಂದಂತೆ ಬದುಕುವ ಹಕ್ಕು ನಮಗಿದೆ ಎಂಬ ಅಹಂಮಿಕೆಯಿಂದ ಕುಟುಂಬಗಳಲ್ಲಿ ಜಗಳ, ಮನಸ್ತಾಪ, ಕೆಲಸ ಮಾಡುವ ಕಡೆಗಳಲ್ಲಿ ಇಲ್ಲಸಲ್ಲದ ಕಿತ್ತಾಟಗಳು, ಮತ್ಸರ ಮನೋಭಾವಗಳು ಕಂಡುಬರುತ್ತಿವೆ. ಅಂದುಕೊಳ್ಳುವುದಕ್ಕಿಂತ ಹೊಂದಿಕೊಳ್ಳುವುದೇ ಜೀವನ ಎಂಬ ಮಾತಿನಂತೆ ಕೆಲವೊಮ್ಮೆ ಹೊಂದಾಣಿಕೆಗಳು ಸಂಬಂಧಗಳನ್ನು ಉಳಿಸಿಕೊಳ್ಳುವಲ್ಲಿ ಮಹತ್ವದ ಕೆಲಸವನ್ನು ಮಾಡುತ್ತವೆ. ಆದ್ದರಿಂದ ಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವವನ್ನು ರೂಢಿಸಿಕೊಂಡಿದ್ದಲ್ಲಿ ಮನೆ, ಮನಗಳು ಶಾಂತವಾಗಿರುತ್ತದೆ.

ಸಮಸ್ಯೆಗಳನ್ನು ದಕ್ಷವಾಗಿ ಎದುರಿಸುವ ಸದೃಢ ಮನೋಭಾವ

ಪ್ರಸ್ತುತ ದಿನಗಳಲ್ಲಿ ನಿಗದಿಪಡಿಸಿರುವ ಅಂಕಗಳನ್ನು ಸಂಪೂರ್ಣವಾಗಿ ಪಡೆಯುವಂತಹವರು ಅನೇಕರು ಕಂಡುಬರುತ್ತಿದ್ದಾರೆ. ಆದರೆ ಅವರು ಜೀವನದಲ್ಲಿ ಯಶಸ್ವಿಯಾಗುವುದು ಅತೀ ವಿರಳವಾಗಿರುತ್ತದೆ. ಏಕೆಂದರೆ ಸಮಸ್ಯೆಗಳು ಎದುರಾದರೆ ಸಾಕು ಖಿನ್ನತೆಯಿಂದ ಬಳಲು ತ್ತಾರೆ. ನಮ್ಮ ವಿದ್ಯಾಭ್ಯಾಸ ನೀಡಬೇಕಾಗಿರುವುದು ಬದುಕೆಂಬ ಚದುರಂಗದಲ್ಲಿ ಏನೇ ಸಮಸ್ಯೆಗಳು ಎದುರಾದರೂ ಧೈರ್ಯವಾಗಿ ಎದುರಿಸುವಂತಹ ಮನೋಭಾವ ಬೆಳೆಯುವಂತಾಗಬೇಕು. ಇಂತಹ ಸದೃಢ ಮನೋಭಾವ ಇಂದಿನ ವಿದ್ಯಾರ್ಥಿಗಳು ಬೆಳೆಸಿಕೊಂಡಿದ್ದಲ್ಲಿ ಖಂಡಿತವಾಗಿಯೂ ಯಾವ ಸಾಧನೆಯನ್ನಾದರೂ ಮಾಡಬಲ್ಲರು.

ತಾಳ್ಮೆ

ವಿದ್ಯಾವಂತರಾದವರಲ್ಲಿ ಮೊದಲಿಗಿರಬೇಕಾದುದು ತಾಳ್ಮೆ. ದುರಂತವೋ ಅಥವಾ ವಿಪರ್ಯಾಸವೋ ತಿಳಿಯದು ಪ್ರಸ್ತುತ ದಿನಗಳಲ್ಲಿ ಒಂದು ಸಣ್ಣ ಮಾತನಾಡಿದರೂ ಅಥವಾ ಟೀಕೆ ಮಾಡಿದರೂ ಅದನ್ನು ತಡೆದುಕೊಳ್ಳುವ ತಾಳ್ಮೆ ವಿದ್ಯಾವಂತರಲ್ಲಿ ಇರುವುದಿಲ್ಲ. ಮನುಷ್ಯ ಎಂದ ಮೇಲೆ ಬಲ, ಬಲಹೀನತೆಗಳು ಇರುವುದು ಸರ್ವೇಸಾಮಾನ್ಯ. ಕೆಲವೊಮ್ಮೆ ಈ ಬಲಹೀನತೆಗಳನ್ನು ಬೇರೊಬ್ಬರು ತೋರಿಸಿದಾಗ ಅದರ ವಿರುದ್ಧ ತಿರುಗಿ ಬೀಳುವವರೇ ಹೆಚ್ಚು. ಸಕಾರಾತ್ಮಕವಾಗಿ ತೆಗೆದುಕೊಳ್ಳುವಂತಹ ಮನೋಭಾವ ಆಗಲೀ ತಾಳ್ಮೆಯಿಂದ ಕೇಳುವಂತಹ ವ್ಯವಧಾನವಾಗಲಿ ಇರುವುದಿಲ್ಲ. ನಾವು ಕಲಿತ ವಿದ್ಯೆ ತಾಳ್ಮೆಯನ್ನು ತಂದು ಕೊಡುವುದಿಲ್ಲ ಎಂದಾದರೆ ಅಂತಹ ವಿದ್ಯೆಯಿಂದ ಏನು ಉಪಯೋಗ? ತಾಳ್ಮೆ ಮನುಷ್ಯನನ್ನು ಗಟ್ಟಿಗೊಳಿಸುತ್ತದೆ. ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯನ್ನು ಬೆಳೆಸುತ್ತದೆ. ತಾಳ್ಮೆ ಇಲ್ಲದೆ ಕೋಪ ಮಾಡಿಕೊಂಡರೆ ಇರುವ ಬುದ್ಧಿಗೆ ಮಂಕುಕವಿದಂತಾಗುತ್ತದೆ. ಬದುಕಿನಲ್ಲಿ ತಾಳ್ಮೆ ಅತೀ ಮುಖ್ಯವಾದುದಾಗಿರುತ್ತದೆ.

ಮಾನವೀಯ ಮೌಲ್ಯಗಳ ಅರಿವನ್ನು ಮೂಡಿಸಬೇಕು

ಮೊದಲೇ ಹೇಳಿದಂತೆ ನಿಗದಿಪಡಿಸಿದ ಅಂಕಗಳನ್ನು ಸಂಪೂರ್ಣವಾಗಿ ಪಡೆಯುವ ಸಾಮರ್ಥ್ಯ ಇರುವ ನಮ್ಮ ಮಕ್ಕಳಿಗೆ ನಾವು ಮಾನವೀಯ ಮೌಲ್ಯಗಳ ಅರಿವನ್ನು ಮೂಡಿಸಿಕೊಡಲೇಬೇಕು. ಕಷ್ಟದಲ್ಲಿ ಇರುವವರಿಗೆ ಕರುಣೆ ತೋರುವ, ಅಪಘಾತದಲ್ಲಿ ತೊಂದರೆಗೀಡಾದವರಿಗೆ ಕನಿಷ್ಠ ಕೈಲಾದಷ್ಟು ಸಹಾಯವನ್ನು ಮಾಡುವ, ಬಡವರ ಮೇಲೆ ಕಾಳಜಿ–ಕಳಕಳಿ ತೋರುವ ಗುಣಗಳನ್ನು ಬೆಳೆಸಬೇಕಾಗಿದೆ.

ಇದರಿಂದ ಅಲ್ಪಮಟ್ಟಿಗಾದರೂ ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜೀವಿಸುವಂತೆ ಮಾಡುವ ಶಿಕ್ಷಣ ನೀಡಬೇಕಾಗಿದೆ. ಹೀಗೆ ಬದುಕಿನ ಆಗು–ಹೋಗುಗಳು ಎದುರಾದರೂ ಅವುಗಳನ್ನು ಸಂಭಾಳಿಸುತ್ತಾ ಕಷ್ಟಗಳು ಬರಲಿ, ಸುಖಗಳನ್ನು ಅರಸುತ್ತಿರಲಿ, ಅಳು ಇರಲಿ, ನಗುವನ್ನು ಕೂಡಿ ವಿವೇಕದ ಬೆಳಕಿನ ಕೆಳಗೆ ನಲಿಯುತ್ತಾ ಜೀವನವೆಂಬ ಉಯ್ಯಾಲೆಯಲ್ಲಿ ಸ್ವಚ್ಛಂದವಾಗಿ ಬದುಕುವ ಕಲೆಯೇ ಶ್ರೇಷ್ಠವಾದುದು.

ಹಣಕ್ಕಿಂತ ಗುಣ ಮುಖ್ಯವಾದುದು

ಇಂದಿನ ಯುವ ಸಮುದಾಯಕ್ಕೆ ಹಣಕ್ಕಿಂತ ಗುಣ ಮುಖ್ಯವಾದುದು ಎಂಬುದನ್ನು ಮೊದಲು ತಿಳಿಸಿ ಹೇಳಲೇಬೇಕಾಗಿದೆ. ಓದಬೇಕು, ಒಳ್ಳೆಯ ನೌಕರಿ ಪಡೆಯಬೇಕು. ಹೇಗಾದರೂ ಸರಿ ಕೈ ತುಂಬಾ ಹಣ ಸಂಪಾದಿಸಬೇಕು. ಬೇಕಾಗಿದ್ದು, ಬೇಡವಾದದ್ದನ್ನೆಲ್ಲ ಖರೀದಿಸಬೇಕು. ಮತ್ತೊಬ್ಬರ ಮುಂದೆ ತೋರ್ಪಡಿಕೆಯ ಜೀವನ ನಡೆಸಬೇಕೆಂಬ ಹುಚ್ಚು ಹಂಬಲ ದಿನೇ ದಿನೆ ಹೆಚ್ಚಾಗುತ್ತಿದೆ. ಹಣವನ್ನು ಯಾರು ಬೇಕಾದರೂ, ಯಾವಾಗ ಬೇಕಾದರೂ ಸಂಪಾದಿಸಬಹುದು. ಒಳ್ಳೆಯ ಗುಣವನ್ನು ಬೆಳೆಸಿಕೊಂಡು, ಅದನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬಾಳಬೇಕು. ಹಣ ಯಾವಾಗ ಬೇಕಾದರೂ ಬರಿದಾಗಬಹುದು. ಗುಣ ಎಲ್ಲ ಕಾಲದಲ್ಲಿಯೂ ತನ್ನ ಮೌಲ್ಯವನ್ನು ಉಳಿಸಿಕೊಂಡು ಉತ್ತಮ ಕಾರ್ಯದತ್ತ ಕೊಂಡೊಯ್ಯುವ ಕೆಲಸವನ್ನು ಮಾಡುತ್ತವೆ.ಈ ತತ್ವ ಅರ್ಥವಾದ ದಿನ ವಿನವಂತಿಕೆಯ ಜನರನ್ನು ಗುರುತಿಸಬಹುದು.

ಹಣ ನಮಗೆ ಎಲ್ಲವನ್ನೂ ಧಾರೆ ಎರೆಯುತ್ತದೆ ಎನ್ನುವುದು ನಿಜವೆಂದುಕೊಂಡರೂ ಹಣವೇ ಜೀವನವಲ್ಲ. ಹಣದ ಬಹಳ ಹಿರಿದಾದ ಮಿತಿ ಏನೆಂದರೆ ಗುಣವನ್ನು ಹಣದಿಂದ ಸಂಪಾದಿಸಲಾಗದು. ವಿದ್ಯೆಯನ್ನು ಹಣದಿಂದ ಸಂಪಾದಿಸಬಹುದು. ಆದರೆ ಮನುಷ್ಯತ್ವದ ಬೀಜಮಂತ್ರಗಳು, ಮಾನವೀಯತೆಯ ಅಂತಃಕರಣ, ವ್ಯಕ್ತಿತ್ವಕ್ಕೆ ಶೋಭೆ ತರುವ ಮೌಲ್ಯಗಳಲ್ಲೂ ಬಿಕರಿಯಾಗದ ಆದರೆ ಒಬ್ಬ ವ್ಯಕ್ತಿಗೆ ಅಗತ್ಯವಾಗಿ ಬೇಕಾಗಿರುವ ಜೀವ ಮತ್ತು ಜೀವನಾಂಶಗಳನ್ನು ವಿದ್ಯೆ ನೀಡಬೇಕು. ಆ ಮೂಲಕ ವಿನಯವನ್ನು ಕಲಿಸಿಕೊಡಬೇಕು. ವಿನಯ ಜಗತ್ತಿನ ವಿಚಾರಗಳನ್ನು ತಿಳಿಸಬೇಕು. ಜಗತ್ತಿನ ವಿಚಾರಗಳು ಬದುಕುವ ಹಾದಿಗೆ ಹಿರಿದಾದ ಮಾರ್ಗದರ್ಶನ ಮಾಡಬೇಕು. ವಿದ್ಯೆ ಇದ್ದು ವಿನಯ ಇಲ್ಲವಾದರೆ ಬದುಕು ಅಷ್ಟೇನು ಶೋಭಿಸಲಾರದು.


ಲಕ್ಷಗಟ್ಟಲೆ ಖರ್ಚು ಮಾಡಿ ವಿದ್ಯಾಭ್ಯಾಸ ನೀಡುವುದಕ್ಕಿಂತ ಮೊದಲು ಲಕ್ಷ್ಯ ನೀಡಿ ವಿನಯವಂತರನ್ನು, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವವರನ್ನು ರೂಪಿಸಬೇಕಾಗಿರುವುದು ಸಮಾಜದ ಪ್ರತಿಯೊಬ್ಬರ ಹೊಣೆಯಾಗಿದೆ.

ಸೌಂದರ್ಯ ವರ್ಧಕಗಳು ಸೇರಿ 15 ಔಷಧಿಗಳಿಗೆ ಆರೋಗ್ಯ ಇಲಾಖೆ ನಿಷೇಧ!

ಬೆಂಗಳೂರು: ಮಹತ್ವದ ಬೆಳವಣಿಗೆಯಲ್ಲಿ ಕರ್ನಾಟಕ ಆರೋಗ್ಯ ಇಲಾಖೆ ಪ್ಯಾರಾಸಿಟಮೋಲ್ ಸೇರಿದಂತೆ 15 ಅಸುರಕ್ಷಿತ ಕಾಂತಿವರ್ಧಕಗಳು ಮತ್ತು ಔಷಧಿಗಳ ಬಳಕೆಗೆ ನಿರ್ಬಂಧ ಹೇರಿದೆ.

ಕರ್ನಾಟಕ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತವು ಅಸುರಕ್ಷಿತ ಕಾಂತಿವರ್ಧಕ ಔಷಧ ಹಾಗೂ ಔಷಧಿಗಳ ಪಟ್ಟಿ ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಜ್ವರಕ್ಕೆ ಬಳಕೆ ಮಾಡುವ ಪ್ಯಾರಾಸಿಟಮೋಲ್, ಮೈಸೂರು ಮೂಲದ ಓ ಶಾಂತಿ ಗೋಲ್ಡ್ ಕುಂಕುಮ್ ಸೇರಿದಂತೆ ಹಲವು ಉತ್ಪನ್ನಗಳಿವೆ. ಅಸುರಕ್ಷಿತ ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಆರೋಗ್ಯ ಇಲಾಖೆಯು ಮೇ ತಿಂಗಳಲ್ಲಿ ಕಾಂತಿವರ್ಧಕ ಔಷಧ ಹಾಗೂ ಔಷಧಗಳ ಸ್ಯಾಂಪಲ್ಸ್ ಪಡೆದು, ತಪಾಸಣೆಗೆ ಒಳಪಡಿಸಿತ್ತು. ತಪಾಸಣೆಯಲ್ಲಿ ಮೈಸೂರು ಕಂಪನಿಯ ಓ ಶಾಂತಿ ಗೋಲ್ಡ್ ಕುಂಕುಮ್ ಸೇರಿದಂತೆ 15 ಕಾಂತಿವರ್ಧಕ ಔಷಧ ಹಾಗೂ ಔಷಧಿಗಳು ಅಸುರಕ್ಷಿತ ಎಂದು ವರದಿ ಬಂದಿದೆ. ರಾಜ್ಯ, ಹೊರ ರಾಜ್ಯದ ಔಷಧ ತಯಾರಿಕಾ ಕಂಪನಿಗಳು ಈ ಪಟ್ಟಿಯಲ್ಲಿವೆ ಎಂದು ಮಾಧ್ಯಮವೊಂದು ವರದಿ ಮಾಡಿದೆ. ಅಸುರಕ್ಷಿತ ಔಷಧಿ ಮತ್ತು ಕಾಂತಿವರ್ಧಕಗಳ ಬಳಕೆ ಮತ್ತು ಮಾರಾಟ ಮಾಡದಂತೆ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.



ಪಟ್ಟಿಯಲ್ಲಿರುವ ಔಷಧಿಗಳು ಇಂತಿವೆ

ಕಂಪೌಂಡ್ ಸೋಡಿಯಂ ಲ್ಯಾಕ್ಟೇಟ್ ಇನ್ಜೆಕ್ಷನ್ ಐಪಿ– ಮೆ. ಅಲ್ಟ್ರಾ ಲ್ಯಾಬೋರೇಟರಿಸ್ ಪ್ರೈ ಲಿಮಿಟೆಡ್.

ಕಂಪೌಂಡ್ ಸೋಡಿಯಂ ಲ್ಯಾಕ್ಟೇಟ್ ಇನ್ಜೆಕ್ಷನ್ ಐಪಿ– ಮೇ. ಟಾಮ್ ಬ್ರಾನ್ ಫಾರ್ಮಾಸ್ಯೂಟಿಕಲ್ಸ್ ಪ್ರೈ. ಲಿಮಿಟೆಡ್.

ಪೋಮೋಲ್–650 (ಪ್ಯಾರಾಸಿಟಮೋಲ್ ಟ್ಯಾಬ್ಲೆಟಸ್ ಐ.ಪಿ 650 ಎಂಜಿ)– ಮೇ. ಅಬಾನ್ ಫಾರ್ಮಾಸ್ಯೂಟಿಕಲ್ಸ್ ಪ್ರೈ ಲಿಮಿಟೆಡ್. ಮಿಟು ಕ್ಯೂ7 ಸಿರಪ್– ಮೆ. ಬಯೋನ್ ಥೆರಾಪ್ಯಾಟಿಕ್ಸ್ ಇಂಡಿಯಾ ಪ್ರೈ ಲಿಮಿಟೆಡ್. ಸ್ಟೈರಲ್ ಡಿಲ್ಯೆಯಂಟ್ ಪಾರ್ ರೆಕಾನೋಸ್ಟಿಟಿಶ್ಯೂನ್ ಆಫ್ ಎನ್ಡಿ, ಐಬಿ, ಐಬಿಡಿ ಅಂಡ್ ಕಾಂಬಿನೇಷನ್ ವ್ಯಾಕ್ಸಿನ್ಸ್ ಫಾರ್ ಪೌಲ್ಟ್ರೀ (ವೆಟರ್ನರಿ) ಮಲ್ಟಿ ಡೋಸ್ ವಿಲಾ 200 ಎಂಲ್ – ಮೇ. ಸೇಫ್ ಪೇರೆಂಟರಲ್ಸ್ ಪ್ರೈ. ಲಿಮಿಟೆಡ್.

ಸ್ಪಾನ್ಪ್ಲಾಕ್ಸ್–ಓಡ್ ಟ್ಯಾಬ್ಲೆಟ್ಸ್ (ಓಪ್ಲಾಕ್ಸಸಿನ್ & ಓರ್ನಿಡಜೋಲ್ ಟ್ಯಾಬ್ಲೆಟ್ಸ್ ಐಪಿ) – ಮೆ. ಇಂಡೋರಾಮ ಹೇಲ್ತ್ ಕೇಸ್ ಪ್ರೈ ಲಿಮಿಟಿಡ್.

ಪ್ಯಾಂಟೋಕೋಟ್–ಡಿಎಸ್ಆರ್ (ಪ್ಯಾಂಟೋಪ್ರಜೋಲ್ ಗ್ಯಾಸ್ಟ್ರೋ–ರಿಜಿಸ್ಟೆಂಟ್ & ಡೋಮ್ಪೆರಿಡನ್ ಪ್ರೋಕಾಂಗಡ್ ರಿಲಿಸ್ ಕ್ಯಾಪ್ಸೂಲ್ಸ್ ಐಪಿ – ಮೇ. ಸ್ವೆಫ್ನೆ ಫಾರ್ಮಾಸ್ಯೂಟಿಕಲ್ಸ್ ಪ್ರೈ ಲಿಮಿಟೆಡ್.

ಸೋಡಿಯಂ ಕ್ಲೋರೈಡ್ ಇನ್ಜೆಕ್ಷನ್ ಐಪಿ 0.9% ಡಬ್ಲ್ಯೂ/ವಿ (ಎನ್ಎಸ್) – ಮೆ. ಪುನಿಷ್ಕ ಇನ್ಜೆಕ್ಟಬಲ್ ಪ್ರೈ. ಲಿಮಿಟೆಡ್

ಆರೋಗ್ಯ ಸಚಿವರ ಟ್ವೀಟ್

ಇನ್ನು ಇದೇ ವಿಚಾರವಾಗಿ ಎಕ್ಸ್‌ನಲ್ಲಿ ಟ್ವೀಟ್ ಮಾಡಿ ಮಾಹಿತಿ ನೀಡಿರುವ ಸಚಿವ ದಿನೇಶ್ ಗುಂಡೂರಾವ್, 'ಕರ್ನಾಟಕದ ಔಷಧ ಪರೀಕ್ಷಾ ಪ್ರಯೋಗಾಲಯವು ಈ ಕೆಳಗಿನ ಔಷಧಗಳು, ಸೌಂದರ್ಯವರ್ಧಕಗಳನ್ನು 'ಪ್ರಮಾಣೀಕೃತ ಗುಣಮಟ್ಟದಲ್ಲಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಎಲ್ಲಾ ಔಷಧ ಮಾರಾಟಗಾರರು, ವೈದ್ಯರು, ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು ಈ ಉತ್ಪನ್ನಗಳನ್ನು ಸಂಗ್ರಹಿಸುವುದು/ಮಾರಾಟ ಮಾಡುವುದು/ಬಳಸುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ನಾನು ಮನವಿ ಮಾಡುತ್ತೇನೆ. ಆಸ್ಪತ್ರೆ, ಔಷಧ ಮಳಿಗೆಗಳಲ್ಲಿ ಯಾವುದೇ ಸಂಗ್ರಹ ಇದ್ದರೆ, ನಿಮ್ಮ ಸ್ಥಳೀಯ ಔಷಧ ನಿರೀಕ್ಷಕರು ಅಥವಾ ಸಹಾಯಕ ಔಷಧ ನಿಯಂತ್ರಕರಿಗೆ ತಕ್ಷಣವೇ ತಿಳಿಸಿ. ನಿಮ್ಮ ಸುರಕ್ಷತೆ ನಮ್ಮ ಆದ್ಯತೆ. ದಯವಿಟ್ಟು ಈ ಕೆಳಗೆ ಪಟ್ಟಿ ಮಾಡಲಾದ ಬ್ಯಾಚ್‌ನ ಔಷಧಗಳು, ಸೌಂದರ್ಯವರ್ಧಕಗಳನ್ನು ಬಳಸಬೇಡಿ. ಈ ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಸೋಡಿಯಂ ಕ್ಲೋರೈಡ್ ಇನ್ಜೆಕ್ಷನ್ ಐಪಿ 0.9% ಡಬ್ಲ್ಯೂ/ವಿ (ಎನ್ಎಸ್) – ಮೆ. ಪುನಿಷ್ಕ ಇನ್ಜೆಕ್ಟಬಲ್ ಪ್ರೈ. ಲಿಮಿಟೆಡ್.

ಅಲ್ಫಾ ಲಿಪೋಯಿಕ್ ಆಸಿಡ್, ಫೋಲಿಕ್ ಆಸಿಡ್, ಮಿಥೈಲ್ ಕೋಬಾಲಮಿನ್, ವಿಟಮಿನ್ ಬಿ6 & ವಿಟಮಿನ್ ಡಿ3ಟ್ಯಾಬ್ಲೆಟ್ಸ್ – ಮೇ. ಇಸ್ಟ್ ಆಫ್ರಿಕನ್ (ಇಂಡಿಯಾ) ಓವರ್ಸಿಸ್. ಓ ಶಾಂತಿ ಗೋಲ್ಡ್ ಕ್ಲಾಸ್ ಕುಂಕುಮ್ – ಮೇ. ಎನ್. ರಂಗರಾವ್ & ಸನ್ಸ್ ಪ್ರೈ ಲಿಮಿಟೆಡ್. ಪಿರಾಸಿಡ್–ಓ ಸಸ್ಪೆನ್ಷನ್ (ಸಲ್ಕ್ರಾಲ್ಫೇಟ್ & ಆಕ್ಸೆಟಾಕೈನ್ ಸಸ್ಪೆನ್ಷನ್)– ಮೆ. ರೆಡ್ನಕ್ಸ್ ಫಾರ್ಮಾಸ್ಯೂಟಿಕಲ್ಸ್ ಪ್ರೈ ಲಿಮಿಟೆಡ್.

ಗ್ಲಿಮಿಜ್–2 (ಗ್ಲಿಮಿಫೆರೈಡ್ ಟ್ಯಾಬ್ಲೆಟ್ಸ್ ಐಪಿ 2ಎಂಜಿ)–ಮೆ. ಕೆಎನ್ಎಂ ಫಾರ್ಮಾ ಪ್ರೈ ಲಿಮಿಟೆಡ್. ಐರನ್ ಸುಕ್ರೋಸ್ ಇನ್ಜೆಕ್ಷನ್ ಯುಎಸ್ಪಿ 100ಎಂಜಿ (ಐರೋಗೈನ್) – ಮೆ. ರೀಗೈನ್ ಲ್ಯಾಬೋರೇಟರಿಸ್ ಕಂಪೌಂಡ್ ಸೋಡಿಯಂ ಲ್ಯಾಕ್ಟೇಟ್ ಇನ್ಜೆಕ್ಷನ್ ಐಪಿ (ರಿಂಗರ್ ಲ್ಯಾಕ್ಟೇಟ್ ಸಲೂಷನ್ ಪಾರ್ ಇನ್ಜೆಕ್ಷನ್ ಆರ್ಎಲ್– ಮೇ. ಒಟ್ಸುಕಾ ಫಾರ್ಮಾಸ್ಯೂಟಿಕಲ್ಸ್ ಇಂಡಿಯಾ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 26 ಗುರುವಾರ 2025

ಸಂಪುಟ: 46 | ಸಂಚಿಕೆ: 70 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ತಂಡದ ಐತಿಹಾಸಿಕ ಅಂತರಿಕ್ಷ ಯಾನ

41 ವರ್ಷಗಳ ನಂತರ ಭಾರತೀಯನ ಬಾಹ್ಯಾಕಾಶ ಸಾಹಸ ಯಾತ್ರೆ



ಶುಭಾಂಶು ಶುಕ್ಲಾ ಆಕ್ಸಿಯಂ ಸ್ಪೇಸ್‌ನ ವಾಣಿಜ್ಯ ಕಾರ್ಯಾಚರಣೆ ಭಾಗವಾಗಿ ಇತರ ಮೂವರೊಂದಿಗೆ ಬಾಹ್ಯಾಕಾಶ ಸಾಹಸ ಯಾತ್ರೆ ಕೈಗೊಂಡಿದ್ದಾರೆ.

ನವದೆಹಲಿ: ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಬುಧವಾರ ಆಕ್ಸಿಯಂ ಸ್ಪೇಸ್‌ನ ವಾಣಿಜ್ಯ ಕಾರ್ಯಾಚರಣೆಯ ಭಾಗವಾಗಿ ಇತರ ಮೂವರೊಂದಿಗೆ ಬಾಹ್ಯಾಕಾಶ ಯಾತ್ರೆ ಕೈಗೊಳ್ಳುವ ಮೂಲಕ ಇತಿಹಾಸ ಬರೆದಿದ್ದಾರೆ.

ಬಹಳ ವಿಳಂಬವಾಗಿದ್ದ ಆಕ್ಸಿಯಂ–4 ಮಿಷನ್ ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಭಾರತೀಯ ಕಾಲಮಾನ ಬುಧವಾರ ಮಧ್ಯಾಹ್ನ 12:01ಕ್ಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದ ಕಡೆಗೆ ಚಿಮ್ಮಿತು. ಲಕ್ನೋ ಮೂಲದ ಶುಭಾಂಶು ಶುಕ್ಲಾ ಅವರ ಸಿಟಿ ಮಾಂಟೆಸ್ಸರಿ ಶಾಲೆ ಸೇರಿದಂತೆ ಪ್ರಪಂಚದಾದ್ಯಂತ ಆಯೋಜಿಸಲಾದ ಉಡಾವಣೆ ವೀಕ್ಷಣೆ ಕಾರ್ಯಕ್ರಮದಲ್ಲಿ ಹರ್ಷೋದ್ಗಾರಗಳ ನಡುವೆ, ಅವರ ಪೋಷಕರು ಐತಿಹಾಸಿಕ ಉಡಾವಣೆಯನ್ನು ವೀಕ್ಷಿಸಿದರು.

> “ಉತ್ತಮ ಸಂಗಾತಿಯಾಗಿರುವೆ, ನೀನಿಲ್ಲದೆ ಇದ್ಯಾವುದೂ ಸಾಧ್ಯವಾಗುತ್ತಿರಲಿಲ್ಲ. ಇದು ಯಾವುದು ಮುಖ್ಯವೂ ಆಗುತ್ತಿರಲಿಲ್ಲ. ನಾವು ಜೂ.25ರಂದು ಭೂಮಿ ಬಿಡುತ್ತಿದ್ದೇವೆ. ಈ ಮಿಷನ್‌ನಲ್ಲಿ ಭಾಗವಾಗಿರುವ ಎಲ್ಲರಿಗೂ ಧನ್ಯವಾದ ಹೇಳುತ್ತೇನೆ. ನನ್ನ ಕುಟುಂಬ ಮತ್ತು ನನ್ನೊಂದಿಗಿದ್ದ ಸ್ನೇಹಿತರಿಗೆ ಧನ್ಯವಾದಗಳು.
> –ಪತ್ನಿ ಕಾಮ್ನಾ ಅವರಿಗೆ ಶುಭಾಂಶು ಶುಕ್ಲಾ ಭಾವುಕ ಟ್ವೀಟ್

ಉತ್ತರಪ್ರದೇಶದ ಲಕ್ನೋದಲ್ಲಿ ಜನಿಸಿದ ಶುಕ್ಲಾ, ಮಾಜಿ ನಾಸಾ ಗಗನಯಾತ್ರಿ ಮಿಷನ್ ಕಮಾಂಡರ್ ಪೆಗ್ಗಿ ವಿಟ್ಸನ್, ಪೋಲೆಂಡ್‌ನ ಸ್ಲಾವೋಸ್ಜ್ ಉಜ್ನಾನ್ಸ್ಕಿ–ವಿಸ್ನಿಯೆವ್ಸ್ಕಿ, ಹಂಗೇರಿಯ ಟಿಬೋರ್ ಕಾಪು ಅವರು ಮೂರು ರಾಷ್ಟ್ರಗಳಿಗೆ ಬಾಹ್ಯಾಕಾಶಕ್ಕೆ ▶ 9ನೇ ಪುಟಕ್ಕೆ

ಆಡಳಿತದಲ್ಲಿ ಕನ್ನಡ ಕಡ್ಡಾಯ

- ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸುತ್ತೋಲೆ
- ಈ ಸೂಚನೆ ಉಲ್ಲಂಘಿಸಿದರೆ ಶಿಸ್ತು ಕ್ರಮದ ಎಚ್ಚರಿಕೆ

ಬೆಂಗಳೂರು: ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಆಡಳಿತದಲ್ಲಿ ಕನ್ನಡವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಬೇಕು. ಈ ಸೂಚನೆ ಉಲ್ಲಂಘಿಸಿದವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಲ್ಲಾ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸುತ್ತೋಲೆ ಹೊರಡಿಸಿದ್ದಾರೆ.

ಕನ್ನಡ ಭಾಷೆಯಲ್ಲಿಯೇ ಆಡಳಿತ ನಡೆಸುವ ಬಗ್ಗೆ ಈಗಾಗಲೇ ಹಲವು ಬಾರಿ ಸೂಚನೆಗಳನ್ನು ನೀಡಿ, ಸುತ್ತೋಲೆಗಳನ್ನು ಹೊರಡಿಸಿದ್ದರೂ ಪಾಲನೆ ಆಗುತ್ತಿಲ್ಲ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ವರದಿ ಮಾಡುತ್ತಲೇ ಇದೆ. ಹೀಗಾಗಿ, ಈ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ತಿಳಿಸಿದ್ದಾರೆ.

ಕನ್ನಡ

ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡ ಇರಬೇಕು ಎಂದು ‘ಕರ್ನಾಟಕ ರಾಜ್ಯ ಭಾಷಾ ಕಾಯ್ದೆ–1963’ರಲ್ಲಿ ತಿಳಿಸಲಾಗಿದೆ. ಕನ್ನಡದಲ್ಲಿ ಬರುವ ಅರ್ಜಿ ಮತ್ತು ಪತ್ರಗಳಿಗೆ ಕಡ್ಡಾಯವಾಗಿ ಕನ್ನಡದಲ್ಲಿಯೇ ಉತ್ತರಿಸಬೇಕು. ಕಚೇರಿಗಳ ನಾಮಫಲಕಗಳನ್ನು ಕನ್ನಡದಲ್ಲಿಯೇ ಪ್ರದರ್ಶಿಸಬೇಕು. ವಿಧಾನಮಂಡಲದ ಕಾರ್ಯ ಕಲಾಪಗಳು, ಪತ್ರ ವ್ಯವಹಾರ, ಗಮನಸೆಳೆಯುವ ಸೂಚನೆ ಇತ್ಯಾದಿಗಳು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸಲು ತಿಳಿಸಲಾಗಿದೆ. ನೇಮಕಾತಿ, ವರ್ಗಾವಣೆ ಮತ್ತು ರಜೆ ಮಂಜೂರಾತಿ ಸೇರಿದಂತೆ ಎಲ್ಲ ಆದೇಶಗಳನ್ನು ಕನ್ನಡದಲ್ಲಿ ಹೊರಡಿಸುವಂತೆ ಸ್ಪಷ್ಟವಾಗಿ ಸೂಚನೆ ನೀಡಲಾಗಿದೆ.

ಕಚೇರಿಗಳಿಗೆ ಒದಗಿಸಿರುವ ಆಂಗ್ಲ ಭಾಷಾ ನಮೂನೆ, ದಾಖಲೆ ಪುಸ್ತಕ ಮುಂತಾದವುಗಳನ್ನು ಕನ್ನಡದಲ್ಲಿ ಭರ್ತಿ ಮಾಡುವಂತೆ, ಆಂತರಿಕ ಪತ್ರ ವ್ಯವಹಾರ, ಕಡತದ ಟಿಪ್ಪಣಿ ಕನ್ನಡದಲ್ಲಿಯೇ ▶ 9ನೇ ಪುಟಕ್ಕೆ



> “ಸರ್ಕಾರಿ ಪತ್ರ ವ್ಯವಹಾರಗಳಲ್ಲಿ ಕಡತದ ಟಿಪ್ಪಣಿಗಳನ್ನು ಕನ್ನಡದಲ್ಲಿ ಮಾಡುವಂತೆ ಸೂಚಿಸಿದ್ದರೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದಿರುವುದನ್ನು ಗಮನಿಸಿರುವ ಮುಖ್ಯಮಂತ್ರಿ, ಕನ್ನಡದಲ್ಲಿ ಇಲ್ಲದೇ ಇದ್ದರೆ ಅಂತಹ ಕಡತಗಳನ್ನು ಹಿಂದಿರುಗಿಸಿ ಸೂಕ್ತ ಸಮಜಾಯಿಷಿ ಪಡೆಯಲು ನಿರ್ದೇಶನ ನೀಡಿದ್ದಾರೆ. ಆಡಳಿತದಲ್ಲಿ ಭಾಷಾ ನೀತಿಯನ್ನು ಪೂರ್ಣ ಪ್ರಮಾಣದಲ್ಲಿ ಹಾಗೂ ಎಲ್ಲ ಹಂತಗಳಲ್ಲಿ ಜಾರಿಗೊಳಿಸುವುದು ಎಲ್ಲ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯ. ಆದುದರಿಂದ, ಈಗಾಗಲೇ ಹೊರಡಿಸಿರುವ ಸರ್ಕಾರಿ ಆದೇಶಗಳಲ್ಲಿ ನೀಡಿರುವ ಸೂಚನೆಗಳನ್ನು ಸರ್ಕಾರ, ನಿಗಮ–ಮಂಡಳಿ, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಅನುದಾನಿತ ಸಂಘ–ಸಂಸ್ಥೆಗಳ ಎಲ್ಲ ಅಧಿಕಾರಿ, ನೌಕರರು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
> –ಶಾಲಿನಿ ರಜನೀಶ್, ಮುಖ್ಯ ಕಾರ್ಯದರ್ಶಿ

ಕಾವೇರಿ ಆರತಿ ಮಾಡೇ ಮಾಡ್ತೇವೆ

- ಈ ಕಾರ್ಯಕ್ರಮದಿಂದ ಕೆಆರ್‌ಎಸ್ ಅಣೆಕಟ್ಟೆಗೆ ಯಾವ ಆತಂಕವೂ ಇಲ್ಲ
- ತಜ್ಞರೊಂದಿಗೆ ಚರ್ಚಿಸಿ, ಈ ತೀರ್ಮಾನಕ್ಕೆ ಬಂದಿದ್ದೇವೆ
- ಕಾರ್ಯಕ್ರಮದಿಂದ ನಾಡಿನ ಸಂಸ್ಕೃತಿ ಮೇಳೈಸಲಿದೆ, ಎರಡು ಸಾವಿರ ಉದ್ಯೋಗ ಸಿಗಲಿದೆ
- ಮಂಡ್ಯ ಜಿಲ್ಲೆ ರೈತ, ವಿವಿಧ ಸಂಘಟನೆಗಳೊಂದಿಗೆ ಮಾತುಕತೆ ಬಳಿಕ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ



ಬೆಂಗಳೂರು,ಜೂ.25(ಕೆಎಂಶಿ)–ಕಾವೇರಿ ಆರತಿ ಕಾರ್ಯಕ್ರಮ ಹಮ್ಮಿಕೊಳ್ಳುವುದರಿಂದ ಕೃಷ್ಣರಾಜಸಾಗರ ಅಣೆಕಟ್ಟೆಗೆ ಯಾವುದೇ ಹಾನಿಯಾಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಐತಿಹಾಸಿಕ ಕಾವೇರಿ ಆರತಿ ಕಾರ್ಯಕ್ರಮ ಸಂಬಂಧ ಮಂಡ್ಯ ಜಿಲ್ಲೆ ರೈತ ಹಾಗೂ ಇತರೆ ಸಂಘಟನೆ ಮುಖಂಡರು, ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿದ ಬಳಿಕ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಈಗಾಗಲೇ ನೀರಾವರಿ ಹಾಗೂ ತಾಂತ್ರಿಕ ತಜ್ಞರೊಂದಿಗೆ ಸಮಾಲೋಚಿಸಿ, ಅವರ ಅಭಿಪ್ರಾಯ ಪಡೆದು ಈ ತೀರ್ಮಾನ ಕೈಗೊಂಡಿದ್ದೇವೆ ಎಂದು ಹೇಳಿದರು.

ಈ ಕಾರ್ಯಕ್ರಮ ನಡೆಯುವ ಜಾಗ ಅಣೆಕಟ್ಟೆಯಿಂದ ಸಾಕಷ್ಟು ದೂರದಲ್ಲಿದೆ. ಅಣೆಕಟ್ಟೆಯಿಂದ ನೀರು ಹರಿದು ಹೋಗುವ ಜಾಗದಲ್ಲಿ ಸ್ಥಳವನ್ನು ಸೌಂದರ್ಯೀಕರಣಗೊಳಿಸಿ ಈ ಕಾರ್ಯಕ್ರಮ ಮಾಡುತ್ತಿದ್ದೇವೆ. ಕೆಲವರಿಗೆ ಈ ವಿಚಾರಗಳು ತಿಳಿದಿಲ್ಲ. ಹೀಗಾಗಿ ಅಣೆಕಟ್ಟೆಗೆ ಹೆಚ್ಚುಕಮ್ಮಿ ಆಗಬಹುದು ▶ 9ನೇ ಪುಟಕ್ಕೆ

ಇಂದು ದಸರಾ ಉನ್ನತ ಸಭೆ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಆಚರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಾಳೆ (ಜೂ.26) ಬೆಳಗ್ಗೆ 11 ಗಂಟೆಗೆ ಉನ್ನತ ಮಟ್ಟದ ಸಮಿತಿ ಸಭೆ ಆಯೋಜಿಸಲಾಗಿದೆ. ಸಭೆಯಲ್ಲಿ ಸಂಪುಟ ಸಚಿವರು, ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಕಾವೇರಿ ಕಣಿವೆಯಲ್ಲಿ ವ್ಯಾಪಕ ಮಳೆ; ಒಳ ಹರಿವಿನ ಪ್ರಮಾಣ ಹೆಚ್ಚಳ

ಕೆಆರ್‌ಎಸ್ ಜಲಾಶಯದಿಂದ 30 ಸಾವಿರ ಕ್ಯುಸೆಕ್ ನೀರು ಬಿಡುಗಡೆ

- ವೈಭವ ಸವಿಯಲು ಮುಗಿ ಬೀಳುತ್ತಿರುವ ಪ್ರವಾಸಿಗರು
- ಬಲಮುರಿ–ಎಡಮುರಿಗೆ ಪ್ರವಾಸಿಗರ ಪ್ರವೇಶ ನಿಷೇಧ



ಕೆಆರ್‌ಎಸ್ ಜಲಾಶಯದಿಂದ ಭಾರಿ ಪ್ರಮಾಣದ ನೀರನ್ನು ನದಿಗೆ ಬಿಟ್ಟಿರುವುದು. ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

> ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ದೋಣಿ ವಿಹಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದರೆ, ಪಕ್ಷಿಧಾಮಕ್ಕೆ ಪ್ರವಾಸಿಗರು ಭೇಟಿ ನೀಡಬಹುದಾಗಿದ್ದು, ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ.
> –ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಮೈಸೂರು, ಜೂ.25(ಎಂಟಿವೈ)– ಕೊಡಗು ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯ ಅವಧಿಗೂ ಮುನ್ನವೇ ಭರ್ತಿಯಾಗುತ್ತಿದ್ದು, ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ಭಾರೀ ಪ್ರಮಾಣದ ನೀರನ್ನು ನದಿಗೆ ಬಿಡುತ್ತಿರುವುದರಿಂದ ಭೋರ್ಗರೆಯುವ ನೀರಿನ ದೃಶ್ಯ ರಮಣೀಯವಾಗಿದೆ.

ಕಳೆದ ಒಂದು ವಾರದಿಂದ ಕಾವೇರಿ ಕಣಿವೆಯಲ್ಲಿ ಮಳೆ ಬಿರುಸಾಗಿದ್ದು, ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ. ಹಲವು ದಶಕಗಳ ಬಳಿಕ ಜೂನ್ ತಿಂಗಳಲ್ಲೇ ಕೆಆರ್‌ಎಸ್ ಜಲಾಶಯದಲ್ಲಿ 120 ಅಡಿ ನೀರು ಸಂಗ್ರಹವಾಗಿ ದಾಖಲೆ ಬರೆದಿದೆ. ಇದೀಗ ಜಲಾಶಯದ ಭದ್ರತೆ ಹಿತದೃಷ್ಟಿಯಿಂದ ಅಣೆಕಟ್ಟೆಯಿಂದ ನದಿಗೆ 30 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ಹೊರ ಬಿಡಲಾಗುತ್ತಿದೆ.

ಜಲಾಶಯದ ಬಳಿ ಹಾಲಿನ ನೊರೆ: ಕೆಆರ್‌ಎಸ್ ಜಲಾಶಯದಿಂದ ಭಾರೀ ಪ್ರಮಾಣದ ನೀರನ್ನು ನದಿಗೆ ಬಿಡುತ್ತಿರುವುದರಿಂದ ಅಣೆಕಟ್ಟೆಯ ಕೆಳ ಭಾಗ ನದಿ ನೀರು ಹಾಲಿನ ನೊರೆಯಂತೆ ಕಂಡು ಬರುತ್ತಿದೆ. ಬೃಹತ್ ಬಂಡೆಗಳ ನಡುವೆ ರಭಸವಾಗಿ ಹರಿಯುವ ಕಾವೇರಿ ಸೊಬಗು ನೋಡುಗರ ಕಣ್ಮನ ಸೆಳೆಯುತ್ತಿದೆ.

ಇಂದಿನಿಂದ 30 ಸಾವಿರ ಕ್ಯುಸೆಕ್ ನೀರು ಹರಿಸುತ್ತಿರುವುದರಿಂದ ನದಿಗೆ ಜೀವಕಳೆ ಬಂದಿದ್ದು, ಪ್ರವಾಸಿಗರು ಮುಗಿ ಬೀಳುತ್ತಿದ್ದಾರೆ. ಅಣೆಕಟ್ಟೆಯ ಸಮೀಪ ನದಿಗೆ ಅಡ್ಡಲಾಗಿ ಕಟ್ಟಿರುವ ಮೇಲ್ಸೇತುವೆ ಬಳಿಯಿಂದಲೂ ಕಾವೇರಿಯನ್ನು ಪ್ರವಾಸಿಗರು ಕಣ್ತುಂಬಿಕೊಳ್ಳುತ್ತಿದ್ದಾರೆ. ಸುರಕ್ಷತೆ ದೃಷ್ಟಿಯಿಂದ ಸೇತುವೆ ಮೇಲೆ ಹೆಚ್ಚು ಹೊತ್ತು ನಿಲ್ಲುವುದಕ್ಕೆ ಪೊಲೀಸರು ಅವಕಾಶ ನೀಡುತ್ತಿಲ್ಲ.

ಬಲಮುರಿಯಲ್ಲಿ ವೈಭವ: ಬೆಳಗೊಳ ಸಮೀಪದ ಎಡಮುರಿ–ಬಲಮುರಿಯಲ್ಲೂ ಕಾವೇರಿ ಮೈದುಂಬಿ ಹರಿಯುತ್ತಿದ್ದು, ಭಾರಿ ಪ್ರಮಾಣದ ನೀರು ಧುಮ್ಮಿಕ್ಕುತ್ತಿದೆ. ಸುರಕ್ಷತೆ ದೃಷ್ಟಿಯಿಂದಾಗಿ ಎರಡು ದಿನದ ಹಿಂದೆಯೇ ಬಲಮುರಿ–ಎಡಮುರಿಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಇಂದು ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದ ನೀರು ಹರಿಯುತ್ತಿರುವುದರಿಂದ ಸ್ಥಳೀಯ ಗ್ರಾಮಸ್ಥರು ನದಿಗೆ ಇಳಿಯದಂತೆ ಹಾಗೂ ಜಾನುವಾರುಗಳನ್ನು ಕರೆದೊಯ್ಯದಂತೆ ಮನವಿ ಮಾಡಿದ್ದಾರೆ.

ರಂಗನತಿಟ್ಟು ದೋಣಿ ವಿಹಾರ ಸ್ಥಗಿತ

ಮೈಸೂರು, ಜೂ.25(ಎಂಟಿವೈ)– ಕೆಆರ್‌ಎಸ್ ಜಲಾಶಯದಿಂದ 30 ಸಾವಿರ ಕ್ಯುಸೆಕ್‌ಗೂ ಹೆಚ್ಚು ನೀರನ್ನು ನದಿಗೆ ಬಿಡುತ್ತಿರುವುದರಿಂದ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ.

ವಲಸೆ ಪಕ್ಷಿ ಸೇರಿದಂತೆ ಅಪಾರ ಪಕ್ಷಿ ಸಂಕುಲನದೊಂದಿಗೆ ನೈಸರ್ಗಿಕ ಸಂಪತ್ತು ಹೊಂದಿರುವ ರಂಗನತಿಟ್ಟು ಪಕ್ಷಿಧಾಮಕ್ಕೆ ದೇಶ–ವಿದೇಶದಿಂದಲೂ ಪ್ರವಾಸಿಗರು, ಪಕ್ಷಿ ಪ್ರಿಯರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದು, ದೋಣಿ ವಿಹಾರಕ್ಕೆ ಬಯಸುತ್ತಾರೆ. ಆದರೆ, ಎರಡು ದಿನದಿಂದ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದು, ಪ್ರವಾಹದ ಮುನ್ಸೂಚನೆ ಇರುವುದರಿಂದ ಪ್ರವಾಸಿಗರ ಹಿತದೃಷ್ಟಿಯಿಂದ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ಕೆಆರ್‌ಎಸ್ ಜಲಾಶಯದಿಂದ 50 ಸಾವಿರ ಕ್ಯುಸೆಕ್‌ವರೆಗೂ ನೀರು ಬಿಡುವ ಸಾಧ್ಯತೆ ಇರುವುದರಿಂದ ಜಲಾನಯನದ ತಗ್ಗು ಪ್ರದೇಶದ ಜನ ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ಹಾಗಾಗಿ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ಆದರೆ, ಪ್ರವಾಸಿಗರು ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ ನೀಡಬಹುದಾಗಿದೆ. ಜಲಾಶಯದಿಂದ 90 ಸಾವಿರದಿಂದ 1 ಲಕ್ಷ ಕ್ಯುಸೆಕ್ ನೀರು ಬಿಟ್ಟರೆ, ಉದ್ಯಾನವನಕ್ಕೂ ನೀರು ನುಗ್ಗುತ್ತದೆ. ಆಗ ಮಾತ್ರ ಪಕ್ಷಿಧಾಮಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗುತ್ತದೆ.

ಕೊಡಗಲ್ಲಿ ಮಳೆ ಆರ್ಭಟ; ಜನ ಜೀವನ ಅಸ್ತವ್ಯಸ್ತ



- ತುಂಬಿ ಹರಿಯುತ್ತಿರುವ ಕಾವೇರಿ
- ಎನ್‌ಡಿಆರ್‌ಎಫ್ ತಂಡದಿಂದ ವ್ಯಾಪಕ ಎಚ್ಚರಿಕಾ ಕ್ರಮ; ಸಂಚಾರಕ್ಕೆ ವ್ಯತ್ಯಯ

ಮಡಿಕೇರಿ,ಜೂ.25–ಕೊಡಗು ಜಿಲ್ಲೆಯಲ್ಲಿ ಆರಿದ್ರಾ ಮಳೆ ಅಬ್ಬರ ಶುರುವಾಗಿದ್ದು, ಜನ ಜೀವನ ಅಸ್ತವ್ಯಸ್ತವಾಗುತ್ತಿದೆ. ಮಳೆ ತೀವ್ರತೆಯ ನಡುವೆಯೇ ಭಾರತೀಯ ಹವಾಮಾನ ಇಲಾಖೆ ಮುಂದಿನ 24 ಗಂಟೆಗಳ ಕಾಲ ಜಿಲ್ಲೆಯಾದ್ಯಂತ 'ರೆಡ್ ಅಲರ್ಟ್' ಘೋಷಣೆ ಮಾಡಿದೆ. ಎಡೆಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ಕೆಲವು ಕಡೆಗಳಲ್ಲಿ ನದಿ ತೊರೆಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗಿರುವ ಬಗ್ಗೆ ವರದಿಯಾಗಿದೆ. ಕಾವೇರಿ ನದಿ ತುಂಬಿ ಹರಿಯುತ್ತಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಮೂರ್ನಾಡು ಬೇತ್ರಿ, ಬಲಮುರಿ, ಸಿದ್ದಾಪುರದ ನೆಲ್ಯಹುದಿಕೇರಿ, ಕರಡಿಗೋಡು ಬಳಿ ಮೈದುಂಬಿ ಹರಿಯುತ್ತಿದ್ದು, ಇದೇ ರೀತಿ ಮಳೆ ಮುಂದುವರೆದರೆ ನದಿ ಪಾತ್ರದ ಮನೆಗಳಿಗೆ ನೀರು ನುಗ್ಗುವ ಸಾಧ್ಯತೆಗಳಿವೆ. ಇತ್ತ ಚೇರಂಬಾಣೆ ಸಮೀಪದ ದೋಣಿ ಕಡುವು ಭಾಗದಲ್ಲಿ ಪ್ರವಾಹ ಪರಿಸ್ಥಿತಿಯಿಂದ ಪರಿಣಾಮ ಬೇಂಗೂರು ಮತ್ತು ಎಮ್ಮೆಮಾಡು ಸಂಪರ್ಕ ಕಡಿತಗೊಂಡಿದೆ. ಸ್ಥಳೀಯರ ಅನುಕೂಲಕ್ಕೆ ದೋಣಿ ವ್ಯವಸ್ಥೆ ಮಾಡಲಾಗಿದೆ.

ಎನ್‌ಡಿಆರ್‌ಎಫ್ ಪರಿಶೀಲನೆ: ಈಗಾಗಲೇ ಜಿಲ್ಲೆಯಲ್ಲಿ ಎನ್‌ಡಿಆರ್‌ಎಫ್‌ಯೋಧರ ತಂಡ ಬೀಡು ಬಿಟ್ಟಿದ್ದು, 10ನೇ ಕಮಾಂಡ್‌ನ ಸಹಾಯಕ ಕಮಾಂಡೆಂಟ್ ಕಿರಣ್‌ಕುಮಾರ್ ಜಿಲ್ಲೆಗೆ ಭೇಟಿ ನೀಡಿದ್ದರು. ಈಗಾಗಲೇ ನಿಯೋಜನೆಗೊಂಡಿರುವ ಎನ್‌ಡಿಆರ್‌ಎಫ್ ತಂಡದ ಸನ್ನದ್ಧತೆ ಪರಿಶೀಲಿಸಿದರು. ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತ ಆರ್.ಎಂ. ಅನನ್ಯ ವಾಸುದೇವರೊಡನೆ ಸಮಾಲೋಚನೆ ನಡೆಸಿ, ಸಿಬ್ಬಂದಿಗಳೊಂದಿಗೆ ಭೂ ಕುಸಿತ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚೆಯ್ಯಂಡಾಣೆ ನರಿಯಂದಡ ಗ್ರಾಮ ಪಂಚಾಯಿತಿಗೆ ಒಳಪಟ್ಟ ನಾಪೋಕ್ಲು ಹೋಬಳಿಯ ಕರಡ ಗ್ರಾಮದಲ್ಲಿ ಸುರಿದ ಬಾರಿ ಗಾಳಿ ಮಳೆಗೆ ಗ್ರಾಮದ ನಿವಾಸಿ ಟಿ.ಡಿ.ಚಿಣ್ಣಪ್ಪ ಎಂಬುವರ ವಾಸದ ಮನೆಯ ಪಕ್ಕದಲ್ಲಿದ್ದ ಶೌಚಾಲಯದ ಮೇಲೆ ಬೃಹತ್ ಗಾತ್ರದ ಮರ ಬಿದ್ದು ನಷ್ಟ ಉಂಟಾಗಿದೆ. ಬೇತು ರಸ್ತೆಯಲ್ಲಿರುವ ಕಟ್ಟಡ ಒಂದರ ಹಿಂಭಾಗದಲ್ಲಿ ಬರೆ ಜರಿದು ಕಟ್ಟಡದ ಒಂದು ಭಾಗಕ್ಕೆ ಹಾನಿ ಉಂಟಾಗಿದೆ. ಕಟ್ಟಡದ ಹಿಂಬದಿಯ ಬರೆಯ ಮೇಲೆ ಮನೆ ಕೂಡ ಇದ್ದು ಅಪಾಯ ಸಂಭವಿಸುವ ಸಾಧ್ಯತೆ ಇದೆ.

ಭಾರಿ ಮಳೆಯಿಂದಾಗಿ ದಕ್ಷಿಣ ಕೊಡಗಿನ ಬಿರುನಾಣಿ, ಶ್ರೀಮಂಗಲ, ಟಿ.ಶೆಟ್ಟಿಗೇರಿ, ಬಿ. ಶೆಟ್ಟಿಗೇರಿ, ಕುಟ್ಟ, ಹುದಿಕೇರಿ ಗಾಪಂ ವ್ಯಾಪ್ತಿಯಲ್ಲಿ ಗಾಳಿ ಸಹಿತ ಭಾರಿ ಮಳೆ ಸುರಿಯುತ್ತಿದೆ. ಮಳೆಯಿಂದ ಇಲ್ಲಿನ ಪ್ರಮುಖ ನದಿಗಳಾದ ಲಕ್ಷ್ಮಣ ತೀರ್ಥ, ರಾಮತೀರ್ಥ ಮತ್ತು ಕಕ್ಕಟ್ಟ್ ಪೊಳೆ ನದಿಗಳ ನೀರಿನ ಮಟ್ಟ ಏರಿಕೆಯಾಗಿದೆ. ಬಿರುನಾಣಿ–ಹುದಿಕೇರಿ ನಡುವಿನ ಹೈಸೊಡ್ಲೂರು–ಪೊರಾಡು ಸೇತುವೆ ಬಳಿ ರಸ್ತೆಗೆ ಬರೆ ಕುಸಿತವಾಗಿ ರಸ್ತೆಯ ಅರ್ಧ ಭಾಗಕ್ಕಿಂತ ಹೆಚ್ಚು ಮಣ್ಣು ತುಂಬಿದೆ. ಇದರಿಂದ ಲಘು ವಾಹನಗಳು ಮಾತ್ರ ಸಂಚರಿಸುತ್ತಿದ್ದು, ದೊಡ್ಡ ವಾಹನಗಳು ಮತ್ತು ಶಾಲಾ ಬಸ್ಸುಗಳಿಗೆ ಸಂಚಾರ ಕಡಿತವಾಗಿದೆ. ತೀವ್ರ ಮಳೆಯಿಂದ ರಸ್ತೆಗಳಲ್ಲಿ ನದಿಯಂತೆ ನೀರು ಹರಿಯುತ್ತಿದ್ದು, ವಾಹನ ಸಂಚಾರ ತ್ರಾಸದಾಯಕವಾಗಿದೆ.

'ರಜೆ'– ಮಕ್ಕಳಿಗೆ ಸಜೆ: ಜಿಲ್ಲೆಯಲ್ಲಿ ಭಾರಿ ಮಳೆ ಸುರಿಯುತ್ತಿದ್ದರೂ ಶಿಕ್ಷಣ ಇಲಾಖೆ ತಡವಾಗಿ ಅಂಗನವಾಡಿ, ಶಾಲೆಗಳಿಗೆ ರಜೆ ಘೋಷಣೆ ಮಾಡುತ್ತಿರುವುದು ಪೋಷಕರ ಆಕ್ರೋಶಕ್ಕೆ ಕಾರಣವಾಗುತ್ತಿದೆ. ಮಂಗಳವಾರ ಹಗಲಿನ ವೇಳೆ ಮಳೆ ತುಸು ಬಿಡುವು ನೀಡಿದ್ದ ಕಾರಣ ಅಂಗನವಾಡಿ ಹಾಗೂ ಶಾಲೆಗಳಿಗೆ ರಜೆ ಘೋಷಣೆ ಮಾಡಿರಲಿಲ್ಲ. ಆದರೆ ರಾತ್ರಿ ವೇಳೆ ಮಳೆಯ ತೀವ್ರತೆ ಏಕಾಏಕಿ ಏರಿಕೆ ಕಂಡು ಬಂದ ಹಿನ್ನೆಲೆಯಲ್ಲಿ ಬುಧವಾರ ಬೆಳಗಿನ ವೇಳೆ ರಜೆ ಘೋಷಣೆ ಮಾಡಲಾಯಿತು ಇದರಿಂದ ಅದಾಗಲೇ ಶಾಲೆ ತಲುಪಿದ್ದ ಮಕ್ಕಳು ಅತಂತ್ರ ಸ್ಥಿತಿಗೆ ಸಿಲುಕುವಂತಾಯಿತು. ಶಿಕ್ಷಣ ಇಲಾಖಾಧಿಕಾರಿಗಳು ತಡವಾಗಿ ರಜೆಯ ಬಗ್ಗೆ ತೆಗೆದುಕೊಂಡ ನಿರ್ಧಾರದಿಂದ ಶಾಲಾ ಮಕ್ಕಳು ಹಾಗೂ ಪೋಷಕರು ಪರದಾಡುವಂತಹ ಪರಿಸ್ಥಿತಿ ಎದುರಾಗಿತ್ತು.

ನದಿಗೆ ನೀರು ಬಿಡುಗಡೆ: ಕಾವೇರಿ ನದಿ ಪಾತ್ರ ವ್ಯಾಪ್ತಿಯಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಹಾರಂಗಿ ಜಲಾಶಯದ ಒಳ ಹರಿವಿನ ಪ್ರಮಾಣ ತೀವ್ರ ಏರಿಕೆ ಕಂಡು ಬಂದಿದೆ. ಜಲಾಶಯದಿಂದ ಏಕಾಏಕಿ ನೀರು ಹರಿಸಿದಲ್ಲಿ ಪ್ರವಾಹ ಏರ್ಪಡುವ ಸಾಧ್ಯತೆಗಳು ಇದ್ದ ಹಿನ್ನೆಲೆಯಲ್ಲಿ ಒಳ ಹರಿವನ್ನು ಆಧರಿಸಿ ಬುಧವಾರ ಸಂಜೆ ವೇಳೆ ಜಲಾಶಯದಿಂದ ನದಿ ಪಾತ್ರಕ್ಕೆ ಹರಿಸಲಾಗುತ್ತಿದ್ದ ನೀರಿನ ಪ್ರಮಾಣವನ್ನು 5 ಸಾವಿರದಿಂದ 10 ಸಾವಿರ ಕ್ಯುಸೆಕ್‌ಗೆ ಏರಿಕೆ ಮಾಡಿ ಹೆಚ್ಚುವರಿ ನೀರನ್ನು ನದಿಗೆ ಹರಿಯ ಬಿಡಲಾಯಿತು.

ಇಂದು ಶಾಲಾ ಕಾಲೇಜುಗಳಿಗೆ ರಜೆ

ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆ ಜಿಲ್ಲೆಯ ಎಲ್ಲಾ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆ, ಪದವಿ ಪೂರ್ವ ಕಾಲೇಜಿಗೆ ನಾಳೆ (ಜೂ.26) ರಜೆ ನೀಡಲಾಗಿದೆ ಎಂದು ಡಿಸಿ ವೆಂಕಟ್‌ರಾಜಾ ಆದೇಶಿಸಿದ್ದಾರೆ.

ಮೃತ ಪತ್ನಿ ಜೀವಂತವಾಗಿ ಪ್ರತ್ಯಕ್ಷವಾದ ಪ್ರಕರಣ: ಆರೋಪಮುಕ್ತ ಪತಿ ಹೈಕೋರ್ಟ್ ಮೊರೆ

ಬಲಿಪಶುವಾಗಿ ಪರಿಗಣಿಸಿ; 5 ಕೋಟಿ ಪರಿಹಾರಕ್ಕೆ ಕೋರಿಕೆ

ಮೈಸೂರು, ಜೂ.25(ಆರ್‌ಕೆ)–ಮೃತ ಪತ್ನಿ ಜೀವಂತವಾಗಿ ಪ್ರತ್ಯಕ್ಷವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಬೆಳವಣಿಗೆಯಲ್ಲಿ ಕೊಲೆ ಆರೋಪದಿಂದ ಮುಕ್ತವಾಗಿರುವ ಪತಿ ಸುರೇಶ್, ತನ್ನನ್ನು ಬಲಿಪಶು ಎಂದು ಪರಿಗಣಿಸಿ, 5 ಕೋಟಿ ರೂ. ಪರಿಹಾರ ದೊರಕಿಸಿ ಕೊಡುವಂತೆ ಹೈಕೋರ್ಟ್ ಮೊರೆ ಹೋಗಿದ್ದಾರೆ.



ಸುರೇಶ್

2025ರ ಏಪ್ರಿಲ್ 23ರಂದು ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಸುರೇಶ್‌ನನ್ನು ಎಲ್ಲಾ ಆರೋಪಗಳಿಂದ ಮುಕ್ತಗೊಳಿಸಿದೆ. ಬಿ.ಜಿ.ಪ್ರಕಾಶ್ ಸೇರಿದಂತೆ ಇತರ ನಾಲ್ವರು ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದಲ್ಲದೆ, ದೂರು ದಾಖಲಿಸಲು ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗೆ ಅಧಿಕಾರ ನೀಡಿ ತೀರ್ಪು ನೀಡಿತ್ತು.

ಸುರೇಶ್ ಈಗ ಹೈಕೋರ್ಟ್‌ನಲ್ಲಿ ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಅಂದಿನ ಬೆಟ್ಟದಪುರ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಮಾತ್ರವಲ್ಲದೆ, ಎಎಸ್‌ಐ ಸೋಮಶೇಖರ್, ಎಎಸ್‌ಪಿ ಜಿತೇಂದ್ರಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಎಂ.ಪ್ರಕಾಶ್, ಎತ್ತಿನಮಣಿ ಮತ್ತು ಬಿ.ಕೆ.ಮಹೇಶ್ ವಿರುದ್ಧ ಕ್ರಮವಾಗಬೇಕು ಹಾಗೂ ತಮಗೆ ಪರಿಹಾರ ಕಲ್ಪಿಸಬೇಕೆಂದು ಅವರು ಅರ್ಜಿಯಲ್ಲಿ ಕೋರಿದ್ದಾರೆ.

ಸುರೇಶ್ ಪರ ಹೈಕೋರ್ಟ್‌ನಲ್ಲಿ ವಾದ ಮಂಡಿಸಿರುವ ವಕೀಲ ಪಾಂಡು ಪೂಜಾರಿ ಅವರು, ಆರೋಪಿಗೆ ಪರಿಹಾರ ನೀಡಲು ಅವಕಾಶವಿಲ್ಲದಿರುವುದರಿಂದ 'ಆರೋಪಿ' ಪದ ತೆಗೆದು ಹಾಕಿ 'ಬಲಿಪಶು' ಎಂದು ಪರಿಗಣಿಸುವಂತೆ ವಾದ ಮಂಡಿಸಿದ್ದಾರೆ.

ಈ ಪ್ರಕರಣದಲ್ಲಿ ಸುರೇಶ್ ನಿಜವಾಗಲೂ ಬಲಿಪಶುವಾಗಿದ್ದು, ಅವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ವಕೀಲ ಪಾಂಡು ಪೂಜಾರಿ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಪತ್ನಿ ಮಲ್ಲಿಗೆಯನ್ನು ಕೊಲೆ ಮಾಡಲಾಗಿದೆ ಎಂಬ ಆರೋಪದಲ್ಲಿ 2021ರ ಜೂನ್ ಮಾಹೆಯಲ್ಲಿ ಬೆಟ್ಟದಪುರ ಠಾಣೆ ಪೊಲೀಸರು ಸುರೇಶ್‌ನನ್ನು ಬಂಧಿಸಿದ್ದರು. 2 ವರ್ಷಗಳ ಕಾಲ ಜೈಲುವಾಸ ಅನುಭವಿಸಿದ ಬಳಿಕ ಹೈಕೋರ್ಟ್‌ನಿಂದ ಜಾಮೀನು ಪಡೆದು ಹೊರ ಬಂದಿದ್ದ ಸುರೇಶ್, ಮದುವೆಯಾಗಿ 18 ವರ್ಷ ಕಳೆದಿತ್ತಲ್ಲದೇ ಇಬ್ಬರು ಮಕ್ಕಳಿದ್ದರು.

2025ರ ಏಪ್ರಿಲ್ 1ರಂದು ಕೊಲೆ ಮಾಡಲಾಗಿದೆ ಎನ್ನಲಾದ ಮಲ್ಲಿಗೆ ಮಡಿಕೇರಿಯ ಹೋಟೆಲ್‌ವೊಂದರಲ್ಲಿ ತನ್ನ ಪ್ರಿಯಕರ ಗಣೇಶ್ ಎಂಬುವನೊಂದಿಗೆ ತಿಂಡಿ ತಿನ್ನುವಾಗ ಪತ್ತೆಯಾಗಿದ್ದಳು. ಎಚ್ಚೆತ್ತ ಮಡಿಕೇರಿ ಪೊಲೀಸರು ಮಲ್ಲಿಗೆಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಕಳೆದ 5 ವರ್ಷಗಳಿಂದ ಪೊನ್ನಂಪೇಟೆ ತಾಲೂಕಿನ ಶೆಟ್ಟಿಗೇರಿ ಗ್ರಾಮದಲ್ಲಿ ಗಣೇಶ್ ಜೊತೆ ವಾಸಿಸುತ್ತಿದ್ದಾಗಿ ಆಕೆ ಹೇಳಿಕೆ ನೀಡಿದ್ದಳು.

ಜೆ.ಕೆ.ಸಂಸ್ಥೆಯಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಜೆಕೆ ಸಂಸ್ಥೆ ವತಿಯಿಂದ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಮೈಸೂರು,ಜೂ.25–ದೇಶದ ಪ್ರಮುಖ ಕೈಗಾರಿಕಾ ಸಂಘಟನೆಯಾದ ಜೆಕೆ ಸಂಸ್ಥೆಯು ಸಂಸ್ಥೆಯ ಮಾಜಿ ಅಧ್ಯಕ್ಷ ದಿವಂಗತ ಹರಿಶಂಕರ್ ಸಿಂಘಾನಿಯಾ ಅವರ 92ನೇ ಜನ್ಮ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ತನ್ನ ವಿವಿಧ ಸ್ಥಾವರಗಳು ಮತ್ತು ಮಾರಾಟ ಕಚೇರಿಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಿತ್ತು.

ಸಮೂಹದ ಕಂಪನಿಗಳಾದ್ಯಂತ ಸುಮಾರು 7,800 ಉದ್ಯೋಗಿಗಳು ರಕ್ತದಾನ ಮಾಡಿದರು. ರಕ್ತದಾನಕ್ಕೆ ಮುಂಚಿತವಾಗಿ, ಎಲ್ಲರ ರಕ್ತದೊತ್ತಡ, ಹಿಮೋಗ್ಲೋಬಿನ್ ಮತ್ತು ತೂಕ ಸೇರಿದಂತೆ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು. ಪ್ರತಿಯೊಬ್ಬ ರಕ್ತ ದಾನಿಗೂ ಪ್ರಮಾಣಪತ್ರವನ್ನು ನೀಡಲಾಯಿತು.

ಈ ವೇಳೆ ಜೆಕೆ ಸಂಸ್ಥೆಯ ಅಧ್ಯಕ್ಷ ಭರತ್ ಹರಿ ಸಿಂಘಾನಿಯಾ ಮಾತನಾಡಿ, ಉದ್ಯಮವು ಉನ್ನತ ಉದ್ದೇಶವನ್ನು ಪೂರೈಸಬೇಕು ಎಂದು ನಮ್ಮ ಸಂಸ್ಥಾಪಕರು ದೃಢವಾಗಿ ನಂಬಿದ್ದರು. ಆ ನಂಬಿಕೆಯು ನಮಗೆ ಮಾರ್ಗದರ್ಶನ ನೀಡುತ್ತಲೇ ಇದೆ. ನೂರು ವರ್ಷಗಳಿಗೂ ಹೆಚ್ಚು ಕಾಲ, ಜೆಕೆ ಸಂಸ್ಥೆಯು ಸಮುದಾಯಗಳ ಯೋಗಕ್ಷೇಮವನ್ನು ತನ್ನ ಧ್ಯೇಯದ ಹೃದಯಭಾಗದಲ್ಲಿ ಇರಿಸಿದೆ. ಜೆಕೆಓ ಗ್ರೂಪ್ ಕಂಪನಿಗಳಲ್ಲಿ ವ್ಯಾಪಿಸಿರುವ ಈ ರಕ್ತದಾನ ಅಭಿಯಾನವು ತುರ್ತು ಅಗತ್ಯವಿರುವವರನ್ನು ಬೆಂಬಲಿಸಲು ಒಂದು ಅರ್ಥಪೂರ್ಣ ಮಾರ್ಗವಾಗಿದೆ. ರಾಷ್ಟ್ರ ನಿರ್ಮಾಣ, ಸಾಮಾಜಿಕ ಸೇವೆ ಮತ್ತು ಆರ್ಥಿಕ ಪ್ರಗತಿಗೆ ಜೀವನವನ್ನು ಮುಡಿಪಾಗಿಟ್ಟ ನಾಯಕ ದಿವಂಗತ ಹರಿಶಂಕರ್ ಸಿಂಘಾನಿಯಾ. ಅವರ ಜನ್ಮ ವಾರ್ಷಿಕೋತ್ಸವದಂದು ಅವರ ಶಾಶ್ವತ ಪರಂಪರೆಗೆ ಇದು ಗೌರವವಾಗಿದೆ ಎಂದರು.

ಹುಚ್ಚುನಾಯಿ ಕಚ್ಚಿದ್ದರಿಂದ ಅಸ್ವಸ್ಥಗೊಂಡಿದ್ದ ಬಸವ ಸಾವು



ಹುಚ್ಚುನಾಯಿ ಕಚ್ಚಿದ್ದರಿಂದ ಅಸ್ವಸ್ಥಗೊಂಡಿದ್ದ ಮೇಟಗಳ್ಳಿಯ ಮಹಾಲಿಂಗೇಶ್ವರ ದೇವಾಲಯದ ಬಸವ ಸಾವನ್ನಪ್ಪಿರುವುದು.

ಮೈಸೂರು, ಜೂ.25(ಆರ್‌ಕೆ)–ಹುಚ್ಚುನಾಯಿ ಕಚ್ಚಿದ್ದರಿಂದ ಅಸ್ವಸ್ಥಗೊಂಡಿದ್ದ ಮೇಟಗಳ್ಳಿಯ ಮಹಾಲಿಂಗೇಶ್ವರ ದೇವಾಲಯದ ಬಸವ, ಚಿಕಿತ್ಸೆ ಫಲಕಾರಿಯಾಗದೇ ಇಂದು ಸಂಜೆ ಕೊನೆಯುಸಿರೆಳೆದಿದೆ.

ಇತ್ತೀಚೆಗೆ ಹುಚ್ಚುನಾಯಿ ಕಡಿದ ಪರಿಣಾಮ, ರೇಬಿಸ್ ಸೋಂಕಿನಿಂದ ಅಡ್ಡಾದಿಡ್ಡಿ ಓಡಾಡಿ ಸ್ಥಳೀಯರಲ್ಲಿ ಭೀತಿ ಹುಟ್ಟಿಸಿತ್ತು. ನಂತರ ಮೇಟಗಳ್ಳಿಯ ಕೆಲ ಯುವಕರು ಬಸವನನ್ನು ಹಿಡಿದು ಕಟ್ಟಿ ಹಾಕಿ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಿದ್ದರಾದರೂ, ಚೇತರಿಸಿಕೊಳ್ಳದೇ ಬುಧವಾರ ಸಂಜೆ ಕೊನೆಯುಸಿರೆಳೆಯಿತು.

ನಂತರ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯೇ ಸ್ಥಳೀಯರು ಬಸವನ ಅಂತ್ಯಕ್ರಿಯೆ ನೆರವೇರಿಸಿದರು.

ಮೈಸೂರಿನ ಪುರಿ ಜಗನ್ನಾಥ ದೇಗುಲದಲ್ಲಿ 5ನೇ ವರ್ಷದ ಪ್ರತಿಷ್ಠಾಪನೆ, ಮೆರವಣಿಗೆ

ಮೈಸೂರು, ಜೂ.25(ಜಿಎ)–ಮೈಸೂರಿನ ವಿದ್ಯಾರಣ್ಯಪುರಂನಲ್ಲಿನ ಪುರಿ ಜಗನ್ನಾಥ ದೇಗುಲದ 5ನೇ ವರ್ಷದ ಪ್ರತಿಷ್ಠಾಪನೆ ಅಂಗವಾಗಿ ಜೂ.27ರಂದು ರಥಯಾತ್ರೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದೇಗುಲದ ಟ್ರಸ್ಟಿ ಘನಶ್ಯಾಂ ಪ್ರಧಾನ್ ಈ ವಿಷಯ ತಿಳಿಸಿ, ಅಂದು ಮಧ್ಯಾಹ್ನ 1.30ಕ್ಕೆ ರಥಯಾತ್ರೆ ಎನ್‌ಐಇ ಕಾಲೇಜು ಬಳಿ ಆರಂಭವಾಗಿ ವಿವಿಧ ಪ್ರಮುಖ ರಸ್ತೆಗಳಲ್ಲಿ ಸಾಗಲಿದ್ದು, ಸಂಸದ ಯದುವೀರ್ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಇದು ನಾಲ್ಕನೇ ವರ್ಷದ ರಥಯಾತ್ರೆಯಾಗಿದೆ. ಜು.8ರವರೆಗೂ ನಿತ್ಯ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿ.ಎಂ.ಗೋಪಾಲಕೃಷ್ಣ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.25–ಜೂ.26ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ರಾಮಾನುಜ ರಸ್ತೆ 1ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್‌ಗೇಟ್, ತಾವರೆಕೆರೆ, ರೇಸ್‌ಕೋರ್ಸ್ ಹಿಂಭಾಗ, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತಮುತ್ತ, ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಚಾಮುಂಡಿಬೆಟ್ಟ, ಸಿದ್ದಾರ್ಥ ನಗರ, ಕುರುಬಾರಹಳ್ಳಿ, ಜೆ.ಸಿ.ನಗರ, ಕೆ.ಸಿ.ನಗರ, ಜೆಎಸ್‌ಎಸ್ ಆಯುರ್ವೇದಿಕ್ ಸುತ್ತಮುತ್ತ, ಅರಮನೆ ಸುತ್ತಮುತ್ತ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತ, ಧನ್ವಂತರಿ ರಸ್ತೆ, ಶಿವರಾಂಪೇಟೆ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೇಂದ್ರ ಸರ್ಕಾರ ಬೆಲೆ ಏರಿಸಿದ್ರೆ ಮೋದಿ ರಾಜೀನಾಮೆ ಕೇಳ್ತೀರಾ

ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಪ್ರಶ್ನೆ



ಮೈಸೂರು, ಜೂ.25–ರಾಜ್ಯದಲ್ಲಿ ಬೆಲೆ ಏರಿಕೆಯಾದರೆ ಎಲ್ಲದಕ್ಕೂ ಮುಖ್ಯಮಂತ್ರಿಯೇ ಕಾರಣ ಎನ್ನುವ ಬಿಜೆಪಿ ನಾಯಕರು ಕೇಂದ್ರದಲ್ಲಿ ಬೆಲೆ ಏರಿಕೆಯಾದರೆ ಮೋದಿ ಕಾರಣ ಎನ್ನುತ್ತೀರಾ? ಮೋದಿ ರಾಜೀನಾಮೆ ಕೇಳ್ತೀರಾ? ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಪ್ರಶ್ನೆ ಮಾಡಿದ್ದಾರೆ.

ಸಿದ್ದರಾಮಯ್ಯ ಸರ್ಕಾರ ಹಾಲಿನ ದರ ಏರಿಸಿದ್ದಕ್ಕೆ ಬಿಜೆಪಿ ನಾಯಕರು ಬೊಬ್ಬೆಹೊಡೆದುಕೊಳ್ಳುತ್ತಿದ್ದರು. ಈಗ ಕೇಂದ್ರ ಸರ್ಕಾರ ರೈಲು ಟಿಕೆಟ್ ದರ ಏರಿಕೆ ಮಾಡಲು ಮುಂದಾಗಿದೆ. ಈಗ ಕೇಂದ್ರದ ವಿರುದ್ಧ ಇವರ ನಿಲುವೇನು? ಇಲ್ಲಿ ಸಿದ್ದರಾಮಯ್ಯರ ರಾಜೀನಾಮೆ ಕೇಳುವವರು ಕೇಂದ್ರದಲ್ಲಿ ಮೋದಿ ರಾಜೀನಾಮೆ ಕೇಳುತ್ತಾರಾ ಎಂದು ಪ್ರಶ್ನೆ ಮಾಡಿದ್ದಾರೆ.

ಸಿದ್ದರಾಮಯ್ಯ 2ನೇ ಬಾರಿ ಸಿಎಂ ಆಗಿ ಈಗಾಗಲೇ 2 ವರ್ಷ ಯಶಸ್ವಿಯಾಗಿ ಪೂರೈಸಿದ್ದಾರೆ. 569 ಭರವಸೆಗಳಲ್ಲಿ 249 ಭರವಸೆಗಳನ್ನು ಈಡೇರಿಸಿ ಸಮೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರ ವರ್ಷದಿಂದ ವರ್ಷಕ್ಕೆ ರಸಗೊಬ್ಬರ, ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ದರ ಏರಿಸುತ್ತಿದೆ. ಈಗ ರೈಲಿನ ಟಿಕೆಟ್ ದರ ಕೂಡ ಏರಿಕೆ ಮಾಡುತ್ತಿದೆ ಇದೆಲ್ಲವೂ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಕುಟುಕಿದ್ದಾರೆ.

ದೇಶ - ವಿದೇಶ

ಅಮೆರಿಕದ ದಾಳಿಯಿಂದ ಪರಮಾಣು ಘಟಕಗಳಿಗೆ ತೀವ್ರ ಹಾನಿಯಾಗಿದೆ: ಇರಾನ್



ದುಬೈ: ಅಮೆರಿಕ ನಡೆಸಿದ ಬಾಂಬ್ ದಾಳಿಯಿಂದಾಗಿ ನಮ್ಮ ಪರಮಾಣು ಘಟಕಗಳು ತೀವ್ರ ಹಾನಿಗೊಳಗಾಗಿವೆ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ದೃಢಪಡಿಸಿದ್ದಾರೆ.

ರಹಸ್ಯವಾಗಿ ಕಾರ್ಯಾಚರಣೆ ನಡೆಸಿ, ಶತ್ರು ರಾಷ್ಟ್ರಗಳ ಗುರಿಗಳನ್ನು ನಾಶ ಮಾಡುವ ಸಾಮರ್ಥ್ಯವುಳ್ಳ ಬಿ–2 ಯುದ್ಧ ವಿಮಾನಗಳನ್ನು ಬಳಸಿ ಬಾಂಬ್ ಹಾಕಲಾಗಿದೆ. 30 ಅತ್ಯಾಧುನಿಕ ಟೊಮಾಹಾಕ್ ಕ್ಷಿಪಣಿಗಳನ್ನು ಬಳಸಿ ದಾಳಿ ನಡೆಸಲಾಗಿದೆ ಎಂದು ಬಘೈ ತಿಳಿಸಿದ್ದಾರೆ. ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಲ್ಲಿ ಮಧ್ಯಪ್ರವೇಶಿಸುವ ಕುರಿತು ಶೀಘ್ರವೇ ನಿರ್ಧರಿಸಲಾಗುವುದು ಎಂದು ಹೇಳುತ್ತಿದ್ದ ಅಮೆರಿಕ, ಶನಿವಾರ ತಡರಾತ್ರಿ ಇರಾನ್‌ನ ಮೂರು ಪ್ರಮುಖ ಪರಮಾಣು ಘಟಕಗಳ ಮೇಲೆ ಭಾರಿ ಬಾಂಬ್ ದಾಳಿ ನಡೆಸಿತ್ತು. 'ಇರಾನ್‌ನ ಫೋರ್ಡೋ, ನಟಾನ್ಜ್ ಹಾಗೂ ಎಸ್‌ಫಹಾನ್‌ನಲ್ಲಿರುವ ಪರಮಾಣು ಘಟಕಗಳನ್ನು ಗುರಿಯಾಗಿಸಿ ಅಮೆರಿಕವು 'ಆಪರೇಷನ್ ಮಿಡ್‌ನೈಟ್ ಹ್ಯಾಮರ್' ಹೆಸರಿನ ಸೇನಾ ಕಾರ್ಯಾಚರಣೆ ನಡೆಸಿತ್ತು.

ನೈನಿತಾಲ್: ಕಾರ್ಯಕ್ರಮದಲ್ಲಿ ಕುಸಿದು ಬಿದ್ದ ಉಪರಾಷ್ಟ್ರಪತಿ ಧನಕರ್



ಡೆಹ್ರಾಡೂನ್: ಮೂರು ದಿನಗಳ ಉತ್ತರಾಖಂಡ ಪ್ರವಾಸದಲ್ಲಿರುವ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಬುಧವಾರ ಹಲ್ದ್ವಾನಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಠಾತ್ತನೆ ಕುಸಿದು ಬಿದ್ದಿದ್ದು, ತಕ್ಷಣ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ನಂತರ ಅವರನ್ನು ನೈನಿತಾಲ್ ರಾಜಭವನಕ್ಕೆ ಕರೆದೊಯ್ಯಲಾಯಿತು.

ಕುಮಾವೂನ್ ವಿಶ್ವವಿದ್ಯಾಲಯದ 50ನೇ ವಾರ್ಷಿಕೋತ್ಸವ ಆಚರಣೆಗೆ ಉಪರಾಷ್ಟ್ರಪತಿಗಳು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಕಾರ್ಯಕ್ರಮ ಮುಗಿದ ಸ್ವಲ್ಪ ಸಮಯದ ನಂತರ ಅನಿರೀಕ್ಷಿತವಾಗಿ ಅವರ ಆರೋಗ್ಯ ಹದಗೆಟ್ಟಿತು. ಹಿಂದಿನ ದಿನ, ರಾಜ್ಯಕ್ಕೆ ಆಗಮಿಸಿದ ಉಪರಾಷ್ಟ್ರಪತಿಯನ್ನು ಹಲ್ದ್ವಾನಿ ಸೇನಾ ಹೆಲಿಪ್ಯಾಡ್‌ನಲ್ಲಿ ಗವರ್ನರ್ ಲೆಫ್ಟಿನೆಂಟ್ ಜನರಲ್ ಗುರ್ಮಿತ್ ಸಿಂಗ್(ನಿವೃತ್ತ) ಅವರು ಸ್ವಾಗತಿಸಿದ್ದರು.

ನೈನಿತಾಲ್‌ನ ಕುಮಾವೂನ್ ವಿವಿಯಲ್ಲಿ ನಡೆದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಉಪರಾಷ್ಟ್ರಪತಿ ಧನಕರ್ ಭಾಷಣದ ನಂತರ, ವೇದಿಕೆಯಿಂದ ಇಳಿದು ತಕ್ಷಣ ಅವರ ಆರೋಗ್ಯ ಏರುಪೇರಾಗಿದ್ದು, ಮಾಜಿ ಸಂಸದ ಡಾ.ಮಹೇಂದ್ರ ಸಿಂಗ್ ಪಾಲ್ ಅವರ ಮೇಲೆಯೇ ಕುಸಿದು ಬಿದ್ದರು. ಸ್ಥಳದಲ್ಲೇ ಇದ್ದ ವೈದ್ಯರ ತಂಡ ಪ್ರಾಥಮಿಕ ಚಿಕಿತ್ಸೆ ನೀಡಿತು.

ನ್ಯೂಯಾರ್ಕ್ ಮೇಯರ್ ಆಗಿ ಆಯ್ಕೆಯಾದ ಭಾರತೀಯ ಮೂಲದ ಜೋಹ್ರಾನ್ ಮಮ್ದಾನಿ



ನವದೆಹಲಿ: ಅಮೆರಿಕದ ನ್ಯೂಯಾರ್ಕ್ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಭಾರತೀಯ ಮೂಲದ 33 ವರ್ಷದ ಜೋಹ್ರಾನ್ ಮಮ್ದಾನಿ ಗೆಲುವು ಸಾಧಿಸಿದ್ದಾರೆ. ಈ ಚುನಾವಣೆಯಲ್ಲಿ ಮಾಜಿ ಗವರ್ನರ್ ಆಂಡ್ರ್ಯೂ ಕ್ಯುಮೊ ವಿರುದ್ಧ ಜೋಹ್ರಾನ್ ಮಮ್ದಾನಿ ಗೆಲುವು ಸಾಧಿಸಿದ್ದಾರೆ.

ಈ ಮೂಲಕ ಜೋಹ್ರಾನ್ ನ್ಯೂಯಾರ್ಕ್ ನಗರದ ಮೊದಲ ಮುಸ್ಲಿಂ ಮತ್ತು ಭಾರತೀಯ–ಅಮೆರಿಕನ್ ಮೇಯರ್ ಆಗಲಿದ್ದಾರೆ. ಪ್ರಸಿದ್ಧ ಭಾರತೀಯ ಅಮೇರಿಕನ್ ಚಲನಚಿತ್ರ ನಿರ್ಮಾಪಕಿ ಮೀರಾ ನಾಯರ್ ಮತ್ತು ಭಾರತೀಯ ಮೂಲದ, ಉಗಾಂಡಾದ ಮಾರ್ಕ್ಸ್‌ವಾದಿ ವಿದ್ವಾಂಸ ಮಹಮೂದ್ ಮಮ್ದಾನಿ ಅವರ ಪುತ್ರನಾಗಿರುವ ಜೋಹ್ರಾನ್ ಮಮ್ದಾನಿ, ಡೆಮಾಕ್ರಟಿಕ್ ಮೇಯರ್ ಪ್ರಾಥಮಿಕ ಚುನಾವಣೆಯಲ್ಲಿ ತಮ್ಮ ಅದ್ಭುತ ಗೆಲುವಿಗೆ ತಮ್ಮ ಬೆಂಬಲಿಗರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಫ್ರೆಂಚ್ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಕಂಪನಿ ಮಾಲೀಕನ ಬಂಧನ

ಉದಯಪುರ: ಜಾಹೀರಾತು ಚಿತ್ರೀಕರಣಕ್ಕಾಗಿ ಉದಯಪುರಕ್ಕೆ ಬಂದಿದ್ದ ಫ್ರೆಂಚ್ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಚಿತ್ತೋರ್‌ಗಢದ 29 ವರ್ಷದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಬಂಧಿತ ವ್ಯಕ್ತಿಯನ್ನು ಚಿತ್ತೋರ್‌ಗಢದ ಗ್ಯಾಂಗ್ರಾರ್ ನಿವಾಸಿ ಪುಷ್ಪರಾಜ್ ಅಲಿಯಾಸ್ ಸಿದ್ಧಾರ್ಥ್ ಓಜಾ ಎಂದು ಗುರುತಿಸಲಾಗಿದ್ದು, ಆರೋಪಿಯು ಕಾಸ್ಟಿಂಗ್ ಕಂಪನಿಯ ಮಾಲೀಕನಾಗಿದ್ದು, ಸಿನಿಮಾ, ಮ್ಯೂಸಿಕ್ ಆಲ್ಬಂ ಮತ್ತು ದೂರದರ್ಶನ ಧಾರಾವಾಹಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಪುಷ್ಪರಾಜ್ ಅವರ ಕಂಪನಿಯು ಜೂ.22ರಂದು ಉದಯಪುರದ ವಿವಿಧ ಸ್ಥಳಗಳಲ್ಲಿ, ಲೇಕ್ ಪಿಚೋಲಾ, ಸಜ್ಜನ್‌ಗಢ ಕೋಟೆ ಮತ್ತು ಸ್ಥಳೀಯ ರೆಸ್ಟೋರೆಂಟ್‌ಗಳಲ್ಲಿ ನಡೆದ ಮೊಬೈಲ್ ಜಾಹೀರಾತು ಚಿತ್ರೀಕರಣಕ್ಕಾಗಿ ಮಹಿಳೆಯನ್ನು ನೇಮಿಸಿಕೊಂಡಿದೆ. ಚಿತ್ರೀಕರಣದ ನಂತರ, ಕಂಪನಿಯ ಸಿಬ್ಬಂದಿ ಟೈಗರ್ ಹಿಲ್ ಬಳಿಯ ಕೆಫೆಯೊಂದರಲ್ಲಿ ಪಾರ್ಟಿ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಪಾರ್ಟಿಯ ನಂತರ, ಪುಷ್ಪರಾಜ್ ಫ್ರೆಂಚ್ ಮಹಿಳೆಯನ್ನು ಸುಖೇರ್‌ನಲ್ಲಿರುವ ತನ್ನ ಫ್ಲಾಟ್‌ಗೆ ಕರೆದೊಯ್ದು ಅಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ವಿಚಾರಣೆ ಸಮಯದಲ್ಲಿ ಪುಷ್ಪರಾಜ್ ಅಪರಾಧವನ್ನು ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಜ್ವಾಲಾಮುಖಿ ನೋಡಲು ಹೋಗಿದ್ದ ಬ್ರೆಜಿಲ್ ಮಹಿಳಾ ಟ್ರೆಕ್ಕರ್ ಶವವಾಗಿ ಪತ್ತೆ!



ಜಕಾರ್ತ: ಇಂಡೋನೇಷ್ಯಾದ ಸಕ್ರಿಯ ಜ್ವಾಲಾಮುಖಿಯ ಮೇಲೆ ಚಾರಣ ಮಾಡಲು ಹೋಗಿದ್ದ ಬ್ರೆಜಿಲಿಯನ್ ಮಹಿಳಾ ಟ್ರೆಕ್ಕರ್ ದುರಂತ ಸಾವಿಗೀಡಾಗಿದ್ದಾರೆ ಎಂದು ತಿಳಿದುಬಂದಿದೆ. ಇಂಡೋನೇಷ್ಯಾದ ಮೌಂಟ್ ರಿಂಜಾನಿಯಲ್ಲಿ ಚಾರಣ ಮಾಡುವಾಗ ಬ್ರೆಜಿಲ್ ಮೂಲದ ಮಹಿಳಾ ಟ್ರೆಕ್ಕರ್ ಜೂಲಿಯಾನ ಮರಿನ್ಸ್ ದುರಂತ ಸಾವಿಗೀಡಾಗಿದ್ದಾರೆ. ಟ್ರೆಕ್ಕಿಂಗ್ ವೇಳೆ ಜೂಲಿಯಾನ ಮರಿನ್ಸ್ ಎತ್ತರದ ಬಂಡೆಗಲ್ಲಿನಿಂದ ಕಾಲು ಜಾರಿ ಬಿದ್ದಿದ್ದರು. 4 ದಿನಗಳಾದರೂ ಜೂಲಿಯಾನ ಮರಿನ್ಸ್ ಪತ್ತೆಯಾಗಿರಲಿಲ್ಲ. ಇದೀಗ ಅಧಿಕಾರಿಗಳು ಶೋಧ ನಡೆಸಿ ಮರಿನ್ಸ್ ಮೃತದೇಹ ಪತ್ತೆ ಮಾಡಿದ್ದಾರೆ. ಇಂಡೋನೇಷ್ಯಾದ ಅಧಿಕಾರಿಗಳ ಪ್ರಕಾರ, 26 ವರ್ಷದ ಟ್ರಾವೆಲ್ ವ್ಲಾಗರ್ ಜೂಲಿಯಾನ ಮರಿನ್ಸ್ ಶನಿವಾರ ಬೆಳಿಗ್ಗೆ ಸ್ನೇಹಿತರ ಗುಂಪಿನೊಂದಿಗೆ ಮೌಂಟ್ ರಿಂಜಾನಿಯಲ್ಲಿ ಚಾರಣ ಮಾಡುತ್ತಿದ್ದರು. ಈ ವೇಳೆ ಎತ್ತರದ ಬಂಡೆಯ ತುದಿಯಲ್ಲಿ ಕಾಲು ಜಾರಿ ಬಿದ್ದಿದ್ದರು. ಈ ವೇಳೆ ಮರಿನ್ಸ್ ಸುಮಾರು 490 ಅಡಿ ಕೆಳಗೆ ಬಿದ್ದಿದ್ದಾರೆ. ಈಕೆಯೊಂದಿಗೆ ಚಾರಣಕ್ಕೆ ಬಂದಿದ್ದ ಸ್ನೇಹಿತರು ಈಕೆ ಬಿದ್ದಿದ್ದ ಸ್ಥಳದಲ್ಲಿ ಶೋಧ ನಡೆಸಿದರಾದರೂ ಆಕೆ ಪತ್ತೆಯಾಗಿರಲಿಲ್ಲ. ಇದೀಗ ಆಕೆಯ ಶವ 4 ದಿನಗಳ ಬಳಿಕ ಪತ್ತೆಯಾಗಿದೆ.

ಪುರಸಭಾ ಕಾರ್ಯಾಲಯ, ತಿ.ನರಸೀಪುರ

ಸಂ:ತಿ:ನಮ್ಮ /ಆಶ್ರಯ/ ಪಿಎಂಎ.ವೈ- 2.0/ಸಿ.ಆರ್/01/2025-26 ದಿನಾಂಕ: 19.06.2025

ಸಾರ್ವಜನಿಕ ಪ್ರಕಟಣೆ

ವಿಷಯ: ಪ್ರಧಾನಮಂತ್ರಿ ಆವಾಸ್ (ನಗರ) 2.0 ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ,
ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ : RGHCL/PI/PUO/01/2025
Dated: 27.05.2025

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸುತ್ತೋಲೆಯಲ್ಲಿ, ಭಾರತ ಸರ್ಕಾರದ ಪ್ರಧಾನಮಂತ್ರಿ ಆವಾಸ್ (ನಗರ) 2.0 ಯೋಜನೆಯನ್ನು ಸರ್ವರಿಗೂ ಸೂರು ಒದಗಿಸಲು ದಿನಾಂಕ 01.09.2024 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೊಳಚೆ ಪ್ರದೇಶ/ ಕೊಳಚೆಯೇತರ ಪ್ರದೇಶಗಳಲ್ಲಿರುವ ನಿವೇಶನ ರಹಿತ ಮತ್ತು ವಸತಿ ರಹಿತ ಕುಟುಂಬಗಳನ್ನು ಗುರುತಿಸಲು Rapid Demand Survey ಕೈಗೊಳ್ಳಬೇಕಾಗಿದ್ದು, ಅರ್ಹ ಕುಟುಂಬಗಳ ಮಾಹಿತಿಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸಬೇಕಾಗಿರುತ್ತದೆ.

ಪ್ರಧಾನ ಮಂತ್ರಿ ಅವಾಸ್ ನಗರ ಯೋಜನೆಯಡಿ ಬೇಡಿಕೆ ಸಮೀಕ್ಷೆಯ ವಿವರಗಳನ್ನು ನಮೂದಿಸಲು ಕೇಂದ್ರ ಸರ್ಕಾರವು Unified Web Portal ಆನ್‌ಲೈನ್ ವ್ಯವಸ್ಥೆಯನ್ನು ಮಾಡಿದ್ದು, ಸ್ವತಃ ಫಲಾನಭವಿಗಳು ಕೂಡ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು. ಈ ಕೆಳಗೆ ತಿಳಿಸಿರುವ URL ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

URL: https://pmay-urban.gov.in

ಆದ್ದರಿಂದ ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿರುವ ಅರ್ಹ ವಸತಿ ರಹಿತ/ ನಿವೇಶನ ರಹಿತ ಫಲಾನುಭವಿಗಳು ಪ್ರಧಾನಮಂತ್ರಿ ಆವಾಸ್ (ನಗರ) 2.0 ಯೋಜನೆಯಡಿ ರೂ. 1.50 ಲಕ್ಷ ಸಹಾಯಧನವನ್ನು ಪಡೆದು ವಸತಿ ಸೌಕರ್ಯ ಪಡೆಯಲು ಮೇಲ್ಕಂಡ URL ಮೂಲಕ ದಿನಾಂಕ 15.07.2025 ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅರ್ಜಿದಾರರು ಹೊಂದಿರಬೇಕಾದ ದಾಖಲೆಗಳು :

> ಆಧಾರ್ ಕಾರ್ಡ್ (ಮನೆಯ ಯಜಮಾನ/ನಿ ಹಾಗೂ ತಂದೆ/ ತಾಯಿ ಮತ್ತು ಪಡಿತರ ಚೀಟಿಯಲ್ಲಿ ಇರುವಂತೆ ಕುಟುಂಬ ಸದಸ್ಯರ ಆಧಾರ್ ಕಾರ್ಡ್‌ಗಳು)
> ವಸತಿ ರಹಿತರಾದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು (ಹಕ್ಕುಪತ್ರ/ ಕ್ರಯಪತ್ರ/ ದಾನಪತ್ರ/ಉಡುಗೊರೆ ಪತ್ರ/ ಖಾತಾ)
> ಆದಾಯ ಮತ್ತು ಜಾತಿ ಪ್ರಮಾಣ ಪತ್ರ
> ಪಡಿತರ ಚೀಟಿ
> ಬ್ಯಾಂಕ್ ಖಾತೆಯ ವಿವರ (Annexure-2A/2B/2C) ಯಲ್ಲಿ "Self Undertaking" ಸಲ್ಲಿಸುವುದು)
> ಮೊಬೈಲ್ ಸಂಖ್ಯೆ
> ಪ್ಯಾನ್ ಕಾರ್ಡ್ (ಲಭ್ಯವಿದ್ದಲ್ಲಿ ಮಾತ್ರ)
> ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದ ನಂತರ 1 ಸೆಟ್ ನಕಲು ಪ್ರತಿಗಳನ್ನು ಕಛೇರಿಗೆ ಸಲ್ಲಿಸುವುದು

ಸಹಿ/-	ಸಹಿ/-	ಸಹಿ/- ಸ್ಥಾಯಿ ಸಮಿತಿ	ಸಹಿ/-
ಅಧ್ಯಕ್ಷರು ಪುರಸಭೆ, ತಿ.ನರಸೀಪುರ	ಉಪಾಧ್ಯಕ್ಷರು ಪುರಸಭೆ, ತಿ.ನರಸೀಪುರ	ಸದಸ್ಯರು, ಪುರಸಭೆ ತಿ.ನರಸೀಪುರ	ಮುಖ್ಯಾಧಿಕಾರಿ, ಪುರಸಭೆ ತಿ.ನರಸೀಪುರ

ಸೈಬರ್ ಪೊಲೀಸರ ಹೆಸರೇಳಿಕೊಂಡು

7 ಲಕ್ಷ ರೂ. ವಸೂಲಿ ಮಾಡಿದ್ದ ಐವರ ಬಂಧನ


ಚರಣ್ ಸಿ.ಕೆ.


ಇಬ್ರಾಹಿಂ ಬಾದುಷಾ


ರಾಘವೇಂದ್ರ


ಸಂಗೀತ

ಮಡಿಕೇರಿ, ಜೂ.25– ಸೈಬರ್ ಪೊಲೀಸರ ಹೆಸರು ಬಳಸಿಕೊಂಡು ವ್ಯಕ್ತಿಯೊಬ್ಬರಿಗೆ ಬೆದರಿಕೆ ಹಾಕಿ ಅಂದಾಜು 7 ಲಕ್ಷ ರೂ. ವಸೂಲಿ ಮಾಡಿದ 5 ಮಂದಿ ಆರೋಪಿಗಳನ್ನು ಕುಶಾಲನಗರ ಟೌನ್ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಡಿಕೇರಿ ತಾಲೂಕು ಹಾಲೇರಿ ಗ್ರಾಮದ ಇಬ್ರಾಹಿಂ ಬಾದುಷಾ(25), ಮೇಲುಕೋಟೆ ಬಳಿಘಟ್ಟ ಗ್ರಾಮದ ರಾಘವೇಂದ್ರ ಬಿ.ಎಂ.(19), ಬೆಂಗಳೂರು ಬನಶಂಕರಿಯ ಸಂಗೀತ(30), ಕುಶಾಲನಗರ ಆದರ್ಶ ದ್ರಾವಿಡ ಕಾಲೋನಿಯ ಚರಣ್ ಸಿ.ಕೆ.(19) ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಓರ್ವ ಅಪ್ರಾಪ್ತ ಬಾಲಕ ಬಂಧಿತರಾಗಿದ್ದಾರೆ.

ಪ್ರಕರಣ ಹಿನ್ನೆಲೆ: ಕುಶಾಲನಗರ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾದಪಟ್ಟಣ ನಿವಾಸಿ ಪರಶಿವ ಮೂರ್ತಿ 2024ನೇ ಅಕ್ಟೋಬರ್ ತಿಂಗಳಿನಲ್ಲಿ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಯಾರೋ ಒಬ್ಬರಿಗೆ ಮೆಸೇಜ್ ಮಾಡಿದ್ದರು. 2024ರ ನ.2ರಂದು ಬಳಿಕ ಅಪರಿಚಿತ ವ್ಯಕ್ತಿಯೋರ್ವ ಪರಶಿವಮೂರ್ತಿ ಅವರ ಮೊಬೈಲ್‌ಗೆ ಕರೆ ಮಾಡಿ ತಾನು ಪಿರಿಯಾಪಟ್ಟಣ ಸೈಬರ್ ಪೊಲೀಸ್ ಎಂದು ಪರಿಚಯಿಸಿಕೊಂಡು, 'ನೀವು ಹುಡುಗಿಯರಿಗೆ ಸಾಮಾಜಿಕ ಜಾಲತಾಣದಲ್ಲಿ ಮೆಸೇಜ್ ಹಾಗೂ ಕಾಮೆಂಟ್ ಮಾಡಿ ಟಾರ್ಚರ್ ನೀಡಿರುವ ಕುರಿತು ದೂರು ದಾಖಲಾಗಿದೆ. ನೀವು ಹಣವನ್ನು ನೀಡಿದರೆ ಸರಿ ಮಾಡುತ್ತೇನೆ, ಇಲ್ಲವಾದಲ್ಲಿ ಮನೆಯ ಬಳಿ ಬಂದು ನಿನ್ನನ್ನು ಕರೆದುಕೊಂಡು ಹೋಗಿ ಜೈಲಿಗೆ ಹಾಕುತ್ತೇನೆ. ಅಕ್ಕಪಕ್ಕದ ಮನೆಯವರ ಮುಂದೆ ನಿನ್ನ ಮಾನ ಮರ್ಯಾದೆ ಹೋಗುವಂತೆ ಮಾಡುತ್ತೇನೆ ಎಂದು ಬ್ಲ್ಯಾಕ್‌ಮೇಲ್ ಮಾಡಿದ್ದನು. ಇದೇ ರೀತಿ ಪರಶಿವಮೂರ್ತಿ ಅವರ ಮೊಬೈಲ್‌ಗೆ ಹಲವು ಬಾರಿ ಕರೆ ಮಾಡಿ ಬೆದರಿಸಿ ಅಂದಾಜು 7 ಲಕ್ಷ ರೂ.ಗಳನ್ನು ಪಡೆದಿದ್ದನು. ಇದರಿಂದ ರೋಸಿಹೋದ ಪರಶಿವಮೂರ್ತಿ ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಇದೇ ಜನವರಿ 11ರಂದು ಕುಶಾಲನಗರ ಟೌನ್ ಠಾಣೆಗೆ ದೂರು ನೀಡಿದ್ದರು.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು ಆರೋಪಿಗಳನ್ನ ಪತ್ತೆಗಾಗಿ ಸೋಮವಾರಪೇಟೆ ಉಪ ವಿಭಾಗ ಡಿವೈಎಸ್‌ಪಿ ಚಂದ್ರಶೇಖರ್, ಕುಶಾಲನಗರ ವೃತ್ತ ನಿರೀಕ್ಷಕ ಬಿ.ಜಿ.ಪ್ರಕಾಶ್, ಸಬ್‌ಇನ್ಸ್‌ಪೆಕ್ಟರ್ ಗೀತಾ ಹಾಗೂ ಸಿಬ್ಬಂದಿಗಳ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು. ಈ ತಂಡ ಮಾಹಿತಿ ಸಂಗ್ರಹಿಸಿ ನಿನ್ನೆ 5 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ಶಿಕ್ಷಕರಿಬ್ಬರ ವಿರುದ್ಧ ಕ್ರಮಕ್ಕೆ ತೀರ್ಮಾನ

ಹೊಮ್ಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಮಸ್ಯೆ ಸುಖಾಂತ್ಯ

ಚಾಮರಾಜನಗರ, ಜೂ.25–ತಾಲೂಕಿನ ಆಲೂರು ಹೊಮ್ಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿಗದಿತ ಸಮಯಕ್ಕೆ ಬಾರದ ಹಾಗೂ ಪಾಠ ಪ್ರವಚನ ಮಾಡದ ಶಿಕ್ಷಕರಿಬ್ಬರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಜಿಪಂ ಸಿಇಓ ಮೋನಾರೋತ್ ಹಾಗೂ ಎಸ್ಪಿ ಕವಿತಾ ನೇತೃತ್ವದ ಸಭೆ ತೀರ್ಮಾನಿಸಿದೆ.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಲಿತ ಮಹಿಳೆ ಅಡುಗೆ ತಯಾರಿಸುತ್ತಿದ್ದಾರೆ ಎಂಬ ಕಾರಣಕ್ಕೆ 12 ವಿದ್ಯಾರ್ಥಿಗಳು ಟಿಸಿ ಪಡೆದು ಬೇರೆಡೆ ದಾಖಲಾಗಿದ್ದಾರೆ. ಓರ್ವ ವಿದ್ಯಾರ್ಥಿ ಮಾತ್ರ ತರಗತಿಗೆ ಹಾಜರಾಗುತ್ತಿದ್ದಾನೆ ಎಂಬ ವರದಿ ಮಾಧ್ಯಮಗಳಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಪ್ರಭಾರ ಜಿಲ್ಲಾಧಿಕಾರಿ ಮೋನಾರೋತ್, ಎಸ್ಪಿ ಡಾ. ಕವಿತಾ, ಡಿಡಿಪಿಐ ರಾಮಚಂದ್ರರಾಜೇ ಅರಸ್ ಶಾಲೆಗೆ ಭೇಟಿ ನೀಡಿ ಪೋಷಕರ ಸಭೆ ನಡೆಸಿದರು.

ಗ್ರಾಮದ ಲೋಕೇಶ್ ಮಾತನಾಡಿ, ಕಳೆದ 7–8 ವರ್ಷಗಳಿಂದಲೂ ಶಾಲೆಯಲ್ಲಿ ಸಮರ್ಥ ಶಿಕ್ಷಕರು ಇಲ್ಲದೆ ಮಕ್ಕಳ ಕಲಿಕೆಯಲ್ಲಿ ಹಿನ್ನಡೆಯಾಗಿದೆ. ಈ ಬಗ್ಗೆ ಹಲವಾರು ಬಾರಿ ದೂರು ನೀಡಿದರೂ ಶಾಲಾ ಶಿಕ್ಷಣ ಇಲಾಖೆಯ ಹಿಂದಿನ ಬಿಇಓ ಮತ್ತು ಡಿಡಿಪಿಐಗಳು ಸೂಕ್ತ ಕ್ರಮ ವಹಿಸಲಿಲ್ಲ. ನಮ್ಮೂರಿನ ಶಾಲೆ ಹಾಳಾಗಲು ಶಿಕ್ಷಣ ಇಲಾಖೆಯೇ ಕಾರಣ ಎಂದು ಆರೋಪಿಸಿದರು.

ಇಲ್ಲಿನ ಶಿಕ್ಷಕಿಯೊಬ್ಬರು 40 ಸಾವಿರ ರೂ. ಅವ್ಯವಹಾರ ನಡೆಸಿದ್ದರು. ಹಿಂದೆ ಶಿಕ್ಷಕರೊಬ್ಬರು ಮದ್ಯ ಸೇವಿಸಿ ಬರುತ್ತಿದ್ದರು. ಹಾಲಿ ಶಿಕ್ಷಕರಾದ ನಟರಾಜು ಮತ್ತು ರವಿಕುಮಾರ್ ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿದ್ದರು. ಮುಖ್ಯ ಶಿಕ್ಷಕ ಚಿನ್ನಸ್ವಾಮಿ ಅವರ ಮಾತನ್ನು ಕೇಳುತ್ತಿರಲಿಲ್ಲ. ಈ ಬಗ್ಗೆ ದೂರು ನೀಡಿದರೂ ಬಿಇಓ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಗ್ರಾಮಸ್ಥರು ದೂರಿದರು.

ದೂರುಗಳನ್ನು ಆಲಿಸಿದ ಜಿಪಂ ಸಿಇಓ ಮೋನಾ ರೋತ್, ಶಿಕ್ಷಕರಾದ ನಟರಾಜು, ರವಿಕುಮಾರ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಅವರನ್ನು ಬೇರೆಡೆಗೆ ವರ್ಗ ಮಾಡಿ ಹೊಸಬರನ್ನು ನಾಳೆಯೇ ನೇಮಕ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಶಾಲೆಯ ಬಗ್ಗೆ ಪ್ರತಿದಿನ ವರದಿ ಪಡೆಯಲಾಗುವುದು. ಬೇರೆ ಶಾಲೆಗೆ ದಾಖಲಿಸಿರುವ ನಿಮ್ಮ ಮಕ್ಕಳನ್ನು ವಾಪಸ್ ಕರೆಸಿ ಇದೇ ಶಾಲೆಯಲ್ಲಿ ಮುಂದುವರಿಸಿ ಎಂದು ಮನವಿ ಮಾಡಿದರು.

ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್ ಮಾತನಾಡಿ, ಬೇರೆ ಶಾಲೆಗಳಿಗೆ ಹೋಗಿರುವ ಮಕ್ಕಳನ್ನು ನಾವೇ ವಾಪಸ್ ಕರೆಸುತ್ತೇವೆ. ಪ್ರವೇಶ ಶುಲ್ಕವನ್ನು ವಾಪಸ್ ಕೊಡಿಸುತ್ತೇವೆ. 25 ಮಕ್ಕಳಿಗಿಂತ ಹೆಚ್ಚು ಮಕ್ಕಳಾದರೆ ಮತ್ತೊಬ್ಬ ಅಡುಗೆ ಸಹಾಯಕರನ್ನು ನೀಡುತ್ತೇವೆ. ನಂಜಮ್ಮ ಕೂಡ ಮುಂದುವರಿಯುವರೆಂದರು. ಶಿಕ್ಷಕರನ್ನು ಬದಲಿಸಿದರೆ, ಶುಲ್ಕ ವಾಪಸ್ ಕೊಡಿಸಿದರೆ ಹಾಗೂ ನಮ್ಮೂರಿನ ಶಾಲೆಯ ಉಳಿವಿಗಾಗಿ ಮಕ್ಕಳನ್ನು ವಾಪಸ್ ಕರೆತರುವುದಾಗಿ ಪೋಷಕರು ಒಪ್ಪಿಗೆ ಸೂಚಿಸಿದರು. ಬೇರೆ ಶಾಲೆಗೆ ಹೋಗಿದ್ದ 6 ಮಕ್ಕಳು ಮತ್ತೆ ಶಾಲೆಗೆ ಸೇರ್ಪಡೆಯಾದರು. ಇನ್ನುಳಿದ ಮಕ್ಕಳು ನಾಳೆಯಿಂದಲೇ ಹೊಮ್ಮ ಶಾಲೆಗೆ ಬರಲು ಕ್ರಮ ವಹಿಸುವಂತೆ ಬಿಇಓಗೆ ಅಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ತಹಶೀಲ್ದಾರ್ ಗಿರಿಜಾ, ಡಿವೈಎಸ್ಪಿ ಲಕ್ಷ್ಮಯ್ಯ, ಬಿಇಓ ಹನುಮಶೆಟ್ಟಿ, ಬಿಸಿಯೂಟ ಅಧಿಕಾರಿ ಶ್ರೀನಿವಾಸ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ನಂಜುಂಡೇಗೌಡ, ತಾ.ಪಂ. ಇಓ ಶ್ರೀಕಂಠೇರಾಜ್ ಅರಸ್, ಶಾಲೆಯ ಮುಖ್ಯ ಶಿಕ್ಷಕ ಚಿನ್ನಸ್ವಾಮಿ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಇನ್ಸ್‌ಪೆಕ್ಟರ್ ಚಂದ್ರಕಲಾ, ಸಂತೇಮರಹಳ್ಳಿ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಸವರಾಜು, ಪಿಎಸ್‌ಐ ತಾಜುದ್ದಿನ್ ಹಾಗೂ ಗ್ರಾಮಸ್ಥರು, ಶಾಲೆಯ ಪೋಷಕರು ಇದ್ದರು.

ಮಳೆ ಆರ್ಭಟ: ಉಕ್ಕಿ ಹರಿದ ಲಕ್ಷ್ಮಣ ತೀರ್ಥ



ಗೋಣಿಕೊಪ್ಪ: ದಕ್ಷಿಣ ಕೊಡಗಿನ ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಮುಂದುವರೆದ ಮಳೆ ಆರ್ಭಟದಿಂದ ಲಕ್ಷ್ಮಣ ತೀರ್ಥ ನದಿ ಉಕ್ಕಿ ಹರಿಯುತ್ತಿದೆ.

ಲಕ್ಷ್ಮಣ ತೀರ್ಥ ನದಿಯ ವ್ಯಾಪ್ತಿಯಲ್ಲಿ ಪ್ರವಾಹ ಭೀತಿ ಎದುರಾಗಿದೆ. ಭತ್ತದ ಕೃಷಿ ಪ್ರದೇಶ ನೀರಿನಲ್ಲಿ ಮುಳುಗಡೆಯಾಗಿದೆ. ಅಲ್ಲಲ್ಲಿ ಬರೆ ಕುಸಿತವಾಗಿದ್ದು ಹುದಿಕೇರಿ– ಬಿರುನಾಣಿ ರಸ್ತೆ ನಡುವೆ ಹೈ ಸೊಡ್ಲೂರು ಪೊರಾಡು ಸೇತುವೆ ಬರೆ ಕುಸಿತವಾಗಿದೆ. ಹುದಿಕೇರಿ ಸಮೀಪ ಕೋಣಗೇರಿಯಲ್ಲಿ ಕಾಡ್ಯಮಾಡ ಕಿರಣ್ ಕಾರ್ಯಪ್ಪ ಅವರ ಮನೆಯ ಬದಿ ಬರೆ ಕುಸಿತವಾಗಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಜನರಲ್ಲಿ ಆತಂಕ ಉಂಟಾಗಿದ್ದು ಗುಡ್ಡ ಗಾಡು ಮತ್ತು ಸಮೀಪದಲ್ಲಿ ಬರೆ ಇರುವ ಸ್ಥಳದಲ್ಲಿ ವಾಸಿಸುತ್ತಿರುವ ಜನರಲ್ಲಿ ಆತಂಕ ಶುರುವಾಗಿದೆ.

ಯವಕಪಾಡಿಯಲ್ಲಿ ಹಾರಿಹೋದ ಶೀಟ್

ನಾಪೋಕ್ಲು, ಜೂ.25– ಇಲ್ಲಿಗೆ ಸಮೀಪದ ಯವಕಪಾಡಿ ಗ್ರಾಮದಲ್ಲಿ ಭಾರಿ ಮಳೆ ಗಾಳಿಗೆ ಮನೆಯ ಛಾವಣಿಯ ಶೀಟ್ ಹಾರಿ ಹೋಗಿ ನಷ್ಟ ಸಂಭವಿಸಿದೆ.

ಕಕ್ಕಬೆ ಗ್ರಾಮ ಪಂಚಾಯಿತಿಯ ಯವಕಾಪಾಡಿ ಗ್ರಾಮದಲ್ಲಿ ಬುಧವಾರ ರಾತ್ರಿ ಭಾರಿ ಗಾಳಿ ಮಳೆಯಿಂದಾಗಿ ಗ್ರಾಮದ ನಿವಾಸಿ ಚೆಂಗಪ್ಪರವರ ವಾಸದ ಮನೆಯ ಕಲ್ನಾರು ಶೀಟ್ ಹಾರಿ ಹೋಗಿ ತೀವ್ರ ಹಾನಿಯಾಗಿರುತ್ತದೆ. ಘಟನಾ ಸ್ಥಳಕ್ಕೆ ನಾಪೋಕ್ಲು ಕಂದಾಯ ಪರಿವೀಕ್ಷಕ ರವಿ ಕುಮಾರ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದರು.


ಯವಕಪಾಡಿ ಗ್ರಾಮದಲ್ಲಿ ಭಾರಿ ಮಳೆ ಗಾಳಿಗೆ ಚೆಂಗಪ್ಪ ವಾಸದ ಮನೆಯ ಶೀಟ್ ಹಾರಿ ಹೋಗಿದೆ

ನಾಗದೇವರಿಗೆ ಅಮಾವಾಸ್ಯೆ ವಿಶೇಷ ಪೂಜೆ



ವಿರಾಜಪೇಟೆ, ಜೂ.25–ಪಟ್ಟಣದ ಶಿವಕೇರಿಯಲ್ಲಿರುವ ಶ್ರೀ ದುರ್ಗಿ ವಿಷ್ಣುಮೂರ್ತಿ ನಾಗದೇವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿತ್ತು. ಬೆಳಿಗ್ಗೆಯಿಂದಲೇ ಹಾಲಿನ ಅಭಿಷೇಕ, ಅಲಂಕಾರ ಪೂಜೆ ಮಧ್ಯಾಹ್ನ ದೇವಸ್ಥಾನದ ಆವರಣದಲ್ಲಿ ಉತ್ಸವ ಮೂರ್ತಿಯ ಪ್ರದಕ್ಷಿಣೆ ನಂತರ ಮಹಾಪೂಜೆ ಪ್ರಸಾದ ವಿತರಣೆ ಬಳಿಕ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ವೇಳೆ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಚಂದ್ರಶೇಖರ್ ಹಾಗೂ ಸದಸ್ಯರು ಹಾಜರಿದ್ದರು, ಪಟ್ಟಣ ಮತ್ತು ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪ್ರವಾಹ ಪರಿಸ್ಥಿತಿ ಎದುರಿಸಲು ಕ್ರಮ ಕೈಗೊಳ್ಳಿ: ಮೋನಾ ರೋತ್

ಚಾಮರಾಜನಗರ: ಪ್ರಸ್ತುತ ಮಾನ್ಸೂನ್ ಅವಧಿಯಲ್ಲಿ ಜಿಲ್ಲೆಯಲ್ಲಿ ಉಂಟಾಗುವ ಪ್ರವಾಹ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಸನ್ನದ್ಧರಾಗುವಂತೆ ಜಿಪಂ ಸಿಇಓ ಮೋನಾ ರೋತ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ


ಮೋನಾ ರೋತ್ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾವೇರಿ ಹಾಗೂ ಕಬಿನಿ ಜಲಾನಯನ ಪ್ರದೇಶಗಳಲ್ಲಿ ಹೆಚ್ಚಿನ ಮಳೆ ಬೀಳುತ್ತಿದೆ. ಜಲಾಶಯಗಳಿಂದ ಯಾವುದೇ ಸಮಯ ದಲ್ಲಿ ಹೆಚ್ಚುವರಿ ನೀರನ್ನು ಹೊರಬಿಡುವ ಸಾಧ್ಯತೆ ಇರುವುದರಿಂದ ಜಿಲ್ಲೆಯ ನದಿತೀರದಲ್ಲಿ ಪ್ರವಾಹ ಉಂಟಾಗಬಹುದಾದ ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಿ ಅಂತಹ ಸ್ಥಳಗಳಲ್ಲಿ ಪ್ರವಾಹ ಸಂದರ್ಭವನ್ನು ಸೂಕ್ತವಾಗಿ ನಿರ್ವಹಿಸಲು ಅಗತ್ಯ ಸಿದ್ದತೆ ಕೈಗೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿಯೇ ಇದ್ದು ಪ್ರವಾಹ ಪರಿಸ್ಥಿತಿ ನಿಭಾಯಿಸಲು ಸನ್ನದ್ಧರಾಗಿರಬೇಕು. 24x7 ಸಹಾಯವಾಣಿ ಕಾರ್ಯವೈಖರಿಯನ್ನು ಚುರುಕು ಗೊಳಿಸಬೇಕೆಂದು ನಿರ್ದೇಶನ ನೀಡಿದರು.

ಕೊಳ್ಳೇಗಾಲ ತಾಲೂಕಿನಲ್ಲಿ ಕಾವೇರಿ ನದಿದಂಡೆಯಲ್ಲಿರುವ ದಾಸನಪುರ, ಹಳೇ ಹಂಪಾಪುರ, ಹರಳೆ, ಅಗ್ರಹಾರ, ಯಡಕುರಿಯ, ಧನಗೆರೆ, ಸರಗೂರು ಹಾಗೂ ಸುವರ್ಣಾವತಿ ನದಿ ತೀರದಲ್ಲಿರುವ ಯಳಂದೂರು ತಾಲೂಕಿನ ಅಂಬಳೆ, ಮದ್ದೂರು, ಗಣಿಗನೂರು, ಮಾಂಬಳ್ಳಿ ಮತ್ತು ತಾಲೂಕಿನ ಚಂದಕವಾಡಿ, ಆಲೂರು, ಸರಗೂರು, ನಲ್ಲೂರು ಮೋಳೆ, ಹೆಬ್ಬಸೂರು, ಕೂಡ್ಲೂರು ಗ್ರಾಮಗಳಲ್ಲಿ ಕಳೆದ ಬಾರಿಯು ಪ್ರವಾಹ ಉಂಟಾಗಿತ್ತು. ಈ ಬಾರಿ ಪ್ರವಾಹ ಪರಿಸ್ಥಿತಿ ಎದುರಾದರೆ ಕಾಳಜಿ ಕೇಂದ್ರಗಳನ್ನು ತೆರೆದು ಜನರನ್ನು ಸ್ಥಳಾಂತರಿಸಿ ಮೂಲ ಸೌಲಭ್ಯ ಒದಗಿಸಲು ಮುಂದಾಗುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಎಲ್ಲಾ ಸಿದ್ದತೆಗಳನ್ನು ಈಗಾಗಲೇ ಮಾಡಿಕೊಳ್ಳಲಾಗಿದೆ. ಪ್ರವಾಹ ಉಂಟಾಗಬಹುದಾದ ಸ್ಥಳಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಸಿಬ್ಬಂದಿ ನಿಯೋಜಿಸಲಾಗಿದೆ. ಜನರನ್ನು ನದಿಗೆ ಇಳಿಯದಂತೆ ತಿಳಿವಳಿಕೆ ನೀಡಲಾಗುತ್ತಿದೆ. ಪ್ರವಾಹ ಸಂದರ್ಭದಲ್ಲಿ ಜನರನ್ನು ಸುರಕ್ಷಿತವಾಗಿ ಕಾಳಜಿಕೇಂದ್ರಕ್ಕೆ ಸೇರಿಸಲಾಗುತ್ತಿದೆ. ಒಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ಅಗ್ನಿಶಾಮಕ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪ್ರವಾಹ ಪರಿಸ್ಥಿತಿ ನಿರ್ವಹಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಹೇಳಿದರು.

ಪ್ರವಾಹ ಎದುರಿಸಲು ಗ್ರಾಮ ಪಂಚಾಯಿತಿ ಅಧಿಕಾರಿಗಳು ಗ್ರಾಮಗಳಲ್ಲಿ ಟಾಂ ಟಾಂ ಹೊಡೆಸಬೇಕು. ಅಧಿಕ ಮಳೆ ನೀರಿನಿಂದ ಕೆರೆಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕು. ಗ್ರಾಮ, ನಗರ, ಪಟ್ಟಣಗಳಲ್ಲಿ ಚರಂಡಿ ಹೂಳು ತೆಗೆಸಿ ನೀರು ಸರಾಗವಾಗಿ ಹರಿಯಲು ಕ್ರಮ ವಹಿಸ ಬೇಕು. ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ತಿಳಿಸಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ತಹಶೀಲ್ದಾರ್‌ಗಳಾದ ಗಿರಿಜ, ಬಸವರಾಜು, ರಮೇಶ್ ಬಾಬು, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್. ಚಿದಂಬರ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪ್ರಶಾಂತ್, ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮತ್ತೆ ಅಮೆರಿಕಾಕ್ಕೆ ಶಾಸಕ ದರ್ಶನ್ ಪುಟ್ಟಣ್ಣಯ್ಯ

- ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತ: ಸಾರ್ವಜನಿಕರ ಆಕ್ಷೇಪ
- ಪತ್ನಿ ಅನಾರೋಗ್ಯ ನೆಪವೊಡ್ಡಿ 12ನೇ ಬಾರಿ ತೆರಳಿದ ಶಾಸಕರು



ಪಾಂಡವಪುರ, ಜೂ.25– ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತೆ ಅಮೆರಿಕಾಕ್ಕೆ ಹಾರಿದ್ದು, ಶಾಸಕರಾದ ಬಳಿಕ ಕಳೆದ 2 ವರ್ಷದಲ್ಲಿ ಬರೋಬ್ಬರಿ 12ನೇ ಬಾರಿಗೆ ಅಮೆರಿಕಾಕ್ಕೆ ತೆರಳಿದ್ದಾರೆ.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಪದೇ ಪದೆ ಅಮೆರಿಕಾಕ್ಕೆ ತೆರಳುತ್ತಿರುವುದರಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳ ಜೊತೆಗೆ ಜನಸಾಮಾನ್ಯರ ಕೆಲಸ ಕಾರ್ಯಗಳು ಕುಂಠಿತವಾಗುತ್ತಿವೆ ಎಂದು ಕ್ಷೇತ್ರದ ಜನತೆ ಆಕ್ಷೇಪಿಸುತ್ತಿದ್ದಾರೆ.

ಚುನಾವಣೆಗೂ ಮುನ್ನ ಅಮೆರಿಕಾದಲ್ಲಿ ವಾಸವಾಗಿದ್ದ ದರ್ಶನ್ ಪುಟ್ಟಣ್ಣಯ್ಯ ಅವರು ಅವರ ತಂದೆ ನಿಧನರಾದ ಬಳಿಕ ರಾಜಕೀಯ ಪ್ರವೇಶಿಸಿದರು. 2018ರ ಚುನಾವಣೆಯಲ್ಲಿ ಸೋಲುಂಡ ಬಳಿಕ ವಾಪಸ್ ಅಮೆರಿಕಾಕ್ಕೆ ತೆರಳಿದ್ದರು. ಬಳಿಕ 2023ರ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆಯೇ ಕ್ಷೇತ್ರಕ್ಕೆ ಮರಳಿ ಪ್ರಚಾರದಲ್ಲಿ ತೊಡಗಿಕೊಂಡ ಅವರು, ನಾನು ಮತ್ತೆ ಅಮೆರಿಕಾಗೆ ಹೋಗುವುದಿಲ್ಲ. ಚುನಾವಣೆಯಲ್ಲಿ ಸೋಲಲಿ, ಗೆಲ್ಲಲಿ ನಾನು ಇಲ್ಲಿಯೇ ಉಳಿದು ಕ್ಷೇತ್ರದ ಜನತೆ ಸೇವೆ ಮಾಡುತ್ತೇನೆ ಎಂದು ವಾಗ್ದಾನ ಮಾಡಿದ್ದರು. ಆದರೆ ಚುನಾವಣೆಯಲ್ಲಿ ಗೆದ್ದು ಶಾಸಕರಾದ 15 ದಿನಕ್ಕೆ ಅಮೆರಿಕಾಕ್ಕೆ ತೆರಳಿದ್ದರು. ಅದು ಅಲ್ಲಿಗೆ ನಿಲ್ಲದೇ ಪತ್ನಿ ಅನಾರೋಗ್ಯದ ಕಾರಣವೊಡ್ಡಿ ಪದೇ ಪದೇ ಅಮೆರಿಕಾಕ್ಕೆ ತೆರಳುತ್ತಿದ್ದಾರೆ.

ಕ್ಷೇತ್ರದಲ್ಲಿದ್ದು ಜನಸಾಮಾನ್ಯರ ಸಮಸ್ಯೆ ಆಲಿಸಬೇಕಾದ ಶಾಸಕರು 2 ತಿಂಗಳಿದ್ದು ಕೆಲಸ ಮಾಡಿದರೇ, 20 ದಿನ ಅಮೆರಿಕಾಕ್ಕೆ ತೆರಳುತ್ತಾರೆ. ಶಾಸಕರು ಯಾವಾಗ ಅಮೆರಿಕಾಗೆ ಹೋಗ್ತಾರೆ, ಬರ್ತಾರೆ ಎನ್ನುವುದು ಪಕ್ಷದ ಕೆಲವು ಕಾರ್ಯಕರ್ತರು, ಬೆಂಬಲಿಗರಿಗೆ ಹೊರತುಪಡಿಸಿದರೆ ಸಾಮಾನ್ಯ ಜನರಿಗೆ ತಿಳಿಯುವುದೇ ಇಲ್ಲವಾಗಿದೆ. ಇದರಿಂದಾಗಿ ಶಾಸಕರ ಬಳಿ ತಮ್ಮ ಸಮಸ್ಯೆ, ಅಹವಾಲು ಹೇಳಿಕೊಳ್ಳಲು ಬರುವ ಜನಸಾಮಾನ್ಯರಿಗೆ ತೊಂದರೆಯಾಗಿದೆ. ಜೊತೆಗೆ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾಗುತ್ತಿವೆ. ಬೆಳೆಗಳಿಗೆ ಸೂಕ್ತ ನೀರು ಪೂರೈಕೆ ಮಾಡದೆ ಕಬ್ಬು ಬೆಳೆ ಒಣಗುತ್ತಿದೆ. ಭತ್ತ, ಕಬ್ಬು ಸೇರಿದಂತೆ ವಿವಿಧ ಬೆಳೆಗಳಿಗೆ ಸೂಕ್ತ ಬೆಲೆ ದೊರೆಯುತ್ತಿಲ್ಲ. ಇದು ಕ್ಷೇತ್ರದ ಜನತೆ ಬೇಸರಕ್ಕೆ ಕಾರಣವಾಗಿದೆ. ಜೊತೆಗೆ ಸರ್ಕಾರದಿಂದ ಕ್ಷೇತ್ರಕ್ಕೆ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಸಹ ಲಭ್ಯವಾಗದೇ ಕ್ಷೇತ್ರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎನ್ನುವ ಮಾತುಗಳು ಸಹ ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿದೆ.

ಶಾಸಕರು ಪತ್ನಿ ಆರೋಗ್ಯ ಸಮಸ್ಯೆ ನಿವಾರಣೆಗೆ ಪದೇ ಪದೆ ಅಮೆರಿಕಾಕ್ಕೆ ತೆರಳುವ ಬದಲು ಕುಟುಂಬವನ್ನೇ ಭಾರತಕ್ಕೆ ಕರೆತಂದು ಚಿಕಿತ್ಸೆ ಕೊಡಿಸಬಹುದಲ್ಲವೇ, ಆಗ ಕ್ಷೇತ್ರದ ಜನತೆಗೂ ಅನುಕೂಲವಾಗುತ್ತವೆ ಎನ್ನುವ ಮಾತುಗಳು ಜನರಿಂದ ಕೇಳಿ ಬರುತ್ತಿದೆ. ಶಾಸಕರು ವಿದೇಶಕ್ಕೆ ತೆರಳಿದ ಸಂದರ್ಭ ಕ್ಷೇತ್ರದಲ್ಲಿ ಅಧಿಕಾರಿಗಳದ್ದೇ ಕಾರುಬಾರು. ಹೇಳೋರು ಕೇಳೋರು ಯಾರು ಇಲ್ಲದಂತಾಗುತ್ತಿದೆ. ಇನ್ನಾದರೂ ಶಾಸಕರು ಕ್ಷೇತ್ರದಲ್ಲಿಯೇ ಇದ್ದು ತಮ್ಮ ಜವಾಬ್ದಾರಿ ಅರಿತು ಅಭಿವೃದ್ಧಿ ಕೆಲಸ ಮಾಡಬೇಕು ಎನ್ನುವುದು ಕ್ಷೇತ್ರದ ಜನರ ಒತ್ತಾಯವಾಗಿದೆ.

ದಮ್ಮನಕಟ್ಟೆಗೆ ಚಿತ್ರನಟ ಶಿವರಾಜ್‌ಕುಮಾರ್ ದಂಪತಿ ಭೇಟಿ

ಹುಲಿ, ಆನೆ ಸೇರಿದಂತೆ ವನ್ಯಪ್ರಾಣಿಗಳು, ಪರಿಸರ ವೀಕ್ಷಣೆ




ದಮ್ಮನಕಟ್ಟೆಯಲ್ಲಿ ಶಿವರಾಜ್‌ಕುಮಾರ್ ಕುಟುಂಬ ಸಮೇತರಾಗಿ ಸಫಾರಿಗೆ ತೆರಳುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಕಬಿನಿ ಜಲಾಶಯ ವೀಕ್ಷಿಸುತ್ತಿರುವ ನಟ ಶಿವರಾಜ್‌ಕುಮಾರ್.

ಹೆಚ್.ಡಿ.ಕೋಟೆ, ಜೂ.25– ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ದಮ್ಮನಕಟ್ಟೆ ಸಫಾರಿ ಕೇಂದ್ರಕ್ಕೆ ಚಿತ್ರನಟ ಶಿವರಾಜ್‌ಕುಮಾರ್ ದಂಪತಿ ಭೇಟಿ ನೀಡಿ ಸಫಾರಿಗೆ ತೆರಳಿ ವನ್ಯಪ್ರಾಣಿಗಳು ಮತ್ತು ಪರಿಸರ ವೀಕ್ಷಿಸಿ ಸಂಭ್ರಮಿಸಿದರು.

ಕಬಿನಿ ಹಿನ್ನೀರಿನಲ್ಲಿರುವ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜು ಮತ್ತು ಚಿತ್ರ ನಿರ್ಮಾಪಕ ಸಂದೇಶ್ ಅವರ ಕಬಿನಿ ಎಡ್ಜ್ ರೆಸಾರ್ಟ್‌ನಲ್ಲಿ 3 ದಿನಗಳ ಕಾಲ ನಟ ಶಿವರಾಜ್‌ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್, ಪುತ್ರಿ, ನಿರ್ದೇಶಕ ಶ್ರೀಕಾಂತ್ ಇನ್ನಿತರರೊಂದಿಗೆ ವಾಸ್ತವ್ಯ ಹೂಡಿದ್ದರು.

ದಮ್ಮನಕಟ್ಟೆ ವ್ಯಾಪ್ತಿಯಲ್ಲಿ ಸಫಾರಿ ನಡೆಸಿದ ಶಿವರಾಜ್‌ಕುಮಾರ್ ದಂಪತಿ ಹಾಗೂ ಇತರರು ಹುಲಿ, ಚಿರತೆ, ಆನೆ, ಜಿಂಕೆ ಇನ್ನಿತರ ಪ್ರಾಣಿಗಳು ಮತ್ತು ಹಚ್ಚ ಹಸಿರಾಗಿರುವ ಅರಣ್ಯ ವೀಕ್ಷಿಸಿ ಸಂತೋಷಪಟ್ಟರು. ಅಲ್ಲದೇ ತಾಯಿ ಹುಲಿ ತನ್ನ ಮರಿಗಳನ್ನು ಜೊತೆಗೂಡಿ ಬರುತ್ತಿರುವುದು. ಚಿರತೆ ಜಿಂಕೆಯನ್ನು ಬೇಟೆಯಾಡುತ್ತಿರುವುದನ್ನು ವೀಕ್ಷಿಸಿದರು.

ಸಫಾರಿ ಕೇಂದ್ರ, ಸಫಾರಿ ವೇಳೆ ನಟ ಶಿವರಾಜ್‌ಕುಮಾರ್ ಅವರನ್ನು ನೋಡಿದ ಪ್ರವಾಸಿಗರು ಹಾಗೂ ಕೆಲ ಗ್ರಾಮಸ್ಥರು ಶಿವರಾಜ್‌ಕುಮಾರ್ ಜೊತೆ ಫೋಟೋ ತೆಗೆಸಿಕೊಳ್ಳಲು ಮುಂದಾದರು.

ಸಫಾರಿ ಮುಗಿಸಿ ನಂತರ ಕಬಿನಿ ಜಲಾಶಯಕ್ಕೆ ತೆರಳಿದ ಅವರು ಕಬಿನಿ ಜಲಾಶಯದ ಸೌಂದರ್ಯ ವೀಕ್ಷಿಸಿ, ನಂತರ ಚುಮುಚುಮು ಚಳಿಗೆ ಚಹಾ ಸೇವಿಸಿ, ಅಭಿಮಾನಿಗಳೊಂದಿಗೆ ಫೋಟೋ ತೆಗೆಸಿಕೊಂಡರು. ಕಬಿನಿ ಹಿನ್ನೀರು ಹಾಗೂ ಇನ್ನಿತರ ಕಡೆ ಸಫಾರಿ ನಡೆಸಿ, ವಾಸ್ತವ್ಯ ಮಾಡಿ ವಿಶ್ರಾಂತಿ ಪಡೆದು ನಂತರ ಬೆಂಗಳೂರಿಗೆ ತೆರಳಲಿದ್ದಾರೆ ಎನ್ನಲಾಗಿದೆ.

ಶಾಸಕ ರಮೇಶ್‌ಬಾಬು ಮಾತನ್ನು ತಪ್ಪಾಗಿ ಗ್ರಹಿಸಬೇಡಿ

ಮುಸ್ಲಿಂ ಮುಖಂಡರ ಮನವಿ


ಸಭೆಯಲ್ಲಿ ಮಂಡ್ಯ ಜಿಲ್ಲಾ ಮುಸ್ಲಿಂ ಒಕ್ಕೂಟದ ಉಪಾಧ್ಯಕ್ಷ ಅಬ್ದುಲ್ ರವೂಫ್ ಮಾತನಾಡಿದರು.

ಶ್ರೀರಂಗಪಟ್ಟಣ, ಜೂ.25– ತಾಲೂಕಿನ ಮಹದೇವಪುರದಲ್ಲಿ ಜೂ.19ರಂದು ನಡೆದ ಕಾರ್ಯಕ್ರಮದಲ್ಲಿ ಸರ್ಕಾರಿ ಜಮೀನು ಅತಿಕ್ರಮ ತಡೆಯುವಂತೆ ಅಧಿಕಾರಿಗಳಿಗೆ ಸೂಚನೆ ನೀಡುವಾಗ ಸಾಬ್ರು ಎಂಬ ಪದ ಬಳಸಿರುವ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರ ಮಾತನ್ನು ತಪ್ಪಾಗಿ ಗ್ರಹಿಸಬಾರದು ಎಂದು ಮುಸ್ಲಿಂ ಮುಖಂಡರು ಮನವಿ ಮಾಡಿದರು.

ಪಟ್ಟಣದಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದ ಮಂಡ್ಯ ಜಿಲ್ಲಾ ಮುಸ್ಲಿಂ ಒಕ್ಕೂಟದ ಉಪಾಧ್ಯಕ್ಷ ಹಾಗೂ ಪುರಸಭೆ ಮಾಜಿ ಸದಸ್ಯ ಅಬ್ದುಲ್ ರವೂಫ್, ಸರ್ಕಾರಿ ಜಮೀನು ಅತಿಕ್ರಮ ತಡೆಯುವಂತೆ ಅಧಿಕಾರಿಗಳಿಗೆ ಸೂಚನೆ ನೀಡುವ ಸಂದರ್ಭ ಸಾಬ್ರು ಎಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬಂದಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ ಸಹಜವಾಗಿ ಮಾತನಾಡಿದ್ದಾರೆ. ಮುಸ್ಲಿಂ ಸೌಹಾರ್ದ ಒಕ್ಕೂಟದ ಕಾರ್ಯದರ್ಶಿ ಅಬ್ದುಲ್ ಸುಕ್ಕೂರ್ ಇತರರ ಸಮ್ಮುಖದಲ್ಲಿ ಆತ್ಮೀಯತೆಯಿಂದ ಸಾಬ್ರು ಎಂದು ಕರೆದಿದ್ದಾರೆ. ಸಮಾಜದ ಬಂಧುಗಳು ಅವರ ಮಾತಿಗೆ ಬೇರೆ ಅರ್ಥ ಕಲ್ಪಿಸಬಾರದು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಗುಲಾಂ ದಸ್ತಗೀರ್ (ಸಲೀಂ) ಮಾತನಾಡಿ, ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಮುಸ್ಲಿಮರ ಜೊತೆ ಪ್ರೀತಿ, ವಿಶ್ವಾಸದಿಂದ ನಡೆದುಕೊಳ್ಳುತ್ತಾರೆ. ರಂಜಾನ್, ಬಕ್ರೀದ್ ಹಬ್ಬಗಳಲ್ಲಿ ಪಾಲ್ಗೊಳ್ಳುತ್ತಾರೆ. ಖಬರಸ್ತಾನಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಸರ್ಕಾರದ ಸಹಾಯಧನ ಕೊಡಿಸಿದ್ದಾರೆ. ಬಡವರಿಗೆ ವೈಯಕ್ತಿಕ ಹಣಕಾಸಿನ ನೆರವು ನೀಡುತ್ತಾ ಬಂದಿದ್ದಾರೆ. ಪಟ್ಟಣದ ಮುಸ್ಲಿಂ ವಸತಿ ಶಾಲೆಗೆ ಸಾಕಷ್ಟು ಅನುದಾನ ಕೊಡಿಸಿ ವಿವಿಧ ಜಿಲ್ಲೆಗಳ ನೂರಾರು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅಲ್ಪಸಂಖ್ಯಾತರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಅವರ ಮಾತುಗಳಿಗೆ ನೊಂದುಕೊಳ್ಳಬಾರದು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಮಹಮದ್ ಅನ್ಸರ್, ವೆಲ್ಲೆಸ್ಲಿ ಸೇತುವೆ ಮಸೀದಿ ಅಧ್ಯಕ್ಷ ಅಪ್ಸರ್ ಪಾಷ, ಮುಖಂಡರಾದ ಅಜೀಜ್ ಖಾನ್, ನಜೀರ್ ಅಹಮದ್, ಅಕ್ರಂ ಪಾಷ, ಇಮ್ರಾನ್, ಸಗೀರ್, ಸದ್ದಾಂ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮಂಡ್ಯ, ಜೂ.25– ಬಸರಾಳು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.27 ರಂದು ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ಬಸರಾಳು, ಶಿವಪುರ, ಬೇಬಿ, ಕಂಬದಹಳ್ಳಿ, ಬಿದರಕಟ್ಟೆ, ಮಾರಸಿಂಗನಹಳ್ಳಿ, ಅಂಕುಶಾಪುರ, ಬೆನ್ನಹಟ್ಟಿ, ಶಾನಭೋಗನಹಳ್ಳಿ, ಬೊಮ್ಮನಹಳ್ಳಿ, ಅನುಕುಪ್ಪೆ, ಮನುಗನಹಳ್ಳಿ, ಎಂ.ಹಟ್ನ, ಗಣಿಗ ಹಾಗೂ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕರಿಗೆ ಸನ್ಮಾನ


ಕುಮಾರ್ ರಾಮು ಅವರನ್ನು ಸನ್ಮಾನಿಸಲಾಯಿತು .

ತಿ.ನರಸೀಪುರ, ಜೂ.25– ಕರ್ನಾಟಕ ರಾಜ್ಯ ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕರಾಗಿ ಆಯ್ಕೆಯಾದ ಸಿದ್ದರಾಮನಹುಂಡಿ ಗ್ರಾಮದ ಮಾದಿಗ ಸಮಾಜದ ಯುವ ನಾಯಕ ಹಾಗೂ ಯಡಕೊಳ ಗ್ರಾಪಂ ಅಧ್ಯಕ್ಷ ಕುಮಾರ್‌ರಾಮು ಅವರನ್ನು ಡಾ.ಬಾಬು ಜಗಜೀವನ್ ಜನ ಕಲ್ಯಾಣ ಸಂಘದಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಬುಧವಾರ ನಡೆದ ಸರಳ ಸಮಾರಂಭದಲ್ಲಿ ಕುಮಾರ್‌ರಾಮು ಅವರನ್ನು ಸನ್ಮಾನಿಸಿ ಮಾತನಾಡಿದ ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಖಜಾಂಚಿ ಶಿವಣ್ಣ, ರಾಜ್ಯ ಕಾಂಗ್ರೆಸ್ ಸರ್ಕಾರ ಮಾದಿಗ ಸಮಾಜದ ಕ್ರಿಯಾಶೀಲ ವ್ಯಕ್ತಿ ಕುಮಾರ್‌ರಾಮು ಅವರಿಗೆ ಅಧಿಕಾರ ನೀಡಿದೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಎಂಎಲ್‌ಸಿ ಡಾ.ಯತೀಂದ್ರ, ಸಂಸದ ಸುನೀಲ್ ಬೋಸ್ ಅವರಿಗೆ ಸಮಾಜದ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಕುಮಾರ್ ರಾಮು ಯುವ ಮುಖಂಡರಾಗಿದ್ದು, ತಮಗೆ ವಹಿಸಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಮಾದಿಗ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾರೆ ಎಂದರು.

ಸಂಘದ ಅಧ್ಯಕ್ಷ ಮಲಿಯೂರು ಶಂಕರ್ ಮಾತನಾಡಿ, ಹಿಂದುಳಿದ ಮಾದಿಗ ಸಮಾಜ ಗುರುತಿಸಿ ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕರ ಸ್ಥಾನ ನೀಡಿರುವುದು ಸ್ವಾಗತಾರ್ಹ. ಸರ್ಕಾರಕ್ಕೆ ತಾಲೂಕಿನ ಇಡೀ ಮಾದಿಗ ಸಮಾಜದ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ನೂತನ ನಿರ್ದೇಶಕ ಕುಮಾರ್‌ರಾಮು ಮಾತನಾಡಿ, ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕನಾದ ನನ್ನನ್ನು ಸಮಾಜದ ಜನತೆ ಸ್ವಾಗತ ಕೋರಿ ಅಭಿನಂದಿಸಿರುವುದಕ್ಕೆ ಅವರಿಗೆ ಕೃತಜ್ಞನಾಗಿರುತ್ತೇನೆ. ಸಮಾಜದ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಸರ್ಕಾರದಿಂದ ದೊರಕುವ ಸವಲತ್ತುಗಳನ್ನು ತಲುಪಿಸಲು ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ವೇಳೆ ಡಾ.ಬಾಬು ಜಗಜೀವರಾಂ ಜನ ಕಲ್ಯಾಣ ಸಂಘದ ಉಪಾಧ್ಯಕ್ಷ ಗೋವಿಂದರಾಜು, ನಾಗಯ್ಯ, ಮಹದೇವಯ್ಯ, ಕೆ.ಸಿ.ಲಿಂಗರಾಜು, ಕೆಂಪಯ್ಯ, ಪ್ರಧಾನ ಕಾರ್ಯದರ್ಶಿ ಬಿ.ಮಾದೇಶ್, ಸಹ ಕಾರ್ಯದರ್ಶಿ ಸಿ.ಲಿಂಗರಾಜು, ಉಮೇಶ್, ರಜನೀರಾಜ್, ರಾಜೇಶ್, ವಸಂತ, ರಾಜಪ್ಪ, ದುರಿಕಾಳಯ್ಯ, ಸಿದ್ದರಾಜು, ಗಿರೀಶ್, ಐಬಿ ಶಿವು ಹಾಜರಿದ್ದರು

ಸ್ನಾತಕ ಪದವಿಯ ಫಲಿತಾಂಶ ಪ್ರಕಟ

ಮೈಸೂರು, ಜೂ.25–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ) ಮೇ–ಜೂನ್ 2025ರಲ್ಲಿ ನಡೆಸಿದ ಸ್ನಾತಕ ಪದವಿಯ ಎರಡನೇ, ನಾಲ್ಕನೇ ಮತ್ತು ಆರನೇ ಚತುರ್ಮಾಸ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಿದೆ. ಫಲಿತಾಂಶಗಳನ್ನು UUCMS-Student Login ಮೂಲಕ ಪಡೆಯಬಹುದು. ಅಂಕಗಳ ಮರು ಎಣಿಕೆಗೆ 27–06–2025, ಫೋಟೋಪ್ರತಿ ಪಡೆಯಲು ಜೂ.28 ಹಾಗೂ ಮರು ಮೌಲ್ಯಮಾಪನಕ್ಕೆ ಜು.2 ಕೊನೆಯ ದಿನಾಂಕ.

ಪುಟ್ಟಮ್ಮ ನಿಧನ



ಹೆಚ್.ಡಿ.ಕೋಟೆ, ಜೂ.25– ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜ್ ಅವರ ತಾಯಿ ಪುಟ್ಟಮ್ಮ (88) ಬುಧವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮ ಚಿಕ್ಕ ಕೆರೆಯೂರು ಗ್ರಾಮದ ಗಣಪತಿ ದೇವಾಲಯದ ಬಳಿ ನಡೆಯಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಐದನೇ ಪುಟದಿಂದ

ಶುಭಾಂಶು ಶುಕ್ಲಾ ತಂಡದ ಐತಿಹಾಸಿಕ ಅಂತರಿಕ್ಷ ಯಾನ

ಮರಳುವಿಕೆಯನ್ನು ಸೂಚಿಸುವ ಆಕ್ಸಿಯಂ–4 ಮಿಷನ್‌ನ ಭಾಗವಾಗಿದ್ದಾರೆ. 1984ರಲ್ಲಿ ಅಂದಿನ ಸೋವಿಯತ್ ಒಕ್ಕೂಟದ ಸಲ್ಯೂಟ್–7 ಬಾಹ್ಯಾಕಾಶ ನಿಲ್ದಾಣದ ಭಾಗವಾಗಿ ರಾಕೇಶ್ ಶರ್ಮಾ 8 ದಿನಗಳ ಕಾಲ ಕಕ್ಷೆಯಲ್ಲಿದ್ದರು. 41 ವರ್ಷಗಳ ನಂತರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣಿಸಿದ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಶುಭಾಂಶು ಶುಕ್ಲಾ ಪಾತ್ರರಾಗಿದ್ದಾರೆ. ನಾಳೆ (ಜೂ.26) ಭಾರತೀಯ ಕಾಲಮಾನ ಸುಮಾರು ಸಂಜೆ 4.30ಕ್ಕೆ ಕಕ್ಷೆಗೆ ತಲುಪಲಿದೆ ಎಂದು ನಾಸಾ ಹೇಳಿಕೆಯಲ್ಲಿ ತಿಳಿಸಿದೆ. ಆಕ್ಸಿಯಂ–4 ಮಿಷನ್ ಅನ್ನು ಮೇ 29ರಂದು ಉಡಾವಣೆ ಮಾಡಲು ಯೋಜಿಸಲಾಗಿತ್ತು. ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಸಂಪೂರ್ಣವಾಗಿ ಸಿದ್ಧವಾಗಿಲ್ಲದ ಕಾರಣ ಜೂನ್ 8ಕ್ಕೆ ಮುಂದೂಡಬೇಕಾಯಿತು. ರಾಕೆಟ್‌ನ ಆರೋಹಣ ಮಾರ್ಗದಲ್ಲಿ ಹೆಚ್ಚಿನ ಗಾಳಿ ಬೀಸಿದ್ದರಿಂದ ಕಾರ್ಯಾಚರಣೆಯನ್ನು ಮುಂದೂಡಬೇಕಾಯಿತು.

ಉಡಾವಣಾ ರಾಕೆಟ್ ಮತ್ತು ಬಾಹ್ಯಾಕಾಶ ಕ್ಯಾಪ್ಸುಲ್‌ನ ಪೂರೈಕೆದಾರರಾದ ಸ್ಪೇಸ್‌ಎಕ್ಸ್, ಫಾಲ್ಕನ್–9 ರಾಕೆಟ್‌ನಲ್ಲಿ ದ್ರವ ಆಮ್ಲಜನಕ ಸೋರಿಕೆಯನ್ನು ಪತ್ತೆಹಚ್ಚಿದಾಗ ಮತ್ತು ಐಎಸ್ ಎಸ್ ನ ಹಳೆಯ ರಷ್ಯಾದ ಮಾಡ್ಯೂಲ್‌ನಲ್ಲಿನ ಕೆಲವು ಸಮಸ್ಯೆಗಳಿಂದಾಗಿ ಜೂನ್ 10 ಮತ್ತು ಜೂನ್ 11ರಂದು ಉಡಾವಣೆಯನ್ನು ಸಾಧಿಸಲು ಸಾಧ್ಯವಾಗಲಿಲ್ಲ.

ಫ್ಲೋರಿಡಾದ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಲ್ಲಿರುವ ಲಾಂಚ್ ಕಾಂಪ್ಲೆಕ್ಸ್ 39೦ ನಿಂದ ಈ ಮಿಷನ್ ಉಡಾವಣೆಯಾಯಿತು. ಕಂಪನಿಯ ಫಾಲ್ಕನ್ 9 ರಾಕೆಟ್‌ನಲ್ಲಿ ಉಡಾವಣೆ ಮಾಡಿದ ನಂತರ ಸಿಬ್ಬಂದಿ ಹೊಸ ಸ್ಪೇಸ್‌ಎಕ್ಸ್ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯಲ್ಲಿ ಕಕ್ಷೆಯಲ್ಲಿರುವ ಪ್ರಯೋಗಾಲಯಕ್ಕೆ ಪ್ರಯಾಣಿಸುತ್ತಾರೆ. ನಾಸಾ ಮತ್ತು ರೋಸ್ಕೋಸ್ಮೋಸ್ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಹಕಾರ ಮತ್ತು ಸಹಯೋಗದ ದೀರ್ಘ ಇತಿಹಾಸವನ್ನು ಹೊಂದಿವೆ. ಆಕ್ಸಿಯಂ ಮಿಷನ್ 4 ಉಡಾವಣೆ ಮತ್ತು ಡಾಕಿಂಗ್ ಮುಂದುವರಿಯುತ್ತದೆ ಎಂದು ನಾಸಾದ ಹಂಗಾಮಿ ಆಡಳಿತಾಧಿಕಾರಿ ಜಾನೆಟ್ ಪೆಟ್ರೋ ಹೇಳಿದ್ದಾರೆ. ಡಾಕಿಂಗ್ ಮಾಡಿದ ನಂತರ, ಖಾಸಗಿ ಗಗನಯಾತ್ರಿಗಳು ಕಕ್ಷೆಯಲ್ಲಿರುವ ಪ್ರಯೋಗಾಲಯದಲ್ಲಿ ಸುಮಾರು ಎರಡು ವಾರಗಳನ್ನು ಕಳೆಯಲು ಯೋಜಿಸಿದ್ದಾರೆ. ವಿಜ್ಞಾನ, ಸಂವಹನ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಒಳಗೊಂಡಿರುವ ಕಾರ್ಯಾಚರಣೆಯನ್ನು ಅಲ್ಲಿ ನಡೆಸುತ್ತಾರೆ.

ನನ್ನ ಭುಜದ ಮೇಲೆ ಭಾರತದ ತ್ರಿವರ್ಣ ಇದೆ

ಬಾಹ್ಯಾಕಾಶ ನೌಕೆಯಿಂದ ಶುಭಾಂಶು ಶುಕ್ಲಾ ಸಂದೇಶ

ನವದೆಹಲಿ: ನಮಸ್ಕಾರ, ನನ್ನ ಪ್ರೀತಿಯ ದೇಶವಾಸಿಗಳೇ!" ಎಂದು ಸ್ಪೇಸ್‌ಎಕ್ಸ್‌ನ ಕ್ರೂಡ್ರಾಗನ್‌ನಲ್ಲಿ ಉಡಾವಣೆಯಾದ ಸುಮಾರು 10 ನಿಮಿಷಗಳ ನಂತರ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ದೇಶವಾಸಿಗಳನ್ನುದ್ದೇಶಿಸಿ ಸಂದೇಶ ಕಳುಹಿಸಿದ್ದಾರೆ. "ನಾವು 41 ವರ್ಷಗಳ ನಂತರ ಬಾಹ್ಯಾಕಾಶ ತಲುಪಿದ್ದೇವೆ. ನಾವು ಸೆಕೆಂಡಿಗೆ ಸುಮಾರು 7.5 ಕಿಮೀನಷ್ಟು ಭೂಮಿಯ ಸುತ್ತ ಸುತ್ತುತ್ತಿದ್ದೇವೆ. ನನ್ನ ಭುಜದ ಮೇಲೆ ಭಾರತೀಯ ತ್ರಿವರ್ಣವಿದೆ. ನಾನು ಈ ಪಯಣದಲ್ಲಿ ನಿಮ್ಮೆಲ್ಲರೊಂದಿಗಿದ್ದೇನೆ. ಇದು ಐಎಸ್‌ಎಸ್‌ಗೆ ನನ್ನ ಪ್ರಯಾಣದ ಆರಂಭ ಮಾತ್ರವಲ್ಲ, ಭಾರತದ ಮಾನವ ಬಾಹ್ಯಾಕಾಶ ಹಾರಾಟದ ಯುಗದ ಆರಂಭವೂ ಆಗಿದೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಈ ಪ್ರಯಾಣದ ಭಾಗವಾಗಬೇಕೆಂದು ನಾನು ಬಯಸುತ್ತೇನೆ, ನಾವು ಭಾರತದ ಮಾನವ ಬಾಹ್ಯಾಕಾಶ ಕಾರ್ಯಕ್ರಮವನ್ನು ಒಟ್ಟಿಗೆ ಪ್ರಾರಂಭಿಸೋಣ ಎಂದು ಹೇಳಿದ್ದಾರೆ. ಶುಕ್ಲಾ ಅವರು ಆಕ್ಸಿಯಮ್–4 ಮಿಷನ್‌ನಲ್ಲಿ ಪೈಲಟ್ ಆಗಿ ಪ್ರಯಾಣಿಸಿದ್ದಾರೆ. ಬಾಹ್ಯಾಕಾಶಕ್ಕೆ ಹಾರಾಟ ನಡೆಸಿದ ಎರಡನೇ ಭಾರತೀಯ ಶುಭಾಂಶು ಶುಕ್ಲಾ ಆಗಿದ್ದಾರೆ. 1984 ರಲ್ಲಿ ರಾಕೇಶ್ ಶರ್ಮಾ ಅವರ ಹಾರಾಟದ ನಂತರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಹೆಗ್ಗಳಿಕೆ ಶುಕ್ಲಾ ಅವರದ್ದು. ಆಕ್ಸಿಯಮ್–4 ಮಿಷನ್ ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಭಾರತೀಯ ಕಾಲಮಾನ ಇಂದು ಮಧ್ಯಾಹ್ನ 12:01 ಕ್ಕೆ ಐಎಸ್‌ಎಸ್ ಕಡೆಗೆ ಹಾರಿತು, ಉತ್ತರ ಪ್ರದೇಶದ ಲಕ್ನೋ ಮೂಲದ ಶುಭಾಂಶು ಶುಕ್ಲಾ ಪೋಷಕರು ಹರ್ಷೋದ್ಗಾರಗಳ ನಡುವೆ ಐತಿಹಾಸಿಕ ಉಡಾವಣೆಗೆ ಸಾಕ್ಷಿಯಾದರು.

ಲಕ್ನೋದಲ್ಲಿ ಜನಿಸಿದ ಶುಕ್ಲಾ, ನಾಸಾದ ಮಾಜಿ ಗಗನಯಾತ್ರಿ ಮಿಷನ್ ಕಮಾಂಡರ್ ಪೆಗ್ಗಿ ವಿಟ್ಸನ್, ಪೋಲೆಂಡ್‌ನ ಸ್ಲಾವೋಸ್ಜ್ ಉಜ್ನಾನ್ಸ್ಕಿ–ವಿಸ್ನಿಯೆವ್ಸ್ಕಿ ಮತ್ತು ಹಂಗೇರಿಯ ಟಿಬೋರ್ ಕಾಪು ಅವರು ಮೂರು ರಾಷ್ಟ್ರಗಳಿಗೆ ಬಾಹ್ಯಾಕಾಶಕ್ಕೆ ಮರಳುವಿಕೆಯನ್ನು ಸೂಚಿಸುವ ಆಕ್ಸಿಯಮ್–4 ಕಾರ್ಯಾಚರಣೆಯ ಭಾಗವಾಗಿದ್ದಾರೆ.

ಕಾವೇರಿ ಆರತಿ ಮಾಡೇ ಮಾಡ್ತೇವೆ

ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಇದು ಅವರ ತಪ್ಪಲ್ಲ. ಅಣೆಕಟ್ಟು ವಿಚಾರದಲ್ಲಿ ನಮಗೂ ಜವಾಬ್ದಾರಿ ಇದೆ. ಈ ಕಾರ್ಯಕ್ರಮ ಕಾವೇರಿ ತಾಯಿಯ ಪ್ರಾರ್ಥಿಸುವ ಕಾರ್ಯಕ್ರಮ. ಕೊಡಗು, ಮಂಗಳೂರು, ಮೈಸೂರು, ಮಂಡ್ಯ ಸಂಸ್ಕೃತಿ ಈ ಕಾರ್ಯಕ್ರಮದಲ್ಲಿರಲಿದೆ. ಸುಮಾರು 2 ಸಾವಿರ ಜನರಿಗೆ ನೇರ ಉದ್ಯೋಗ ಸಿಗಲಿದೆ ಎಂದು ವಿವರಿಸಿದರು.

ಮುಂದಿನ ಎರಡು ಮೂರು ದಿನಗಳಲ್ಲಿ ಕಾವೇರಿ ಆರತಿ ಕಾರ್ಯಕ್ರಮದ ಸ್ವರೂಪ ಪ್ರಕಟಿಸಲಾಗುವುದು. ತಪ್ಪು ಗ್ರಹಿಕೆಯಿಂದ ಕೆಲವರು ಈ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಮತ್ತೊಮ್ಮೆ ಎಲ್ಲರ ಜತೆ ಸಭೆ ಮಾಡುತ್ತೇನೆ. ಈ ಕಾರ್ಯಕ್ರಮವಂತೂ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು.

ಕಾವೇರಿ ನದಿ ಬೆಂಗಳೂರು ನಗರ, ಮಂಡ್ಯ, ತಮಿಳುನಾಡು, ಪುದುಚೇರಿ, ಕೇರಳ ರಾಜ್ಯದ ರೈತರಿಗೆ ಆಸರೆಯಾಗಿದೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬುದು ನಮ್ಮ ನಂಬಿಕೆ. ಈ ದೇಶದಲ್ಲಿ ಗಂಗಾ ಆರತಿ, ನಮ್ಮ ರಾಜ್ಯದಲ್ಲಿ ತುಂಗಾ ಆರತಿ ಕಾರ್ಯಕ್ರಮ ಮಾಡಲಾಗುತ್ತಿದೆ. ಈಗ ಕಾವೇರಿ ಆರತಿ ಮಾಡಲು ನಾವು ತೀರ್ಮಾನ ಮಾಡಿದ್ದೇವೆ. ಕೆಆರ್‌ಎಸ್ ಬೃಂದಾವನ ಉದ್ಯಾನಕ್ಕೆ ಸಾವಿರಾರು ಪ್ರವಾಸಿಗರು ಬರುತ್ತಿದ್ದು, ಇದನ್ನು ಮತ್ತಷ್ಟು ಹೆಚ್ಚಿಸಬೇಕು. ಇದಕ್ಕಾಗಿ ನಾವು ಇದರ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಬೇಕು. ಕಾವೇರಿ ಮಾತೆಗೆ ಪ್ರಾರ್ಥಿಸುವುದು, ಉದ್ಯೋಗ ಸೃಷ್ಟಿ, ಸಂಸ್ಕೃತಿ ಪರಂಪರೆ ಉಳಿಸಲು, ಪ್ರವಾಸೋದ್ಯಮದ ಆಕರ್ಷಣೆಗೆ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

'ಚಾಮುಂಡಿ ಬೆಟ್ಟದಲ್ಲಿ ಪ್ರಾಧಿಕಾರ ರಚನೆ ಮಾಡಿ ಅಭಿವೃದ್ಧಿ ಮಾಡಲಾಗುತ್ತಿದೆ. ಟಿವಿಎಸ್ ಸೇರಿದಂತೆ ಅನೇಕ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯಲ್ಲಿ ದೇವಾಲಯಗಳ ಅಭಿವೃದ್ಧಿ ಮಾಡುತ್ತಿದ್ದಾರೆ. ಕಾವೇರಿ ಆರತಿಯ ಪ್ರಾಯೋಗಿಕ ಕಾರ್ಯಕ್ರಮವಾಗಿ ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ಕಾರ್ಯಕ್ರಮ ಮಾಡಲಾಗಿದೆ. ಇದರ ವಿರುದ್ಧ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದರೂ ಕೊನೆಗೆ ನ್ಯಾಯಾಲಯ ಕಾರ್ಯಕ್ರಮಕ್ಕೆ ಅನುಮತಿ ನೀಡಿತು. ಆ ಕಾರ್ಯಕ್ರಮದಲ್ಲಿ ಸುಮಾರು 25 ಸಾವಿರ ಜನ ಬಂದು ವೀಕ್ಷಣೆ ಮಾಡಿದರು. ಇದು ಜನರ ಭಾವನೆಯಾಗಿದೆ. ತಾಯಿ ಕಾವೇರಿ ಎಲ್ಲಾ ವರ್ಗದ ಆಸ್ತಿ. ಕಾವೇರಿ ಇಲ್ಲವಾದರೆ ಬೆಂಗಳೂರಿಗೆ ನೀರಿಲ್ಲ. ಕೈಗಾರಿಕೆ, ಕೃಷಿಗೆ ನೀರಿರುವುದಿಲ್ಲ. ನಮ್ಮ ರಾಜ್ಯ ಹಾಗೂ ತಮಿಳುನಾಡಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಮೇಕೆದಾಟು ಯೋಜನೆಗೆ ಅನುಮತಿ ಪಡೆಯಲು ಹೋರಾಟ ಮಾಡುತ್ತಿದ್ದೇವೆ ಎಂದರು.

ತುರ್ತು ಪರಿಸ್ಥಿತಿ ಖಂಡಿಸಿ ಕೇಂದ್ರ ಸಂಪುಟ ನಿರ್ಣಯ; ಎರಡು ನಿಮಿಷ ಮೌನಾಚರಣೆ



ನವದೆಹಲಿ: ದೇಶದಲ್ಲಿ 50 ವರ್ಷಗಳ ಹಿಂದೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಘೋಷಣೆ ಮಾಡಿದ್ದ ತುರ್ತು ಪರಿಸ್ಥಿತಿಯನ್ನು ಖಂಡಿಸಿ ಕೇಂದ್ರ ಸಚಿವ ಸಂಪುಟ ಬುಧವಾರ ನಿರ್ಣಯ ಅಂಗೀಕರಿಸಿದೆ ಮತ್ತು ಸಂವಿಧಾನಾತ್ಮಕವಾಗಿ ಖಾತರಿಪಡಿಸಿದ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಳೆದುಕೊಂಡ ಮತ್ತು ನಂತರ ಊಹಿಸಲಾಗದ ಭಯಾನಕತೆಗಳಿಗೆ ಒಳಗಾದವರಿಗೆ ಗೌರವ ಸಲ್ಲಿಸಲು ಎರಡು ನಿಮಿಷ ಮೌನ ಆಚರಿಸಲಾಯಿತು. ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ನಿರ್ಣಯವನ್ನು ಓದಿದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ತುರ್ತು ಪರಿಸ್ಥಿತಿಯ ಅತಿರೇಕಗಳಿಗೆ ಖಂಡನೆ ವ್ಯಕ್ತಪಡಿಸುವ ನಿರ್ಣಯವನ್ನು ಕೇಂದ್ರ ಸಚಿವ ಸಂಪುಟ ಸಭೆ ಅಂಗೀಕರಿಸಿತು ಎಂದರು. ಆಗಿನ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರ ಜೂನ್ 25, 1975 ರಂದು ತುರ್ತು ಪರಿಸ್ಥಿತಿಯನ್ನು ಘೋಷಿಸಿತ್ತು. ಕಳೆದ ವರ್ಷ, ಮೋದಿ ಸರ್ಕಾರ ಈ ದಿನವನ್ನು 'ಸಂವಿಧಾನ ಹತ್ಯೆ ದಿವಸ್' ಎಂದು ಆಚರಿಸುವುದಾಗಿ ಘೋಷಿಸಿತು. ಭಾರತೀಯ ಸಂವಿಧಾನದ ಚೈತನ್ಯವನ್ನು ಬುಡಮೇಲು ಮಾಡುವ ತುರ್ತು ಪರಿಸ್ಥಿತಿಯ ವಿರುದ್ಧ ಧೈರ್ಯದಿಂದ ಹೋರಾಡಿದ ಅಸಂಖ್ಯಾತ ವ್ಯಕ್ತಿಗಳ ತ್ಯಾಗಗಳನ್ನು ಸ್ಮರಿಸಲು ಮತ್ತು ಗೌರವಿಸಲು ಕೇಂದ್ರ ಸಚಿವ ಸಂಪುಟ ಸಭೆ ನಿರ್ಧರಿಸಿತು.

ಆಡಳಿತದಲ್ಲಿ ಕನ್ನಡ ಕಡ್ಡಾಯ

ಇರುವಂತೆಯೂ ತಿಳಿಸಲಾಗಿದೆ. ಸಭಾ ಸೂಚನೆ, ಕಾರ್ಯಸೂಚಿ, ಸಂಕ್ಷಿಪ್ತ ಟಿಪ್ಪಣಿ ಹಾಗೂ ನಡಾವಳಿಗಳನ್ನು ಕನ್ನಡದಲ್ಲಿ ತಯಾರಿಸಿ ಸರ್ಕಾರದ ಭಾಷಾ ನೀತಿಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವಂತೆ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದೆ. ಕೇಂದ್ರ ಸರ್ಕಾರ, ಹೊರ ರಾಜ್ಯಗಳು ಮತ್ತು ನ್ಯಾಯಾಲಯಗಳ ಪತ್ರ ವ್ಯವಹಾರಗಳನ್ನು ಹೊರತುಪಡಿಸಿ, ಉಳಿದ ಎಲ್ಲ ಪತ್ರ ವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲ್ಲಿಯೇ ಇರುವಂತೆ ಸೂಚಿಸಲಾಗಿದೆ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದಾರೆ.

ಕೆಡಿಪಿ ಸಭೆಯ ಕಾರ್ಯಸೂಚಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಂಗ್ಲ ಭಾಷೆಯಲ್ಲಿ ಹೊರಡಿಸುತ್ತಾರೆ. ವಿಶೇಷವಾಗಿ ಕಾಮಗಾರಿ ನಡೆಸುವ ಇಲಾಖೆಗಳು ಮಾಹಿತಿಗಳನ್ನು ಆಂಗ್ಲ ಭಾಷೆಯಲ್ಲಿ ಮಂಡಿಸುತ್ತಿದೆ. ಇದನ್ನು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅನುಮೋದಿಸುತ್ತಿದ್ದಾರೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ವರದಿ ನೀಡಿದ್ದಾರೆ ಎಂದೂ ಸುತ್ತೋಲೆಯಲ್ಲಿ ಮುಖ್ಯ ಕಾರ್ಯದರ್ಶಿ ವಿವರಿಸಿದ್ದಾರೆ.

ರಾಹುಲ್ ಗಾಂಧಿ ಅಲಭ್ಯತೆ; ಬರಿಗೈಲಿ ಸಿದ್ದರಾಮಯ್ಯ ವಾಪಸ್

ಮಲ್ಲಿಕಾರ್ಜುನ ಖರ್ಗೆ, ವೇಣುಗೋಪಾಲ್, ಸುರ್ಜೇವಾಲ ಜೊತೆ ಪಕ್ಷದ ವಿಚಾರ ಚರ್ಚೆ



ಬೆಂಗಳೂರು, ಜೂ. 25(ಕೆಎಂಶಿ)– ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅನುಪಸ್ಥಿತಿಯಲ್ಲಿ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಲಾಗದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ತಂಡ ದೆಹಲಿಯಿಂದ ಖಾಲಿ ಕೈಯಲ್ಲಿ ಬೆಂಗಳೂರಿಗೆ ಹಿಂತಿರುಗಿದೆ. ಪ್ರಪಂಚದ ವಿದ್ಯಮಾನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಹೆಚ್ಚು ತೊಡಗಿಕೊಂಡಿರುವುದರಿಂದ ಅವರ ಭೇಟಿಗೂ ಸಿದ್ದರಾಮಯ್ಯ ಅವರಿಗೆ ಸಮಯ ಸಿಗಲಿಲ್ಲ.

ದೆಹಲಿಗೆ ತೆರಳುವುದಕ್ಕೂ ಮುನ್ನ ಪ್ರಧಾನಿ ಅವರ ಭೇಟಿಗೆ ಅವಕಾಶ ಕೋರಿದ್ದರು. ಸಾಧ್ಯವಾದರೆ, ಇಂದು ಭೇಟಿಗೆ ಅವಕಾಶ ನೀಡುವುದಾಗಿ ಪ್ರಧಾನಿ ಕಾರ್ಯಾಲಯ ತಿಳಿಸಿತ್ತು. ಪ್ರಧಾನಿ ಅವರು ವಿಶ್ವದ ವಿದ್ಯಮಾನಗಳಲ್ಲಿ ಹೆಚ್ಚು ತೊಡಗಿಸಿಕೊಂಡಿರುವುದರಿಂದ ಜುಲೈ ಮೊದಲ ವಾರದಲ್ಲಿ ಭೇಟಿಗೆ ಅವಕಾಶ ನೀಡುವ ಸಾಧ್ಯತೆ ಬಗ್ಗೆ ಕಾರ್ಯಾಲಯ ತಿಳಿಸಿದೆ.

ಸಿಎಂ ದೆಹಲಿ ಯಾತ್ರೆ ಅಜೆಂಡಾ
- ಸಂಪುಟಕ್ಕೆ ಒಂದಿಬ್ಬರ ಸೇರ್ಪಡೆ
- ಕೆಪಿಸಿಸಿ ಅಧ್ಯಕ್ಷರ ಬದಲಾವಣೆ
- ಪರಿಷತ್‌ಗೆ ನಾಲ್ವರ ನಾಮನಿರ್ದೇಶನ

ನರೇಂದ್ರ ಮೋದಿ ಭೇಟಿಗೂ ಮಿಗಿಲಾಗಿ ಕಾಂಗ್ರೆಸ್ ಮತ್ತು ಸರ್ಕಾರಕ್ಕೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರ ಜೊತೆ ಕೆಲವು ರಾಜಕೀಯ ತೀರ್ಮಾನ ಕೈಗೊಳ್ಳುವುದೇ ಮುಖ್ಯಮಂತ್ರಿ ದೆಹಲಿ ಪ್ರವಾಸದ ಉದ್ದೇಶವಾಗಿತ್ತು. ತುರ್ತಾಗಿ ಸಂಪುಟಕ್ಕೆ ಒಂದಿಬ್ಬರನ್ನು ಹೊಸದಾಗಿ ಸೇರ್ಪಡೆ ಮಾಡಿಕೊಳ್ಳುವುದು, ಇದಕ್ಕಾಗಿ ಒಬ್ಬರನ್ನು ಕೈಬಿಡುವುದು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಗಾದಿಯಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೆಳಗಿಳಿಸಿ, ಆ ಸ್ಥಾನಕ್ಕೆ ತಮ್ಮ ಆಪ್ತ ಬಣದ ಸಚಿವರಾದ ಈಶ್ವರ್ ಖಂಡ್ರೆ ಇಲ್ಲವೇ ಸತೀಶ್ ಜಾರಕಿಹೊಳಿ ಅವರನ್ನು ತರುವುದು ಇವುಗಳಲ್ಲಿ ಸೇರಿತ್ತು. ವಿಧಾನಪರಿಷತ್‌ನ ತೆರವಾದ ನಾಲ್ಕು ಸ್ಥಾನಗಳಿಗೆ ನೇಮಕ ಮಾಡಲು ಈ ಹಿಂದೆ ನೀಡಲಾದ ಹೆಸರುಗಳ ಪಟ್ಟಿಗೆ ವರಿಷ್ಠರ ಅನುಮೋದನೆ ಪಡೆಯುವ ಹಾಗೂ ಕೆಲವು ಸೂಕ್ಷ್ಮ ವಿಚಾರಗಳನ್ನು ಅವರ ಗಮನಕ್ಕೆ ತರುವ ಉದ್ದೇಶವೂ ಇತ್ತು. ವಿದೇಶ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಸ್ವದೇಶಕ್ಕೆ ಮರಳಲಿದ್ದಾರೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ದೆಹಲಿ ಪ್ರವಾಸ ಕೈಗೊಂಡಿದ್ದರು.

ಇಂದು ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ

● 12 ನಿರ್ದೇಶಕರ ಸ್ಥಾನಕ್ಕೆ 29 ಮಂದಿ ಸ್ಪರ್ಧೆ ● ಒಟ್ಟು 380 ಮತದಾರರು; ಕೋರ್ಟ್ ಪರಿಗಣಿತರಿಗೂ ಮತದಾನಕ್ಕೆ ಅವಕಾಶ



ನಂಜರಾಜ ಬಹದ್ದೂರ್ ಛತ್ರಕ್ಕೆ ಬುಧವಾರ ಸಂಜೆ ಭೇಟಿ ನೀಡಿದ ಎಂಸಿಡಿಸಿಸಿ ಬ್ಯಾಂಕ್ ಚುನಾವಣಾ ರಿಟರ್ನಿಂಗ್ ಅಧಿಕಾರಿ ಆಶಪ್ಪ ಸಿದ್ಧತೆ ಪರಿಶೀಲನೆ ನಡೆಸಿದರು. ಎಆರ್‌ಓ ಮನೋಜ್‌ಕುಮಾರ್, ಎಂಸಿಡಿಸಿಸಿ ಬ್ಯಾಂಕ್ ಸಿಇಓ ಕಾಂತರಾಜು, ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಘು ಮತ್ತಿತರರಿದ್ದರು.

ಮೈಸೂರು, ಜೂ.25(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ನಾಳೆ (ಜೂ.26) ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್(ಎಂಸಿಡಿಸಿಸಿ)ನ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಕ್ಕೆ ಮತದಾನ ನಡೆಯಲಿದ್ದು, ಅಗತ್ಯ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಚುನಾವಣೆಯ ಅಂತಿಮ ಕಣದಲ್ಲಿ 29 ಮಂದಿ ಇದ್ದು, 37 ಮಂದಿ ನಾಮಪತ್ರ ಸಲ್ಲಿಸಿದ್ದರು. ಯಳಂದೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ವೈ.ಎಂ.ಜಯರಾಂ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆ 12 ನಿರ್ದೇಶಕರ ಸ್ಥಾನಗಳಿಗೆ ಮತದಾನ ನಡೆಯಲಿದೆ. 380 ಅರ್ಹ ಮತದಾರರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದು, 174 ಮಂದಿ ಅನರ್ಹ ಮತದಾರರ ಪೈಕಿ, ಕೋರ್ಟ್‌ನಿಂದ 'ಅರ್ಹ ಮತದಾರ' ಎಂದು ಪರಿಗಣಿತರು ಮತದಾನ ಮಾಡಬಹುದಾಗಿದೆ.

ಮೈಸೂರು ತಾಲೂಕಿನಿಂದ–26 ಮಂದಿ ಡೆಲಿಗೇಟ್ಸ್ (ಮತದಾರ), ನಂಜನಗೂಡು–33, ತಿ.ನರಸೀಪುರ–32, ಹುಣಸೂರು–15, ಎಚ್.ಡಿ.ಕೋಟೆ–18, ಕೆಆರ್.ನಗರ–24, ಪಿರಿಯಾಪಟ್ಟಣ–26, ಚಾಮರಾಜನಗರ–38, ಗುಂಡ್ಲುಪೇಟೆ–32, ಕೊಳ್ಳೇಗಾಲ–23, ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಕ್ಷೇತ್ರ–56, ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕ್‌ಗಳ ಕ್ಷೇತ್ರ–57 ಮಂದಿ ಸೇರಿ ಒಟ್ಟು 380 ಮಂದಿ ಮತದಾರರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ.

ಮೈಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಎಂ.ಕೆಂಚಪ್ಪ (ಚಿಹ್ನೆ ಸಿಲಿಂಡರ್), ಎಂ.ಜಿ.ಸಿದ್ದರಾಜು(ಆಟೋ) ಕಣದಲ್ಲಿದ್ದರೆ, ನಂಜನಗೂಡು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಕೆ.ರಾಜು(ಆಟೋ), ಬಿ.ಎಸ್.ಸದಾನಂದ (ಸಿಲಿಂಡರ್), ಟಿ.ನರಸೀಪುರ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ.ಬಸವೇಗೌಡ(ಸಿಲಿಂಡರ್), ಟಿ.ಪಿ.ಬೋರೆಗೌಡ (ಕ್ಯಾಂಡಲ್), ಹೆಚ್.ಡಿ.ಕೋಟೆ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ.ಅನಿಲ್‌ಕುಮಾರ್(ಸಿಲಿಂಡರ್), ಮಾದಪ್ಪ (ದ್ರಾಕ್ಷಿ), ಜಿ.ಕೆ.ಲಕ್ಷ್ಮಿಪ್ರಸಾದ್(ಆಟೋ), ಶಿವನಂಜೇಗೌಡ(ಕ್ಯಾಂಡಲ್) ಕಣದಲ್ಲಿದ್ದಾರೆ.

ಹಾಗೆಯೇ ಹುಣಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಗೋವಿಂದೇಗೌಡ(ಬೀರು), ಜೆ.ಶಿವಣ್ಣ(ಹಣ್ಣಿನ ಬುಟ್ಟಿ), ಜಿ.ಡಿ.ಹರೀಶ್‌ಗೌಡ(ಆಟೋ), ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಅಮಿತ್ ವಿ.ದೇವರಹಟ್ಟಿ (ಕಿರೀಟ), ದೊಡ್ಡಸ್ವಾಮೇಗೌಡ (ಆಟೋ), ಎಸ್.ಸಿದ್ದೇಗೌಡ(ಸಿಲಿಂಡರ್), ಪಿರಿಯಾಪಟ್ಟಣ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ.ಎನ್.ರವಿ (ಹಣ್ಣಿನ ಬುಟ್ಟಿ), ಈ.ಪಿ.ಲೋಕೇಶ್(ಆಟೋ) ಸ್ಪರ್ಧಿಸಿದ್ದಾರೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಕ್ಷೇತ್ರದಿಂದ ಎಸ್.ಬಿ.ಎಂ. ಮಂಜು (ಆಟೋ), ಜಿ.ಎನ್.ಮಂಜುನಾಥ್ (ಸಿಲಿಂಡರ್), ಹೆಚ್.ವಿ.ರಾಜೀವ್ (ಸೂಟ್‌ಕೇಸ್), ತಾಲೂಕು, ಜಿಲ್ಲೆ ಹಾಗೂ ಜಿಲ್ಲಾ ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ ಎಸ್.ಚಂದ್ರಶೇಖರ್(ಸಿಲಿಂಡರ್), ಟಿ.ರಾಮೇಗೌಡ(ಆಟೋ) ಅಖಾಡದಲ್ಲಿದ್ದಾರೆ.

> ಎಂಸಿಡಿಸಿಸಿ ಬ್ಯಾಂಕ್‌ನ 12 ನಿರ್ದೇಶಕರ ಸ್ಥಾನಕ್ಕೆ ನಡೆಯುವ ಚುನಾವಣೆ ಸಂಬಂಧ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, ಮತದಾನ ಮುಕ್ತಾಯವಾದ ಕೂಡಲೇ ಮತ ಎಣಿಕೆ ಆರಂಭವಾಗಲಿದೆ. ಅಂದು ಸಂಜೆಯೇ ಚುನಾವಣಾ ಫಲಿತಾಂಶವನ್ನು ಪ್ರಕಟಿಸಲಾಗುವುದು.
> – **ಆಶಪ್ಪ**, ರಿಟರ್ನಿಂಗ್ ಅಧಿಕಾರಿ

ಅದೇ ರೀತಿ ಚಾಮರಾಜನಗರ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ.ಪುಟ್ಟರಂಗಶೆಟ್ಟಿ(ಟ್ರ್ಯಾಕ್ಟರ್), ಪಿ.ವೃಷಬೇಂದ್ರಪ್ಪ(ಆಟೋ), ಗುಂಡ್ಲುಪೇಟೆ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಹೆಚ್.ಎಂ.ಗಣೇಶ್‌ಪ್ರಸಾದ್ (ಟ್ರ್ಯಾಕ್ಟರ್), ಎಸ್.ಎಂ.ವೀರಪ್ಪ(ಆಟೋ), ಕೊಳ್ಳೇಗಾಲ ಮತ್ತು ಹನೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಆರ್.ನರೇಂದ್ರ(ಟ್ರ್ಯಾಕ್ಟರ್), ಬಿ.ಎಸ್.ಮಲ್ಲೇಶ್ (ಆಟೋ) ಕಣದಲ್ಲಿದ್ದು, ಮತದಾರರ ಒಲವು ಯಾರ ಮೇಲಿದೆ ಎಂಬ ಕುತೂಹಲ ಕಾಡತೊಡಗಿದೆ.

ಪೂರ್ವ ಸಿದ್ಧತೆ: ಮತದಾನ ನಡೆಯುವ ನಂಜರಾಜ ಬಹದ್ದೂರ್ ಛತ್ರದಲ್ಲಿ ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, 12 ಕ್ಷೇತ್ರಗಳ ಮತದಾನ ಹಾಗೂ ಮತ ಎಣಿಕೆಗಾಗಿ ಮತಗಟ್ಟೆ ಉಸ್ತುವಾರಿ ಅಧಿಕಾರಿಗಳು, ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ಪೋಲಿಂಗ್ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿ–ಸಿಬ್ಬಂದಿ ಸೇರಿ 100 ಮಂದಿಯನ್ನು ನಿಯೋಜಿಸಲಾಗಿದೆ.

ಸ್ಥಳ ಪರಿಶೀಲಿಸಿದ ಅಧಿಕಾರಿಗಳು: ಬುಧವಾರ ಸಂಜೆ ನಂಜರಾಜ ಬಹದ್ದೂರ್ ಛತ್ರಕ್ಕೆ ಭೇಟಿ ನೀಡಿದ ಎಂಸಿಡಿಸಿಸಿ ಬ್ಯಾಂಕ್ ಚುನಾವಣಾ ರಿಟರ್ನಿಂಗ್ ಅಧಿಕಾರಿಗಳೂ ಆದ ಉಪ ವಿಭಾಗಾಧಿಕಾರಿ ಆಶಪ್ಪ, ಸ್ಥಳ ಪರಿಶೀಲನೆ ನಡೆಸಿದರು. ಮತದಾನ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯಬಾರದು, ಸೂಕ್ತ ಭದ್ರತೆ ನೋಡುವಂತೆ ಪೊಲೀಸ್ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಎಆರ್‌ಓ ಮನೋಜ್‌ಕುಮಾರ್, ಎಂಸಿಡಿಸಿಸಿ ಬ್ಯಾಂಕ್ ಸಿಇಓ ಕಾಂತರಾಜು, ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಘು ಮತ್ತಿತರರಿದ್ದರು.



ಕಣದಲ್ಲಿ ಘಟಾನುಘಟಿಗಳು...!

ತೀವ್ರ ಕುತೂಹಲ ಕೆರಳಿಸಿರುವ ಎಂಸಿಡಿಸಿಸಿ ಚುನಾವಣೆಯಲ್ಲಿ ಬಣ ಇಲ್ಲದಿರುವುದು ಮತ್ತಷ್ಟು ಕುತೂಹಲ ಕೆರಳಿಸಿದ್ದು, ಚುನಾವಣಾ ಕಣದಲ್ಲಿ ಘಟಾನುಘಟಿಗಳಿದ್ದಾರೆ. ಶಾಸಕರಾದ ಚಾಮರಾಜನಗರ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ (ಜಿ.ಡಿ.ಹರೀಶ್), ಹೆಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು (ಸಿ.ಅನಿಲ್ ಕುಮಾರ್), ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹಾಗೂ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಚಂದ್ರಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರು ಸ್ಪರ್ಧಿಗಳಿದಿದ್ದಾರೆ.





ಮಣಿಪಾಲ್ ಆಸ್ಪತ್ರೆ ರಿಂಗ್ ರಸ್ತೆ ಜಂಕ್ಷನ್‌ನ

'ನಾಡಪ್ರಭು ಕೆಂಪೇಗೌಡರ ವೃತ್ತ'ಕ್ಕೆ ನಾಳೆ ಬೃಹತ್ ಬೈಕ್ ರ್ಯಾಲಿ

ಮೈಸೂರು,ಜೂ.25(ಪಿಎಂ)– ಮೈಸೂರು–ಬೆಂಗಳೂರು ಹೆದ್ದಾರಿ ರಿಂಗ್ ರಸ್ತೆ ಜಂಕ್ಷನ್‌ಗೆ 'ನಾಡಪ್ರಭು ಕೆಂಪೇಗೌಡರ ವೃತ್ತ' ಎಂದು ನಾಮಕರಣ ಮಾಡಿ 10ಕ್ಕೂ ಹೆಚ್ಚು ವರ್ಷಗಳೇ ಕಳೆದಿವೆ. ಹೀಗಾಗಿ ಕೆಂಪೇಗೌಡರ ವೃತ್ತ ಎಂದೇ ಸದರಿ ಜಂಕ್ಷನ್ ಅನ್ನು ಕರೆಯುವಂತೆ ಪ್ರಚಾರಪಡಿಸುವ ನಿಟ್ಟಿನಲ್ಲಿ ಕೆಂಪೇಗೌಡರ ಜಯಂತ್ಯುತ್ಸವ ಹಮ್ಮಿಕೊಂಡಿರುವ ಜೂ.27ರಂದು ಬೆಳಗ್ಗೆ 7.30ಕ್ಕೆ ಬೈಕ್ ರ್ಯಾಲಿ ಆಯೋಜಿಸಲಾಗಿದೆ ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರೂ ಆದ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ತಿಳಿಸಿದ್ದಾರೆ.



ಕೆ.ವಿ.ಶ್ರೀಧರ್

ಬೆಂಗಳೂರು–ಮೈಸೂರು ರಸ್ತೆ ಹಾಗೂ ನಗರದ ರಿಂಗ್ ರಸ್ತೆ ಜಂಕ್ಷನ್‌ಗೆ 'ನಾಡಪ್ರಭು ಕೆಂಪೇಗೌಡರ ವೃತ್ತ' ಎಂದು ನಾಮಕರಣ ಮಾಡಿ ಈಗಾಗಲೇ 10ಕ್ಕೂ ಹೆಚ್ಚು ವರ್ಷಗಳು ಕಳೆದಿವೆ. ಆದರೆ ಒಂದೆಡೆ ವೃತ್ತದ ಅಭಿವೃದ್ಧಿ ಕಾರ್ಯ ಆಗಿಲ್ಲ. ಮತ್ತೊಂದೆಡೆ ಕೆಂಪೇಗೌಡ ವೃತ್ತವೆಂದು ನಾಮಕರಣ ಆಗಿದ್ದರೂ ಸಮೀಪದ ಮಣಿಪಾಲ್ ಆಸ್ಪತ್ರೆ ವೃತ್ತವೆಂದು ಗುರುತಿಸಲಾಗುತ್ತಿದೆ.

ಹಾಗಾಗಿ ಕೆಂಪೇಗೌಡರ ವೃತ್ತ ಎಂದು ಕರೆಯುವಂತೆ ಪ್ರಚಾರಪಡಿಸುವ ನಿಟ್ಟಿನಲ್ಲಿ



ಅಂದು ಬೆಳಗ್ಗೆ 7.30ಕ್ಕೆ ಹೆಬ್ಬಾಳು ಸೂರ್ಯ ಬೇಕರಿ ವೃತ್ತದ ಬಳಿಯಿಂದ ಬಸವನಗುಡಿ ವೃತ್ತದ ಮೂಲಕ ಬೆಂಗಳೂರು ರಸ್ತೆ ಹಾಗೂ ನಗರದ ರಿಂಗ್ ರಸ್ತೆ ಜಂಕ್ಷನ್‌ನ ನಾಡಪ್ರಭು ಕೆಂಪೇಗೌಡರ ವೃತ್ತದವರೆಗೆ ಬೈಕ್ ರ್ಯಾಲಿ ಹಮ್ಮಿಕೊಳ್ಳಲಾಗಿದೆ. ಅಂದು ನಗರದಲ್ಲಿ ನಡೆಯುವ ಕೆಂಪೇಗೌಡರ ಜಯಂತ್ಯುತ್ಸವ ಪ್ರಯುಕ್ತ ಈ ಬೈಕ್ ರ್ಯಾಲಿ ಹಮ್ಮಿಕೊಳ್ಳಲಾಗಿದೆ. ವೃತ್ತಕ್ಕೆ ತಲುಪಿ ಅಲ್ಲಿರುವ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಗುವುದು. ಹೆಬ್ಬಾಳು ಭಾಗದ ಮುಖಂಡರಿಂದ ಈ ರ್ಯಾಲಿ ಏರ್ಪಡಿಸಿದ್ದು, ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಪಾಲ್ಗೊಳ್ಳಬೇಕೆಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಚಿನ್ನಾಭರಣಕ್ಕಾಗಿ ಫೇಸ್‌ಬುಕ್‌ನಲ್ಲಿ ಪರಿಚಯವಾದ ಪ್ರಿಯತಮೆಯ ಕೊಲೆ

ಕೆಆರ್.ಪೇಟೆ, ಜೂ.25(ಶ್ರೀನಿವಾಸ್)– ಫೇಸ್‌ಬುಕ್‌ನಲ್ಲಿ ಗೃಹಿಣಿಯ ಪರಿಚಯ ಮಾಡಿಕೊಂಡ ಬಳಿಕ ಆಕೆಯನ್ನು ಅಪಾರವಾಗಿ ಪ್ರೀತಿಸುವ ನಾಟಕವಾಡಿದ. ಕೊನೆಗೆ ಚಿನ್ನಾಭರಣಕ್ಕಾಗಿ ಅಂತಿಮವಾಗಿ ಆಕೆಯನ್ನು ಬರ್ಬರವಾಗಿ ಹತ್ಯೆ ಮಾಡಿದ. ಈ ಘಟನೆ ತಾಲೂಕಿನ ಕಸಬಾ ಹೋಬಳಿ ಕರೋಠಿ ಗ್ರಾಮದಲ್ಲಿ ನಡೆದಿದೆ.

ಹಾಸನ ಜಿಲ್ಲೆ ಹೊಸಕೊಪ್ಪಲು ಗ್ರಾಮದ ನಿವಾಸಿ ನಂದೀಶ್ ಎಂಬುವರ ಪತ್ನಿ ಪ್ರೀತಿ (35) ಪ್ರಿಯಕರನಿಂದಲೇ ಕೊಲೆಯಾದ ಮಹಿಳೆ. ಕರೋಠಿ ಗ್ರಾಮದ ಪುನೀತ್(28) ಕೊಲೆ ಆರೋಪಿ.

ಘಟನೆ ವಿವರ: ಫೇಸ್‌ಬುಕ್‌ನಲ್ಲಿ ಪ್ರೀತಿ ಮತ್ತು ಪುನೀತ್ ಪರಿಚಯವಾಗಿದ್ದಾರೆ. ಇಬ್ಬರು ಮಕ್ಕಳು ಮತ್ತು ಗಂಡನೊಂದಿಗೆ ಹಾಸನ ಜಿಲ್ಲೆ ಹೊಸಕೊಪ್ಪಲು ಗ್ರಾಮದಲ್ಲಿ ವಾಸವಿದ್ದ ಈಕೆ ಫೇಸ್‌ಬುಕ್ ಮೂಲಕ ಪರಿಚಯವಾದ ಪುನೀತ್‌ನೊಂದಿಗೆ ಲವ್ವಿ–ಡವ್ವಿ ನಡೆಸಿ, ಮೈಸೂರು, ಮಂಡ್ಯ ನಗರಗಳಲ್ಲಿ ಹಲವು ದಿನಗಳ ಕಾಲ ಕಳೆದಿದ್ದಾರೆ. ನಂತರ ನಮ್ಮ ಊರಿಗೆ ಹೋಗೋಣ ಎಂದು ಆಕೆಯನ್ನು ಪುಸಲಾಯಿಸಿದ ಪುನೀತ್, ಕರೋಠಿ ಗ್ರಾಮಕ್ಕೆ ಕರೆದುಕೊಂಡು ಬಂದಿದ್ದಾನೆ. ಮುಸ್ಸಂಜೆಯಾಗುತ್ತಿದ್ದಂತೆ ಬಿ.ಬಿ.ಕಾವಲು ಅರಣ್ಯ ಪ್ರದೇಶದಲ್ಲಿ ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ ನಂತರ ಆಕೆಯ ಮೈಮೇಲಿದ್ದ ಚಿನ್ನಾಭರಣಗಳನ್ನು ದೋಚಿಕೊಂಡು ಕರೋಠಿ ಗ್ರಾಮದ ಜಮೀನಿನ ಬಳಿ ಬಚ್ಚಿಟ್ಟು ಪರಾರಿಯಾಗಿದ್ದಾನೆ. ಕೊಲೆಯಾದ ಪ್ರೀತಿಯ ಮೊಬೈಲ್ ನಂಬರಿಗೆ ಬಂದಿದ್ದ ಕರೆ, ವಾಟ್ಸಪ್ ಚಾಟಿಂಗ್ ಮತ್ತು ವಿಡಿಯೋ ಕಾಲ್ ಆಧರಿಸಿ ಪುನೀತ್‌ನನ್ನು ಸುಲಭವಾಗಿ ಪತ್ತೆ ಹಚ್ಚಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.





ಗಂಡ ಮತ್ತು ಇಬ್ಬರು ಪುಟ್ಟ ಮಕ್ಕಳಿದ್ದರೂ ಫೇಸ್‌ಬುಕ್ ಗೆಳೆಯ ಪುನೀತ್ ಜೊತೆ ಲವ್ವಿ–ಡವ್ವಿಗೆ ಬಿದ್ದಿದ್ದ ಗೃಹಿಣಿ ಪ್ರೀತಿ, ಅಮಾನುಷವಾಗಿ ಕೊಲೆಯಾಗಿರುವುದು ವಿಪರ್ಯಾಸವೇ ಸರಿ. ಘಟನೆ ಕುರಿತು ಕಿಕ್ಕೇರಿ ಪೊಲೀಸ್ ಇನ್ಸ್‌ಪೆಕ್ಟರ್ ರೇವತಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರ, ವರ್ಧಂತಿ ಉತ್ಸವ

ಜಿಲ್ಲಾಧಿಕಾರಿಗಳಿಂದ ಅಂತಿಮ ಸಿದ್ಧತೆಗಳ ಪರಿಶೀಲನೆ

ಭಕ್ತರಿಗೆ ಯಾವುದೇ ಅಡೆ-ತಡೆ ಇಲ್ಲದಂತೆ ದರ್ಶನಕ್ಕೆ ವ್ಯವಸ್ಥೆ



ಚಾಮುಂಡಿಬೆಟ್ಟದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರ ನೇತೃತ್ವದಲ್ಲಿ ಬುಧವಾರ ಅಧಿಕಾರಿಗಳು ಆಷಾಢ ಶುಕ್ರವಾರ ಪೂಜಾ ಸಿದ್ಧತೆಗಳ ಪರಿಶೀಲನೆ ನಡೆಸಿದರು.

ಮೈಸೂರು, ಜೂ.25(ಎಂಟಿವೈ)– ಆಷಾಢ ಶುಕ್ರವಾರ ಹಾಗೂ ಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವದಂದು ನಡೆಯುವ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು, ಜಿಲ್ಲಾಡಳಿತ ಈ ಬಾರಿ ಕೆಲ ವಿಶೇಷತೆಗಳೊಂದಿಗೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ ಎಂದು ಜಿಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಆಷಾಢ ಶುಕ್ರವಾರ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಬುಧವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಸಿದ್ಧತಾ ಕಾರ್ಯವನ್ನು ಪರಿಶೀಲಿಸಿ ನ್ಯೂನತೆ ಸರಿಪಡಿಸಿ, ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಸಲಹೆ ನೀಡಿದರು.

ವಿಶೇಷ ಪೂಜಾ ಮಹೋತ್ಸವದ ವೇಳೆ ದೇವಿಯ ದರ್ಶನಕ್ಕೆ ಭಕ್ತರಿಗೆ ಮಾಡಿರುವ ಸರದಿ ಸಾಲಿನ ವ್ಯವಸ್ಥೆ, ಬ್ಯಾರಿಕೇಡ್, ಪ್ರಸಾದ ವಿನಿಯೋಗ ಸೇರಿದಂತೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿರುವ ಸಿದ್ಧತೆಯನ್ನು ಪರಿಶೀಲಿಸಿದರು.

ಬಳಿಕ ದಾಸೋಹ ಭವನದ ಬಳಿಯಿರುವ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷ ಆಷಾಢ ಮಾಸದ ಶುಕ್ರವಾರದಂದು ಚಾಮುಂಡಿ ಬೆಟ್ಟದಲ್ಲಿ ನಡೆಯುವ ವಿಶೇಷ ಪೂಜಾ ಮಹೋತ್ಸವಕ್ಕೆ ಈ ಬಾರಿ ಜಿಲ್ಲಾಡಳಿತ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ. ಈ ಹಿಂದೆ ಆಗಿರುವ ನ್ಯೂನತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಸೂಕ್ತ ಬಿಗಿ ಭದ್ರತೆಯೊಂದಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಬೆಟ್ಟಕ್ಕೆ ಬರುವ ಭಕ್ತರು ಸರಾಗವಾಗಿ ದರ್ಶನ ಮಾಡಿ ವಾಪಸ್ಸಾಗಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಜೂ.27, ಜು.4, ಜು.11, ಜು.18 ರಂದು ಆಷಾಢ ಶುಕ್ರವಾರ, ಜು.17 ರಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತ್ಯೋತ್ಸವ ನಡೆಯಲಿದೆ. ಈ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಭಕ್ತರು ದೇವಿಯ ದರ್ಶನಕ್ಕೆ ಬರುತ್ತಾರೆ. ಅಲ್ಲದೇ ಈ ದಿನದಂದು ದರ್ಶನ ಪಡೆಯಲಾಗದವರು, ಶನಿವಾರ, ಭಾನುವಾರದಂದು ಹೆಚ್ಚಿನ ಪ್ರಮಾಣದಲ್ಲಿ ಬೆಟ್ಟಕ್ಕೆ ಆಗಮಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ ನೂಕುನುಗ್ಗಲು ಉಂಟಾಗದಂತೆ ಕಟ್ಟೆಚ್ಚರ ವಹಿಸಿ ಭಕ್ತರಿಗೆ ಅನುಕೂಲವಾಗುವಂತೆ ಜಿಲ್ಲಾಡಳಿತದ ವತಿಯಿಂದ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಭಕ್ತರಿಗೆ ಡ್ರೈ ಫ್ರೂಟ್ಸ್, ಬಾದಾಮಿ ಹಾಲು: ಧರ್ಮ ದರ್ಶನದ ಸಾಲಿನಲ್ಲಿ ಬರುವ ಹಾಗೂ ಮೆಟ್ಟಿಲು ಮೂಲಕ ಬೆಟ್ಟ ಹತ್ತುವ ಭಕ್ತರಿಗೆ ಪ್ರಾಧಿಕಾರದ ವತಿಯಿಂದ ಉಚಿತವಾಗಿ 40 ಗ್ರಾಂ ಡ್ರೈಫ್ರೂಟ್ಸ್ ಪ್ಯಾಕೆಟ್, ಬಾದಾಮಿ ಹಾಲು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಕೆಲವು ಕಡೆ ಶೌಚಾಲಯಗಳನ್ನು ತೆರೆಯಲಾಗಿದೆ. ಇದೇ ಸಾಲಿನಲ್ಲಿ ಮಾರಾಟದ ಮಳಿಗೆಗಳನ್ನು ತೆರೆಯಲಾಗಿದೆ. ಇಲ್ಲಿ ನಂದಿನಿ ಉತ್ಪನ್ನಗಳು, ಗಾಜಿನ ನೀರಿನ ಬಾಟಲ್, ಕಾಫಿ ಮಾರಾಟ ಮಾಡಲಾಗುತ್ತದೆ. ದೇವಿಯ ದರ್ಶನ ಪಡೆಯುವ ಎಲ್ಲ ಭಕ್ತರಿಗೂ ಕುಂಕುಮ ಪ್ರಸಾದ, ಮುತ್ತೈದೆಯರಿಗೆ ಮಡಿಲಕ್ಕಿ ಪ್ಯಾಕೆಟ್‌ಗಳನ್ನು ಉಚಿತವಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನೀಡಲಾಗುತ್ತದೆ ಎಂದರು.

ಮೆಟ್ಟಿಲು ಹತ್ತಿದವರಿಗೆ ನೇರ ದರ್ಶನ: ಸಾವಿರ ಮೆಟ್ಟಿಲು ಹತ್ತಿಕೊಂಡು ಬೆಟ್ಟಕ್ಕೆ ಆಗಮಿಸುವ ಭಕ್ತರಿಗೆ ನೇರ ದರ್ಶನದ ಅವಕಾಶವನ್ನು ಕಲ್ಪಿಸಲಾಗುತ್ತದೆ. ಮೆಟ್ಟಿಲ ಬಳಿಯಿಂದಲೇ ಬ್ಯಾರಿಕೇಡ್ ಅಳವಡಿಸಿ, ಪ್ರತ್ಯೇಕ ಸರತಿ ಸಾಲನ್ನು ಮಾಡಲಾಗಿದೆ. ಇಲ್ಲಿಂದ ಭಕ್ತರು ದೇವಾಲಯವನ್ನು ಪ್ರವೇಶ ಮಾಡಿ, ದೇವಿಯ ದರ್ಶನ ಮಾಡಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಪಂ ಸಿಇಒ ಯುಕೇಶ್ ಕುಮಾರ್, ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜೆ ರೂಪ, ಡಿಸಿಪಿಗಳಾದ ಮುತ್ತುರಾಜ್, ಸುಂದರ್ ರಾಜ್, ದೇವಾಲಯ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಹಾಗೂ ಇನ್ನಿತರರು ಇದ್ದರು.

ಬಸ್ ಹತ್ತುವಲ್ಲೇ ಪಾದರಕ್ಷೆ ಬಿಡಲು ಮನವಿ

ಖಾಸಗಿ ವಾಹನ ನಿಲುಗಡೆ ಮಾಡಿ, ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಬಸ್‌ನಲ್ಲಿ ಬೆಟ್ಟಕ್ಕೆ ಬರುವ ಭಕ್ತರು ತಮ್ಮ ಪಾದರಕ್ಷೆಗಳನ್ನು ಲಲಿತಮಹಲ್ ಮೈದಾನದಲ್ಲಿಯೇ ವ್ಯವಸ್ಥೆ ಮಾಡಿರುವ ಕೌಂಟರ್‌ನಲ್ಲಿಯೇ ಬಿಡಬೇಕು. ಬೆಟ್ಟ ತಲುಪಿದ ಮೇಲೆ ದೇವಾಲಯಕ್ಕೆ ಹೋಗುವ ದಾರಿ ಹಾಗೂ ದೇವಾಲಯದಿಂದ ವಾಪಸ್ಸಾಗುವ ದಾರಿ ಬೇರೆ ಬೇರೆಯಾಗಿದೆ. ಇದರಿಂದ ಬೆಟ್ಟದಲ್ಲಿ ಪಾದರಕ್ಷೆಯನ್ನು ಲಲಿತಮಹಲ್ ಮೈದಾನದ ಕೌಂಟರ್‌ನಲ್ಲಿಯೇ ಬಿಡುವುದು ಸೂಕ್ತ.

ಮುಂಜಾನೆ 5.30ರಿಂದ ರಾತ್ರಿ 10 ಗಂಟೆವರೆಗೂ ದರ್ಶನ

ಆಷಾಢ ಮಾಸದ ನಾಲ್ಕು ಶುಕ್ರವಾರವೂ ಚಾಮುಂಡೇಶ್ವರಿಗೆ ಲಕ್ಷ್ಮೀ ಅಲಂಕಾರ ಮಾಡಲಾಗುತ್ತದೆ. ವರ್ಧಂತಿ ದಿನ ಮಹಿಷ ಮರ್ಧಿನಿ ಅಲಂಕಾರ ಮಾಡಲಾಗುತ್ತದೆ. ಮುಂಜಾನೆ 3.30ರಿಂದ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ ಸೇರಿದಂತೆ ವಿವಿಧ ಪೂಜಾ ಕಾರ್ಯ ಜರುಗುತ್ತವೆ. ಬಳಿಕ ಅಲಂಕಾರ ಮಾಡಿ, ಮುಂಜಾನೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ರಾತ್ರಿ 10 ಗಂಟೆವರೆಗೂ ದರ್ಶನಕ್ಕೆ ವ್ಯವಸ್ಥೆ ಇರುತ್ತದೆ.

- ಡಾ. ಎನ್.ಶಶಿಶೇಖರ್ ದೀಕ್ಷಿತ್, ಪ್ರಧಾನ ಆಗಮಿಕ, ಚಾಮುಂಡೇಶ್ವರಿ ದೇವಾಲಯ

ಭದ್ರತೆಗೆ 1700 ಮಂದಿ ನಿಯೋಜನೆ

ಚಾಮುಂಡಿಬೆಟ್ಟಕ್ಕೆ ಆಷಾಢ ಶುಕ್ರವಾರದಂದು ಬರುವ ಭಕ್ತರ ಭದ್ರತೆಗಾಗಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಡಿಸಿಪಿ, ಎಸಿಪಿಗಳ ನೇತೃತ್ವದಲ್ಲಿ ಒಂದು ಸಾವಿರ ಪೊಲೀಸ್, 4 ಕೆಎಸ್‌ಆರ್‌ಪಿ, ಒಂದು ಮಹಿಳಾ ಕೆಎಸ್‌ಆರ್‌ಪಿ ತುಕಡಿ, ಮೌಂಟೆಡ್, ಹೋಮ್‌ಗಾರ್ಡ್ ಸೇರಿದಂತೆ 1700 ಪೊಲೀಸರು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಅಲ್ಲದೆ, ಎಐ ತಂತ್ರಜ್ಞಾನದ 100ಕ್ಕೂ ಹೆಚ್ಚು ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಲಲಿತಮಹಲ್ ಪ್ಯಾಲೇಸ್ ಮೈದಾನದ ಬಸ್ ನಿಲ್ದಾಣ, ಪಾರ್ಕಿಂಗ್ ಸ್ಥಳದಲ್ಲಿಯೂ ಬಿಗಿಭದ್ರತೆ ಒದಗಿಸಲಾಗಿದೆ.

- ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತರು.



ಪಾಸ್ ಇಲ್ಲ, ಶಿಫಾರಸ್ಸು ಪತ್ರಕ್ಕೂ ಮನ್ನಣೆಯಿಲ್ಲ

ಆಷಾಢ ಶುಕ್ರವಾರದಂದು ತಾಯಿಯ ದರ್ಶನ ಮಾಡಲು ಯಾವುದೇ ರೀತಿಯ ಪಾಸ್ ವ್ಯವಸ್ಥೆ ಇರುವುದಿಲ್ಲ. ಧರ್ಮ ದರ್ಶನ, 300 ರೂ. ಹಾಗೂ 2000 ರೂಪಾಯಿ ದರದ ಟಿಕೆಟ್ ವ್ಯವಸ್ಥೆ ಕಲ್ಪಿಸಲಾಗಿದೆ. ಯಾವುದೇ ಶಿಫಾರಸ್ಸು ಪತ್ರಗಳನ್ನು ಪರಿಗಣಿಸುವುದಿಲ್ಲ. ಶಿಷ್ಟಾಚಾರದ ವ್ಯಾಪ್ತಿಗೆ ಬರುವವರಿಗೆ ಮಾತ್ರ ಪ್ರವೇಶವಿದೆ. ಇವರನ್ನು ಹೊರತುಪಡಿಸಿ ಶುಕ್ರವಾರ, ಶನಿವಾರ, ಭಾನುವಾರದಂದು ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ಆದರೆ ಬೆಟ್ಟದಲ್ಲಿ ವಾಸ ಮಾಡುವ ಜನರು ಗುರುತಿನ ಪತ್ರ ತೋರಿಸಿ ತಿರುಗಾಡಬಹುದು ಎಂದರು.

ದರ್ಶನಕ್ಕೆ ಮೂರು ಪ್ರತ್ಯೇಕ ಲೈನ್

ಈ ಬಾರಿ ಲಲಿತ್ ಮಹಲ್ ಪ್ಯಾಲೇಸ್ ಮೈದಾನದಲ್ಲೇ ದರ್ಶನದ ಟಿಕೆಟ್ ನೀಡಲಾಗುತ್ತದೆ. 300 ರೂ., ಹಾಗೂ 2 ಸಾವಿರ ರೂ., ಮೌಲ್ಯದ ಟಿಕೆಟ್ ಪಡೆದವರನ್ನು ಹಾಗೂ ಧರ್ಮ ದರ್ಶನ ಪಡೆಯುವ ಭಕ್ತರನ್ನು ನಿಲ್ದಾಣದಿಂದಲೇ ಪ್ರತ್ಯೇಕ ಬಸ್‌ಗಳಲ್ಲಿ ಬೆಟ್ಟಕ್ಕೆ ಕರೆದೊಯ್ಯಲಾಗುತ್ತದೆ. ಇದಕ್ಕಾಗಿ ಮೂರು ಪ್ರತ್ಯೇಕ ಸಾಲುಗಳ ವ್ಯವಸ್ಥೆ ಮಾಡಲಾಗಿದೆ. ಧರ್ಮ ದರ್ಶನ ಪಡೆಯುವ ಭಕ್ತರನ್ನು ಕರೆತರುವ ಬಸ್ಸನ್ನು ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದ ಬಳಿ ನಿಲ್ಲಿಸಲಾಗುತ್ತದೆ. ಅಲ್ಲಿಂದಲ್ಲೇ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ಸರತಿ ಸಾಲಿನಲ್ಲಿ ಹೋಗಬೇಕು. 300 ರೂ. ಟಿಕೆಟ್ ಪಡೆದ ಭಕ್ತರು ಬೆಟ್ಟದ ಮೇಲಿನ ಬಸ್ ನಿಲ್ದಾಣದಲ್ಲಿ ಇಳಿದು, ಅಲ್ಲಿಂದ ಸರತಿ ಸಾಲಿನಲ್ಲಿ ಹೋಗಬೇಕು. 2000 ರೂ. ಟಿಕೆಟ್ ಪಡೆದವರನ್ನು ಮಹಿಷಾಸುರ ಪ್ರತಿಮೆಯ ಮುಂಭಾಗ ಬಸ್‌ನಿಂದ ಇಳಿಸಿ, ಅಲ್ಲಿಂದಲೆ ಪ್ರತ್ಯೇಕ ಸಾಲಿನಲ್ಲಿ ದೇವಾಲಯಕ್ಕೆ ತೆರಳಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಚಾ.ಬೆಟ್ಟದಲ್ಲಿ ಭಕ್ತರು ಪ್ರಸಾದ ಹಂಚುವಂತಿಲ್ಲ

ಆಷಾಢ ಮಾಸದ ಶುಕ್ರವಾರ ಹಾಗೂ ವರ್ಧಂತಿ ದಿನದಂದು ಹರಕೆ ಹೊತ್ತ ಭಕ್ತರು ಚಾಮುಂಡಿಬೆಟ್ಟಕ್ಕೆ ಬಂದು ಪ್ರಸಾದ ವಿನಿಯೋಗಿಸುವ ಪದ್ಧತಿ ಅನುಸರಿಸುತ್ತಿದ್ದರು. ಆದರೆ, ಈ ಬಾರಿ ಚಾಮುಂಡಿಬೆಟ್ಟದಲ್ಲಿ ಭಕ್ತರಿಗೆ ಪ್ರಸಾದ ಹಂಚಲು ಅವಕಾಶವಿಲ್ಲ. ಬೆಟ್ಟದ ತಪ್ಪಲಿನಲ್ಲಿಯೇ ಪ್ರಸಾದ ವಿತರಿಸಬಹುದಾಗಿದೆ.



ಪ್ರಾಧಿಕಾರದಿಂದಲೇ ಅನ್ನ ಸಂತರ್ಪಣೆ

ಕಳೆದ ಹಲವು ವರ್ಷಗಳಿಂದ ಚಾಮುಂಡಿಬೆಟ್ಟದಲ್ಲಿ ಆಷಾಡ ಶುಕ್ರವಾರದಂದು ವಿವಿಧ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆ ಮಾಡಲಾಗುತ್ತಿತ್ತು. ಚಾಮುಂಡೇಶ್ವರಿ ಸೇವಾ ಸಮಿತಿ ಸೇರಿದಂತೆ ವಿವಿಧ ಸಂಸ್ಥೆಗಳು ಒಂದೊಂದು ವಾರದಲ್ಲೂ ಅನ್ನ ದಾಸೋಹದ ವ್ಯವಸ್ಥೆ ಮಾಡುತ್ತಿದ್ದವು. ಆದರೆ, ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದಲೆ ಪ್ರಸಾದ ವ್ಯವಸ್ಥೆ ಮಾಡಲಾಗುತ್ತಿದೆ. ಮೊದಲ ವಾರ ಜೂ.27ರಂದು ಪ್ರಾಧಿಕಾರ ಅನ್ನ ದಾಸೋಹ ವ್ಯವಸ್ಥೆ ಮಾಡಲಿದ್ದು, ಅದಕ್ಕೆ ಪ್ರತಿಕ್ರಿಯೆ ನೋಡಿ ಮುಂದಿನ ವಾರಗಳಲ್ಲೂ ಪ್ರಾಧಿಕಾರದ ವತಿಯಿಂದ ಅನ್ನದಾಸೋಹ ಮುಂದುವರೆಸಬೇಕೋ ಎನ್ನುವುದನ್ನು ನಿರ್ಧರಿಸಲಾಗುತ್ತದೆ.

ದಾಸೋಹದ ಸ್ಥಳ ಬದಲಾವಣೆ: ಕಳೆದ ಎರಡು ವರ್ಷಗಳಿಂದ ಬೆಟ್ಟದ ಮೇಲಿರುವ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ಭಕ್ತರಿಗೆ ಅನ್ನ ದಾಸೋಹದ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಮಹಿಷಾಸುರ ಪ್ರತಿಮೆಯಿಂದ 500 ಮೀಟರ್ ದೂರದಲ್ಲಿರುವ ಅರಣ್ಯ ಇಲಾಖೆಯ ಮಾಹಿತಿ ಕೇಂದ್ರದ ಪಕ್ಕದ ಮೈದಾನದಲ್ಲಿ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಒಂದು ಸಾವಿರ ಮಂದಿ ಒಂದೇ ಬಾರಿ ಪ್ರಸಾದ ಸೇವಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

ದೇವಾಲಯದ ಪ್ರಾಂಗಣದಲ್ಲಿ ಫೋಟೋ ವಿಡಿಯೋ ಚಿತ್ರೀಕರಣ ನಿಷೇಧ: ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಾಂಗಣದಲ್ಲಿ ಇನ್ನು ಮುಂದೆ ವಿಡಿಯೋ ಚಿತ್ರೀಕರಣ ಕಡ್ಡಾಯವಾಗಿ ನಿಷೇದಿಸಲಾಗಿದೆ. ಗರ್ಭಗುಡಿ ಸಮೀಪ ದೇವಾಲಯ ಪ್ರಾಂಗಣದಲ್ಲಿ ವಿಡಿಯೋ, ಫೋಟೋ, ಸೆಲ್ಫಿ ತೆಗೆದುಕೊಳ್ಳುವುದು. ರೀಲ್ಸ್ ಮಾಡುವುದಕ್ಕೆ ಕಡಿವಾಣ ಹಾಕಲಾಗಿದ್ದು, ನಿಯಮ ಉಲ್ಲಂಘಿಸಿ ವಿಡಿಯೋ ಮಾಡಲು ಮುಂದಾದರೆ ಮೊಬೈಲ್ ಕಿತ್ತುಕೊಳ್ಳಲು ಪ್ರಾಧಿಕಾರದ ಅಧಿಕಾರಿಗಳು ನಿರ್ಧರಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಿಎನ್‌ಎ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕುಬೇರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕುಬೇರಾ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬುಲೆಟ್ (ಕ) + ಭಗೀರಥ (ಕ)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗ್ರೇಟರ್ ಮೈಸೂರು ರಚನೆಯಾದರೆ ಇಲವಾಲ ಸೇರಿ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ

- ಇಲವಾಲದಲ್ಲಿ 2 ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಟಿಡಿ
- ನಾನು ಅಂದು ನೆಟ್ಟಂತಹ ಸಸಿಗಳು ಈಗ ಮರಗಳಾಗಿ ನೆರಳು ನೀಡುತ್ತಿವೆ

ಮೈಸೂರು, ಜೂ.25(ಬಿಎಲ್‌ಯು)– ಮುಂದಿನ ದಿನಗಳಲ್ಲಿ ಮೈಸೂರು ನಗರ ಪಾಲಿಕೆ ಗ್ರೇಟರ್ ಮೈಸೂರು ಆಗಿ ರಚನೆಯಾಗಲಿದ್ದು, ಇಲವಾಲ ಸೇರಿದಂತೆ ಇತರೆ ಹಳ್ಳಿಗಳು ಮೈಸೂರು ನಗರಕ್ಕೆ ಸೇರುವ ಕಾರಣ ಸುತ್ತಲಿನ ಗ್ರಾಮೀಣ ಪ್ರದೇಶಗಳು ಸಮಗ್ರವಾಗಿ ಅಭಿವೃದ್ಧಿಯಾಗಲಿವೆ ಎಂದು ಶಾಸಕ ಜಿ.ಟಿ.ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಇಲವಾಲದಲ್ಲಿ ಇಂದು ಡಾ.ಚಂದ್ರಶೇಖರ್ ಫೌಂಡೇಷನ್ ಮತ್ತು ಕಾವೇರಿ ಸಮೂಹ ವಿದ್ಯಾಸಂಸ್ಥೆಗಳು ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ 2 ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹವಾಮಾನ ಬದಲಾವಣೆಯಿಂದ ಬಹಳಷ್ಟು ವ್ಯತ್ಯಾಸ ಕಾಣುತ್ತಿದ್ದು, ಇದರಿಂದ ಹಲವು ಪರಿಣಾಮ ಎದುರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆ ನಮ್ಮ ಮೊದಲ ಆದ್ಯತೆಯಾಗಬೇಕು ಎಂದು ಹೇಳಿದರು.

ನಾನು ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗಿದ್ದಾಗ ಇಲವಾಲದಿಂದ ಮನುಗನಹಳ್ಳಿ ಕಡೆಗೆ ಹಾಗೂ ಕುಶಾಲನಗರದವರೆಗೆ ಗಿಡಗಳನ್ನು ನೆಟ್ಟಿದ್ದೆ. ಇಂದು ಅವು ಬೆಳೆದು ದೊಡ್ಡದಾಗಿದ್ದು, ಜನರಿಗೆ ನೆರಳು ನೀಡುತ್ತಿವೆ. ಪಕ್ಷಿ ಸಂಕುಲಕ್ಕೆ ಆಶ್ರಯ ತಾಣವಾಗಿದೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ನಾನು ಸಹಕಾರ ಸಚಿವನಾಗಿದ್ದಾಗ ಸಾಲು ಮರದ ತಿಮ್ಮಕ್ಕನನ್ನು ಕರೆದು ಒಂದು ಲಕ್ಷ ಗಿಡಗಳನ್ನು ಒಂದೇ ದಿನ ನೆಡಿಸಿದ್ದೆ. ಶಾಲಾ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ಆಸ್ಪತ್ರೆಗಳು, ಉದ್ಯಾನವನಗಳಲ್ಲಿ ಗಿಡಗಳನ್ನು ನೆಡಲಾಗಿತ್ತು. ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ ಈ ಗಿಡಗಳನ್ನು ಪೋಷಿಸಿ ಬೆಳೆಸಲು ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಹಣ ಕೂಡ ತಂದಿದ್ದೆ ಎಂದರು. ಮನುಷ್ಯ ಉತ್ತಮವಾಗಿ ಆರೋಗ್ಯವಾಗಿರಲು ಸುತ್ತಲಿನ ಪರಿಸರ ಬಹಳ ಮುಖ್ಯ ಮರ ಶೀತಾಂಶವನ್ನು ಹೀರಿಕೊಂಡು ತಂಪಾದ ವಾತಾವರಣ ನೀಡುತ್ತದೆ. ಆದ್ದರಿಂದ ಪ್ರತಿಯೊಬ್ಬರು ಗಿಡ ಮರಗಳನ್ನು ಬೆಳೆಸಬೇಕು ಎಂದು ಸಲಹೆ ನೀಡಿದ ಅವರು, ಸಹಕಾರ ಸಂಘಗಳಿಂದ ಕೂಡ ವಿಶ್ವ ಪರಿಸರ ದಿನಾಚರಣೆ ಮಾಡಲಾಗುತ್ತಿದ್ದು, ಗಿಡ ನೆಡುವ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಈ ಸಂಬಂಧ ಸಹಕಾರ ಇಲಾಖೆ ಸಹಕಾರ ಸಂಘಗಳಿಗೆ ಸೂಚನೆ ನೀಡಿದೆ ಎಂದು ತಿಳಿಸಿದರು.

ಒಂದು ಕಾಲದಲ್ಲಿ ಹತ್ತಾರು ಎಕರೆ ಇದ್ದವರು ಆಸ್ತಿ ಮಾರಾಟ ಮಾಡಿ ಐಷರಾಮಿಯಾಗಿ ಮದುವೆ ಮಾಡಿ ಈಗ ಬರಿಗೈನಲ್ಲಿ ಇದ್ದಾರೆ. ಆದ ಕಾರಣ ದುಬಾರಿ ಮದುವೆ ಮಾಡದೆ ಅದೇ ಹಣವನ್ನು ತಮ್ಮ ಮಕ್ಕಳ ಹೆಸರಿನಲ್ಲಿ ಬ್ಯಾಂಕಿನಲ್ಲಿ ಠೇವಣಿ ಇಡಬೇಕು ಎಂದು ಜಿ.ಟಿ.ದೇವೇಗೌಡರು ಕಿವಿಮಾತು ಹೇಳಿದರು.

ಡಾ.ಚಂದ್ರಶೇಖರ್ ಅವರು ಕಾವೇರಿ ಆಸ್ಪತ್ರೆ ಸ್ಥಾಪನೆ ಮಾಡಿದ ದಿನದಿಂದ ಆರೋಗ್ಯ ಸೇವೆ ಮಾಡಿಕೊಂಡು ಬರುತ್ತಿದ್ದಾರೆ. ಈಗ ಆರೋಗ್ಯದ ಜೊತೆಗೆ ಶಿಕ್ಷಣ ಸಂಸ್ಥೆ ಸ್ಥಾಪಿಸುವ ಮೂಲಕ ಶಿಕ್ಷಣ ಕ್ಷೇತ್ರಕ್ಕೂ ಆದ್ಯತೆ ನೀಡಿದ್ದಾರೆ. ಮುಂದೆ ಇಲವಾಲದಲ್ಲಿ ಇಂಜಿನಿಯರಿಂಗ್ ಕಾಲೇಜು ತೆರೆಯಲು ಮುಂದಾಗಿರುವುದು ಈ ಭಾಗದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ಜಿಟಿಡಿ ಹೇಳಿದರು.

ನಗರ ಪ್ರದೇಶದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿದ್ದರೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯುತ್ತಿರಲಿಲ್ಲ. ಆದರೆ ಈಗ ಇವರು ಇಲ್ಲಿ ಇಂಜಿನಿಯರಿಂಗ್ ಕಾಲೇಜು ತೆರೆದರೆ ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಹಾಗೂ ಕೆಆರ್‌ಎಸ್ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ ಸಾಮಾಜಿಕ ಕ್ಷೇತ್ರಗಳಲ್ಲಿ ಕೂಡ ಕೆಲಸ ಮಾಡುತ್ತಿದ್ದಾರೆ. ದೊಡ್ಡ ವೈದ್ಯರಾದರೂ ಅಹಂಕಾರವಿಲ್ಲದೆ ಸರಳತೆಯಿಂದ ಸಂಸ್ಥೆ ಕಟ್ಟಿದ್ದಾರೆ ಎಂದು ಹೇಳಿದರು.

ಅರಣ್ಯ ಇಲಾಖೆ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಲಕ್ಷ್ಮಣ್, ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ.ಚಂದ್ರಶೇಖರ್, ಡಾ.ಸರಳ ಚಂದ್ರಶೇಖರ್, ಆಡಳಿತಾಧಿಕಾರಿ ಡಾ.ಬಿ.ಶ್ರೀಕಂಠಸ್ವಾಮಿ, ಸಂಸ್ಥೆಯ ಅಶೋಕ್, ರಾಜು ಹಾಗೂ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.



ಮೈಸೂರಿನ ಇಲವಾಲದಲ್ಲಿ ಡಾ.ಚಂದ್ರಶೇಖರ್ ಫೌಂಡೇಷನ್ ಮತ್ತು ಕಾವೇರಿ ಸಮೂಹ ವಿದ್ಯಾಸಂಸ್ಥೆಗಳು ಬುಧವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ 2 ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ಚಾಮುಂಡಿಬೆಟ್ಟದ ಮೆಟ್ಟಿಲುಗಳ ಸ್ವಚ್ಛತೆ



ಆಷಾಢ ಮಾಸದ ಪೂಜಾ ಮಹೋತ್ಸವ ಹಿನ್ನೆಲೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಚಾಮುಂಡಿಬೆಟ್ಟದ ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಿದರು.

ಮೈಸೂರು, ಜೂ.25(ಎಂಟಿವೈ)– ಆಷಾಢ ಮಾಸದ ಪೂಜಾ ಮಹೋತ್ಸವದ ಅಂಗವಾಗಿ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು, ಚಾಮುಂಡಿಬೆಟ್ಟದ ಮೆಟ್ಟಿಲುಗಳನ್ನು ಸ್ವಚ್ಛಗೊಳಿಸುವ ಅಭಿಯಾನ ನಡೆಸಿದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೆಟ್ಟಿಲುಗಳ ಬಳಿ ಬುಧವಾರ ಬೆಳಗ್ಗೆ ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಆಷಾಢ ಮಾಸದಲ್ಲಿ ಶುಕ್ರವಾರದಂದು ಚಾಮುಂಡಿ ಬೆಟ್ಟದಲ್ಲಿ ನಡೆಯುವ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುವ ಭಕ್ತರ ಸಂಖ್ಯೆ ಹೆಚ್ಚಾಗಿದೆ. ನಮ್ಮ ಸಂಪ್ರದಾಯದಲ್ಲಿ ಆಷಾಢ ಮಾಸಕ್ಕೂ ಮಹತ್ವವಿದ್ದು, ಈ ಹಿನ್ನೆಲೆಯಲ್ಲಿ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಪ್ರತಿ ವರ್ಷವೂ ಚಾಮುಂಡಿಬೆಟ್ಟದ ಮೆಟ್ಟಿಲು ಸ್ವಚ್ಛತೆ ನಡೆಸುತ್ತಿರುವುದು ಶ್ಲಾಘನೀಯ ಎಂದರು. ಬಳಿಕ 50ಕ್ಕೂ ಹೆಚ್ಚು ಮಂದಿ ಬೆಟ್ಟದ ಪಾದದಿಂದ ದೇವಾಲಯದ ಸಮೀಪದವರೆಗೂ ಇರುವ 1101 ಮೆಟ್ಟಿಲುಗಳನ್ನು ಗುಡಿಸಿ, ಸ್ವಚ್ಛಗೊಳಿಸಿದರು.

ಈ ಸಂದರ್ಭದಲ್ಲಿ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ ಬಸವರಾಜ್, ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಮಹೇಶ್, ಉಪಾಧ್ಯಕ್ಷ ಎಂ.ಎಸ್.ಸುರೇಶ್‌ಕುಮಾರ್, ಪದಾಧಿಕಾರಿಗಳಾದ ಎಂ.ರವಿಕುಮಾರ್, ಪಳನಿ, ಚಂದ್ರೇಗೌಡ, ರುದ್ರಸ್ವಾಮಿ, ಮಹಮದ್ ಜಕೀರ್ ಹುಸೇನ್, ಹೆಬ್ಬಾಳ್ ಯೋಗೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

ಮೈಸೂರು, ಜೂ. 25– ಮೈಸೂರಿನ ಕಲಾಸಂಸ್ಥೆಯ ಆಶ್ರಯದಲ್ಲಿ ಜೂ. 28 ರಂದು ಸಂಜೆ 6.30ಕ್ಕೆ ಸುರುಚಿ ರಂಗ ಮನೆಯಲ್ಲಿ ಕುಮಾರಿ ಲಹರಿ ಡೋಂಗ್ರೆ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯನ್ನು ಕುವೆಂಪು ನಗರದ ಸುರುಚಿ ರಂಗಮನೆಯಲ್ಲಿ ಆಯೋಜಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ರತ್ನತೇಜ–ಪಿಟೀಲು, ಮಾಸ್ಟರ್ ಶ್ರೀವರ್ಧನ್ ಡೋಂಗ್ರೆ–ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ.



ಶ್ರೀ ಉಮೇಶ್
ರವರಿಗೆ
ಜನ್ಮದಿನದ ಶುಭಾಶಯಗಳು
ಬಿಜೆಪಿ ಯುವಮೋರ್ಚಾ ಕಾರ್ಯದರ್ಶಿ ಮೈಸೂರು ನಗರ
ಶುಭಕೋರುವವರು :
ಉಮೇಶ್ ಗೆಳೆಯರ ಬಳಗ,
ಮೈಸೂರು ನಗರ
VISMAYA
8050302424